
ಶ್ರೀ ಗೌಡಪಾದಾಚಾರ್ಯ ವಿರಚಿತ

# ಸಾಂಖ್ಯ ಕಾರಿಕಾ ಭಾಷ್ಯ



ॐ

॥ ಶ್ರೀಮನ್ನಾರಾಯಣಾಯ ನಮಃ ॥

॥ ಶ್ರೀ ಗುರುಭ್ಯೋ ನಮಃ ॥

ಶ್ರೀ ಮದೀಶ್ವರಕೃಷ್ಣ ವಿರಚಿತ

# ಸಾಂಖ್ಯಕಾರಿಕಾ

ಶ್ರೀ ಗೌಡಪಾದಾಚಾರ್ಯ ವಿರಚಿತ ಭಾಷ್ಯದ
ಕನ್ನಡ ಅನುವಾದ ಸಹಿತ

ಅನುವಾದ: ಮಹಾಮಹೋಪಾಧ್ಯಾಯ
ವಿದ್ವಾನ್ ಎನ್. ರಂಗನಾಥ ಶರ್ಮಾ

ಗ್ರಂಥ ಸಂಗ್ರಹ
ಯು. ಹರೀಶ ಪಿ. ಶೆಣೈ

॥ ಶ್ರೀಕೃಷ್ಣಾರ್ಪಣಮಸ್ತು ॥


ಪುಟಗಳು : 34 + 42

ಪುಸ್ತಕ ಬಿಡುಗಡೆ : ಶ್ರೀ ಸಂಸ್ಥಾನ ಗೌಡಪಾದಾಚಾರ್ಯ ಕೈವಲ್ಯ ಮಠಾಧೀಶರಾದ ಶ್ರೀಮದ್ ಶಿವಾನಂದ ಸರಸ್ವತೀ ಸ್ವಾಮೀಜಿಯವರ ದಿವ್ಯ ಹಸ್ತಗಳಿಂದ


ಮುದ್ರಕರು : ಮಣಿಪಾಲ ಪ್ರೆಸ್ ಲಿಮಿಟೆಡ್, ಮಣಿಪಾಲ

ಮುಖಪುಟ : ಮಾಸ್ಟರ್ ಯು. ಪಾಂಡುರಂಗ ಹರೀಶ ಶೆಣೈ
ವಿನ್ಯಾಸ : ಶ್ರೀ ಬಿಳಗಿ ರಾಮಚಂದ್ರ ಭಟ್, ಉಡುಪಿ

ಪ್ರಕಾಶಕರು : ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್
ಒಂದನೇ ಮಹಡಿ, ''ವಾಸುದೇವ ಸದನ''
ಶ್ರೀ ವೆಂಕಟರಮಣ ದೇವಸ್ಥಾನ ರಸ್ತೆ
ತೆಂಕಪೇಟೆ, ಉಡುಪಿ – 576 101
ಫೋನ್: (0820) 2520815



ಶ್ರೀ ಯು. ವಾಸುದೇವ ಜೋಗಪ್ಪ ಶೆಣೈಯವರ ಮನೆತನದ
ಪ್ರಧಾನ ದೇವರಾದ ಶ್ರೀ ವಿಠಲ ರುಖುಮಾಯಿ ದೇವರು



18-3-1892 5-3-1960

ದಿ| ಯು. ವಾಸುದೇವ ಜೋಗಪ್ಪ ಶೆಣ್ಯೆ



17-4-1896 21-12-1976

ದಿ| ಯು. ಪುಂಡಲೀಕ ಜೋಗಪ್ಪ ಶೆಣ್ಯೆ



2-8-1928 10-2-1994

ದಿ| ಯು. ಪಾಂಡುರಂಗ ಎ. ಶೆಣ್ಯೆ

ಸಂಸ್ಥಾಪಕರು

ಶ್ರೀ ಯು. ಪುಂಡಲೀಕ ಶೆಣ್ಯೆ ಮೆಮೋರಿಯಲ್ ಟ್ರಸ್ಟ್

## ಶ್ರೀ ಸಂಸ್ಥಾನ ಗೌಡಪಾದಾಚಾರ್ಯ ಕೈವಲ್ಯ ಮಠದ ಆರಾಧ್ಯ ದೇವರು



ಮೇಲಿನ ಸಾಲಿನಲ್ಲಿ ರುಕ್ಮಿಣಿ, ಸತ್ಯಭಾಮ ಸಹಿತ ಶ್ರೀಕೃಷ್ಣ.
ಎರಡನೆಯ ಸಾಲಿನಲ್ಲಿ ಶ್ರೀವಿಷ್ಣು, ಗಣಪತಿ, ಪ್ರಧಾನ ದೇವರಾದ ಶ್ರೀ ಭವಾನಿ ಶಂಕರ, ಬಾಣಲಿಂಗ, ಶ್ರೀ ವಿಷ್ಣು.
ಮೂರನೆಯ ಸಾಲಿನಲ್ಲಿ ಪಚ್ಚೆಯ ಶಿವಲಿಂಗ, ಶ್ರೀವಿಷ್ಣು, ಶ್ರೀ ಗಣಪತಿ, ಶಿವಪಂಚಾಯತನ
ದ್ವಿ ವಿಗ್ರಹ ಸಮೂಹ, ಶ್ರೀ ವೇದವ್ಯಾಸ, ಶ್ರೀ ಮುದ್ದುಕೃಷ್ಣ, ಶ್ರೀಚಕ್ರ, ಉಮಾಮಹೇಶ್ವರ.
ಕೊನೆಯ ಸಾಲಿನಲ್ಲಿ ಶ್ರೀದೇವಿ, ಭೂದೇವಿ ಸಹಿತ ಶ್ರೀ ವೆಂಕಟರಮಣ, ಲಿಂಗರೂಪಿ ಪ್ರಧಾನ
ಶ್ರೀ ಭವಾನಿಶಂಕರ, ಸಾಲಿಗ್ರಾಮ, ಶ್ರೀಕೋದಂಡರಾಮ



ವಿಶ್ವಸಾರಸ್ವತ ಗುರು ಶ್ರೀ ಗೌಡಪಾದಾಚಾರ್ಯ

H. H. SHRIMAD SUDHINDRA THIRTHA SWAMI

SHREE KASHI MATH SAMSTHAN

VARANASI

S.L.V. Temple
Camp Vashi
Navi Mumbai

Date 1.8.2005

Ref : Hearty Blessings To:-

'Samkya Karika Bhashy'

By Sri Gowd Padaacharya – being published by Sri K. Pundalik Shenoy memmorial Trust – 1st Floor Vasudeva Sadan Udupi-1.

The knowledge of Saankhy – Darsan which adopted for living makes human life happy. This book be read and adhered by many, many persons for happy life, is prayed at the Lotus feet of Sri Vyasa Raghupati.

Our hearty Blessing wishing success in printing and publishing this book,

[signature]

your patram and Kanik of Rs 105 is acknowledge.

श्री श्री जगद्गुरु शङ्कराचार्य महासंस्थानम्,
दक्षिणाम्नाय श्री शारदापीठम्, शृङ्गेरी
Sri Sri Jagadguru Shankaracharya Mahasamstanam
Dakshinamnaya Sri Sharada Peetham, Sringeri - 577 139.

Ref · 518/ 3849 Camp : SRINGERI Date : 13-07-08

ಜಗದ್ಗುರುಶ್ರೀಮಚ್ಛಂಕರಭಗವತ್ಪಾದಾಚಾರ್ಯರ ಪರಮಗುರುಗಳಾದ ಶ್ರೀಗೌಡಪಾದಾಚಾರ್ಯರಿಗೆ ವೇದಾಂತದರ್ಶನದಲ್ಲಿ ಅತ್ಯುನ್ನತವಾದಸ್ಥಾನವಿದೆ. ಜೀವನ್ಮುಕ್ತಾಗ್ರೇಸರರಾದ ಶ್ರೀಶುಕಮಹರ್ಷಿಗಳ ಶಿಷ್ಯರೆಂಬ ಹೆಗ್ಗಳಿಕೆಗೆ ಪಾತ್ರರಾದ ಆಮಹನೀಯರು ಮಾಂಡೂಕ್ಯೋಪನಿಷತ್ತಿಗೆ ವಿವರಣರೂಪವಾದಕಾರಿಕೆಗಳನ್ನು ಬರೆದು ಅಜರಾಮರಕೀರ್ತಿಶಾಲಿಗಳಾದರು. ಶ್ರೀಶಂಕರಭಗವತ್ಪಾದರು ಆಕಾರಿಕೆಗಳಿಗೆ ಭಾಷ್ಯವನ್ನು ಬರೆದುದ್ದಲ್ಲದೇ ತಮ್ಮಬ್ರಹ್ಮಸೂತ್ರಭಾಷ್ಯದಲ್ಲಿಯೂ ಆ ಕಾರಿಕೆಗಳನ್ನು ಉದಹರಿಸಿರುತ್ತಾರೆ. ಅದನ್ನು ಉದಹರಿಸುವಾಗ 'ತಥಾಚೋಕ್ತಂ ವೇದಾಂತಾರ್ಥಸಂಪ್ರದಾಯವಿದ್ಭಿರಾಚಾರ್ಯೈಃ' ಎಂದು ಅತ್ಯಂತಗೌರವದಿಂದ ಗೌಡಪಾದರನ್ನು ಉಲ್ಲೇಖಿಸಿರುತ್ತಾರೆ. ಅಂತಹ ಮಹನೀಯರಾದ ಗೌಡಪಾದಾಚಾರ್ಯರು ಈಶ್ವರಕೃಷ್ಣವಿರಚಿತ ಸಾಂಖ್ಯಕಾರಿಕೆಗಳಿಗೆ ವ್ಯಾಖ್ಯೆಯನ್ನು, ಸುಭಗೋದಯಸ್ತೋತ್ರಮುಂತಾದ ಕೃತಿಗಳನ್ನು ರಚಿಸಿದರೆಂಬ ಪ್ರಸಿದ್ಧಿಯಿದೆ.

ಪ್ರಕೃತ ಆ ಎರಡುಗ್ರಂಥಗಳನ್ನು ಕನ್ನಡಾನುವಾದಸಹಿತವಾಗಿ ಶ್ರೀಯುತ ಹರೀಶ.ಪಿ.ಶೆಣೈಯವರು ಪ್ರಕಾಶಪಡಿಸುತ್ತಿರುವುದು ಅಭಿನಂದನೀಯವಾಗಿದೆ. ಪ್ರಸಿದ್ಧವಿದ್ವಾಂಸರಿಂದ ಅನುವಾದಿಸಲ್ಪಟ್ಟ ಈ ಗ್ರಂಥಗಳು ಆಸಕ್ತರಿಗೆ ಉಪಾದೇಯವಾಗಿವೆ.

ಶ್ರೀಶಾರದಾಚಂದ್ರಮೌಳೀಶ್ವರಕೃಪೆಯು ಪ್ರಕಾಶಕರಿಗೂ ಅನುವಾದಕರಿಗೂ ಓದುಗರಿಗೂ ಸದಾ ಇರಲೆಂದು ಶ್ರೀಜಗದ್ಗುರುಮಹಾಸ್ವಾಮಿಗಳವರು ಆಶೀರ್ವದಿಸಿರುತ್ತಾರೆ.

ಇಂತು,

Phone 08265-250123 / 250192 Fax . 08265-250792
E-mail info@sringerisharadapeetham.org Visit us · www.sringerisharadapeetham.org

|| Shree Bhavanishankar Prasanna ||

**Shree Saunsthan Gaudpadacharya Kavle Math**

**Shree Kavle Math, Kavale, Ponda, GOA - 403 401**

Tel : 0832 - 2312049 / 6935775

॥ಶ್ರೀ॥

ಮುಕ್ಕಾಂ : ಶ್ರೀ ಕೈವಲ್ಯ ಮಠ ಶ್ರೀ ಕ್ಷೇತ್ರ ಗೋಕರ್ಣ
ದಿನಾಂಕ : 22-08-2008

ಅಸ್ಮದತ್ಯಂತ ಪ್ರೇಮಾಸ್ಪದೀಭೂತ ಶಿಷ್ಯವರ್ಯ ಉಡುಪಿನಿವಾಸೀ
ಶ್ರೀ ಹರೀಶ ಪಾಂಡುರಂಗ ಶೆಣೈ ಇವರಿಗೆ

ಶ್ರೀಮನ್ನಾರಾಯಣ ಸ್ಮರಣೆ ಪೂರ್ವಕ ಶುಭಾಶೀರ್ವಾದಗಳೊಂದಿಗೆ ಸಂದೇಶ ।

"ಸಾಂಖ್ಯಕಾರಿಕಾ" ಶ್ರೀಮದೀಶ್ವರ ಚಂದ್ರ ವಿರಚಿತ ಗ್ರಂಥ. ಇದಕ್ಕೆ ಶ್ರೀ ಸಂಸ್ಥಾನದ ಆದಿಗುರು ಪೂಜ್ಯಪಾದ ಶ್ರೀ ಗೌಡಪಾದಾಚಾರ್ಯರು ಭಾಷ್ಯವನ್ನು ಬರೆದರು. ದುರ್ಲಭವಾದ ಈ "ಸಾಂಖ್ಯಕಾರಿಕಾ ಭಾಷ್ಯ" ವನ್ನು ಶ್ರಮಪಟ್ಟು ಪಡೆದು ಮೂಲ ಸಂಸ್ಕೃತ ಶ್ಲೋಕಗಳಿಗೆ ಕನ್ನಡದಲ್ಲಿ ಅನುವಾದ ಮಾಡಿಸಿಕೊಂಡು ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್‌ನ ವತಿಯಿಂದ ತಾವು ಪ್ರಕಾಶನಗೊಳಿಸುತ್ತಿರುವ ವಿಷಯ ತಿಳಿದು ಮಹದಾನಂದವಾಯಿತು. ಈ ಸತ್ಕಾರ್ಯವು ಯಶಸ್ವಿಯಾಗಲಿ, ನಿಮಗೆ ಹಾಗೂ ನಿಮ್ಮ ಕುಟುಂಬದವರೆಲ್ಲರಿಗೂ ದೀರ್ಘಾಯುರಾರೋಗ್ಯ ಲಾಭವಾಗಿ ನಿರಂತರ ಕಲ್ಯಾಣಭಿವೃದ್ಧಿಯಾಗಲೆಂದು ಶ್ರೀ ಸಂಸ್ಥಾನಾರಾಧ್ಯದೇವ ಶ್ರೀ ಭವಾನೀಶಂಕರ ಸನ್ನಿದಿಯಲ್ಲಿ ಪ್ರಾರ್ಥಿಸಿ ಶುಭಾಶೀರ್ವಾದಗಳು.

ಶ್ರೀಮತ್ ಶಿವಾನಂದಸರಸ್ವತೀ ಸ್ವಾಮೀಜಿ

# Sri Ramakrishna Ashrama

Yadavagiri, Mysore 570 020

**Phone : 0821-2417444, 2412424 • Fax 0821-2412800**

e-mail vivekaprabha@eth.net


03.08.2008

**ಆತ್ಮೀಯ ಹರೀಶ್ ಪಿ. ಶಣೈ ಅವರಿಗೆ,**

**ಶುಭಾಶಯಗಳು.**

ಜಗತ್ತಿನ ಪ್ರಪ್ರಥಮ ಮನಶ್ಶಾಸ್ತ್ರಜ್ಞನು ಕಪಿಲಮುನಿ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಸಾಂಖ್ಯ ತತ್ತ್ವವು ಒಂದು ವೈದಿಕದರ್ಶನವಾದರೂ ಸ್ವತಂತ್ರ ವಿಚಾರಧಾರೆ ಅದರಲ್ಲಿ ಎದ್ದು ಕಾಣುತ್ತದೆ. ಅದರ ಸೃಷ್ಟಿತತ್ತ್ವವು ಅತ್ಯಾಧುನಿಕ ವೈಜ್ಞಾನಿಕ ಸೃಷ್ಟಿಕಲ್ಪನೆಗಳಿಗೆ ಸಂವಾದಿಯಾಗಿದೆ. ಸಾಂಖ್ಯ-ಯೋಗದಲ್ಲಿ ಬರುವ ಮನಶ್ಶಾಸ್ತ್ರೀಯ ಭಾವನೆಗಳು ಆಧುನಿಕ ಮನಶ್ಶಾಸ್ತ್ರಜ್ಞರನ್ನೂ ಬೆರಗುಗೊಳಿಸುತ್ತವೆ.

ಸಾಂಖ್ಯದರ್ಶನದ ಪ್ರಮುಖ ಆಕರಗ್ರಂಥವಾದ ಈಶ್ವರಕೃಷ್ಣರ "ಸಾಂಖ್ಯಕಾರಿಕಾ" ಗ್ರಂಥವು ಗೌಡಪಾದಾಚಾರ್ಯರ ಭಾಷ್ಯದೊಂದಿಗೆ ಕನ್ನಡದಲ್ಲಿ ಬರುತ್ತಿರುವುದು ಬಹುಶಃ ಇದೇ ಪ್ರಥಮ ಬಾರಿ. ಶ್ರೀ ವಿದ್ವಾನ್ ರಂಗನಾಥ ಶರ್ಮ ಅವರು ತಮ್ಮ 94ನೇ ವಯಸ್ಸಿನಲ್ಲಿ ಕೆಲವೇ ತಿಂಗಳುಗಳೊಳಗೆ ಇದನ್ನು ಕನ್ನಡಕ್ಕೆ ಅನುವಾದಿಸಿಕೊಟ್ಟರೆಂದು ತಿಳಿದು ಆಶ್ಚರ್ಯವಾಯಿತು. ವಿದ್ವತ್ಪೂರ್ಣವೂ ಸರಳವೂ ಆದ ಪ್ರಸ್ತಾವನೆಯನ್ನೂ ಅವರು ಬರೆದಿರುತ್ತಾರೆ. ಅವರ ಜ್ಞಾನೋಪಾಸನೆಯ ಉತ್ಸಾಹವನ್ನು ನಿಜಕ್ಕೂ ಮೆಚ್ಚತಕ್ಕದ್ದು.

ಗೌಡಪಾದಾಚಾರ್ಯರನ್ನು ಕುರಿತ ಸಂಶೋಧನೆಯಲ್ಲಿ ನೀವು ತೋರಿಸುತ್ತಿರುವ ಆಸಕ್ತಿ ಅತ್ಯಂತ ಶ್ಲಾಘನೀಯವಾದುದು. ಅದು ಈಗ ಕೃತಿರೂಪದಲ್ಲಿ ಫಲಿಸುತ್ತಿರುವುದು ತುಂಬ ಸಂತೋಷದ ವಿಷಯ. ನಿಮ್ಮ ಪರಿಶ್ರಮವು ಸಾರ್ಥಕವಾಗಿ ಕನ್ನಡಿಗರು ಅದರ ಪ್ರಯೋಜನವನ್ನು ಪಡೆಯುವಂತಾಯಿತು. ಇಂತಹ ಇನ್ನೂ ಅನೇಕ ಕೃತಿಗಳು ಹೊರಮೂಡಿ ಜ್ಞಾನಾಭಿರುಚಿಯುಳ್ಳ ಹಲವರಿಗೆ ಮನಸ್ತೃಪ್ತಿಯಾಗಲೆಂದು ಆಶಿಸುತ್ತೇನೆ.

ಇಂತಿ ವಂದನೆಗಳು.

ಸ್ವಾಮಿ ನಿತ್ಯಸ್ಥಾನಂದ
ಅಧ್ಯಕ್ಷರು

**Harish P Shenoy**
**Sri U. Pundalik Shenoy Memorial Trust**
**1st Floor, "Vasudev Sadan", Tenkapet**
**Venkatramana Temple Road,**
**Udupi – 576 101**

# भगवद्गौडपादाचार्य विरचितम्
## सांख्यकारिकाभाष्यम्
### निवेदना

**ಸ ಪ್ರಾಹ ಪರ್ಯಾಯಶುಕರ್ಷಿಮೀಕ್ಷ್ಯ**

**ಭವಂತಮದ್ರಾಕ್ಷಮತಿಷ್ಯ ಪೂರುಷಮ್ ।**

**ಶ್ರೀ ಶಂಕರ ದಿಗ್ವಿಜಯ ॥ ೧೬ – ೫೨ ॥**

ಜಗದ್ಗುರು ಶ್ರೀ ಶಂಕರಾಚಾರ್ಯರು ಒಮ್ಮೆ ಪವಿತ್ರ ಗಂಗಾನದೀ ತೀರದಲ್ಲಿ ಸಾಯಂ ಸಂಧ್ಯಾಕಾಲದಲ್ಲಿ ಧ್ಯಾನಸ್ಥರಾಗಿದ್ದಾಗ, ಅವರಿಗೆ ಶ್ರೀ ಗೌಡಪಾದಾಚಾರ್ಯರ ದರ್ಶನವಾಯಿತು. ಜಗದ್ಗುರು ಶ್ರೀ ಶಂಕರಾಚಾರ್ಯರು ಕೂಡಲೇ ಎದ್ದು ನಿಂತು ತಮ್ಮ ಪರಮ ಗುರುಗಳಾದ ಶ್ರೀ ಗೌಡಪಾದಾಚಾರ್ಯರ ದಿವ್ಯ ಪಾದಕಮಲಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಅನಂತರ ಜಗದ್ಗುರು ಶ್ರೀ ಶಂಕರಾಚಾರ್ಯರು ಕೈಮುಗಿದು ಶ್ರೀ ಗೌಡಪಾದಾಚಾರ್ಯರನ್ನು ಸ್ತುತಿಸುತ್ತಾ – ''ಓ ದರ್ಶನೀಯರಾದ ಮಹಾತ್ಮರೇ, ಮತ್ತೊಬ್ಬ ಶ್ರೀ ಶುಕಮುನಿಗಳು ಆಗಿರುವ ತಮ್ಮ ದರ್ಶನ ವಾಯಿತು. ಕಲಿಯುಗದಲ್ಲಿ ಕಾಣಲು ಅಸಾಧ್ಯವಾದ ಪುಣ್ಯ ಪುರುಷನನ್ನು ನಾನಿಂದು ಕಂಡೆನು'' ಎಂದರು.

**ಶ್ರೀ ಮಾಧವೀಯ ಶ್ರೀ ಶಂಕರ ದಿಗ್ವಿಜಯ**

*********

ಶ್ರೀ ಸಂಸ್ಥಾನ ಗೌಡಪಾದಾಚಾರ್ಯ ಕೈವಲ್ಯ ಮಠದ (ಹಿಂದಿನ) ಮಠಾಧಿಪತಿಗಳಾಗಿದ್ದ ಶ್ರೀಮದ್ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿಯವರಲ್ಲಿ ನಾನು ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ ಹಾಗೂ ಅವರು ರಚಿಸಿರುವ ಗ್ರಂಥಗಳ ಬಗ್ಗೆ ಸಂಶೋಧನೆ ನಡೆಸುವುದಕ್ಕಾಗಿ ಅವರ ಆಶೀರ್ವಾದ ಕೇಳಿದಾಗ ಅವರು ಸಂತೋಷದಿಂದ ಹೃತ್ಪೂರ್ವಕ ಅನುಮತಿ ನೀಡಿ ಆಶೀರ್ವಾದ ಮಾಡಿದರು.

ಅವರು ಬ್ರಹ್ಮೈಕ್ಯರಾದ ಬಳಿಕ ಈಗಿನ ಮಠಾಧಿಪತಿಗಳಾದ ಶ್ರೀಮದ್ ಶಿವಾನಂದ ಸರಸ್ವತೀ ಸ್ವಾಮೀಜಿಯವರಲ್ಲಿ ನಾನು ನನ್ನ ಸಂಶೋಧನಾ ಕಾರ್ಯವನ್ನು ಮುಂದುವರಿಸುವಂತೆ ಕೇಳಿಕೊಂಡಾಗ ಅವರೂ ಸಂತೋಷದಿಂದ ಹೃತ್ಪೂರ್ವಕ ನನಗೆ ಆಶೀರ್ವಾದ ಮಾಡಿದ್ದಾರೆ.

ಶ್ರೀ ಶಂಕರಾಚಾರ್ಯರ ಗುರುಪರಂಪರೆ:

**नारायणं पद्मभवं वसिष्ठं शक्तिं, च तत्पुत्रपराशरं च**
**व्यासं शुकं गौडपदं महान्तं गोविन्दयोगीन्द्रमथास्य शिष्यम् ।**
**श्रीशङ्कराचार्यमथास्य पद्मपादं च हस्तामलकं च शिष्यं**
**तं तोटकं वार्त्तिककारमन्यानस्मद्गुरून् सन्ततमानतोऽस्मि ॥**

ಈ ಶ್ಲೋಕದ ಪ್ರಕಾರ ನಾರಾಯಣ, ಬ್ರಹ್ಮದೇವ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಶುಕಮುನಿಯ ಶಿಷ್ಯ ಶ್ರೀ ಗೌಡಪಾದಾಚಾರ್ಯರು ಎಂದು ಸ್ಪಷ್ಟವಾಗಿ ತಿಳಿಯಬಹುದು. ಶ್ರೀ ಗೌಡಪಾದಾಚಾರ್ಯರ ಶಿಷ್ಯ ಗೋವಿಂದ ಭಗವತ್ಪಾದರು ಹಾಗೂ ಅವರ ಶಿಷ್ಯ ಶ್ರೀ ಶಂಕರಾಚಾರ್ಯರು. ಶ್ರೀ ಶಂಕರಾಚಾರ್ಯರ ಶಿಷ್ಯರುಗಳ ವಿವರಗಳಿವೆ.

ನಾನು ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ, ಹಾಗೂ ಅವರು ರಚಿಸಿದ ಗ್ರಂಥಗಳ ಬಗ್ಗೆ ಪ್ರಾಮಾಣಿಕವಾದ ಸಂಶೋಧನೆ ನಡೆಸುತ್ತಿರುವಾಗ ನನಗೆ ಅನೇಕ ವಿಷಯಗಳು ತಿಳಿದವು. ಶ್ರೀ ಗೌಡಪಾದಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿದ್ದಾರೆಂದು ತಿಳಿಯಿತು.

ಶ್ರೀ ಗೌಡಪಾದಾಚಾರ್ಯರು ಅನೇಕ ಗ್ರಂಥಗಳನ್ನು ರಚಿಸಿರುವುದು ಹಲವರಿಗೆ ಇಂದು ತಿಳಿದಿಲ್ಲ. ಅನೇಕ ಅದ್ವೈತಿಗಳೂ ಶ್ರೀ ಗೌಡಪಾದಾಚಾರ್ಯರು ಕೇವಲ 'ಗೌಡಪಾದಕಾರಿಕೆ' ಯನ್ನು ಮಾತ್ರ ರಚಿಸಿದರೆಂದು ಭಾವಿಸಿರಬಹುದು.

ಶ್ರೀ ಗೌಡಪಾದಾಚಾರ್ಯರು ರಚಿಸಿರುವ ಗ್ರಂಥಗಳೆಂದರೆ:

1. ಆಗಮ ಶಾಸ್ತ್ರ (आगम शास्त्र) ಅಥವಾ ಗೌಡಪಾದಕಾರಿಕಾ (गौडपादकारिका)
2. ಬ್ರಹ್ಮಸೂತ್ರ ಭಾಷ್ಯ (ब्रह्मसूत्र भाष्यं)
3. ಉತ್ತರಗೀತಾ ಭಾಷ್ಯ (उत्तरगीता भाष्यं)
4. ಸಾಂಖ್ಯಕಾರಿಕಾ ಭಾಷ್ಯ (सांख्यकारिका भाष्यं)
5. ಅನುಗೀತಾ ಭಾಷ್ಯ (अनुगीता भाष्यं)
6. ಸುಭಗೋದಯ ಸ್ತೋತ್ರಮ್ (सुभगोदय स्तोत्रम्)
7. ಚಿದಾನಂದ ಕೇಲೀ ವಿಲಾಸ (चिदानंद केली विलासं)
8. ಶ್ರೀ ವಿದ್ಯಾರತ್ನ ಸೂತ್ರಮ್ (श्री विद्यारत्न सूत्रम्)

9. ಶ್ರೀ ದುರ್ಗಾ ಸಪ್ತಶತೀ ಭಾಷ್ಯ (श्री दुर्गासप्तशती भाष्यं)
10. ನೃಸಿಂಹಪೂರ್ವತಾಪಿನ್ಯುಪನಿಷದ್ಭಾಷ್ಯ
(नृसिंहपूर्वतापिन्युपनिषद्भाष्यं)
11. ಯೋಗದರ್ಶನ ಭಾಷ್ಯ (योगदर्शन भाष्यं)

ಇವುಗಳಲ್ಲದೆ ಇನ್ನೂ ಹಲವು ಗ್ರಂಥಗಳನ್ನು ಶ್ರೀ ಗೌಡಪಾದಾಚಾರ್ಯರು ರಚಿಸಿದ್ದಾರೆಂಬ ಪ್ರತೀತಿಯಿದೆ.

ಶ್ರೀ ಗೌಡಪಾದಾಚಾರ್ಯರ ಮೂರು ಕಡೆ ಆಶ್ರಮಗಳು ಇದ್ದವು ಎಂದು ತಿಳಿದು ಬರುತ್ತದೆ. ಎರಡು ಕಡೆ ಬಹುಶಃ ಅವರೇ ನಿರ್ಮಿಸಿರಬಹುದು. ಮೂರು ಆಶ್ರಮಗಳೆಂದರೆ ಬದರಿನಾಥದ ಬಳಿ, ಹರಿದ್ವಾರದ ಬಳಿ ಹಾಗೂ ಮಧ್ಯಪ್ರದೇಶದ ಓಂಕಾರೇಶ್ವರದ ಬಳಿ ಇವೆ ಎನ್ನುತ್ತಾರೆ.

ಉತ್ತರಾಖಂಡ ರಾಜ್ಯದಲ್ಲಿ ಎರಡು ಕಡೆ ಆಶ್ರಮಗಳಿರುವುದು ತಿಳಿದು ಬರುತ್ತದೆ.

ಗೋವಿಂದನಾಥ ವನಮಿಂದು ಭವಾ ತಟಸ್ಥಮ್ ॥ ಚಿದ್ವಿಲಾಸಯತಿಯ ಅನುಸಾರ ಶ್ರೀ ಗೋವಿಂದ ಭಗವತ್ಪಾದರ ಆಶ್ರಮ ಬದರಿನಾಥದ ಸಮೀಪದಲ್ಲಿತ್ತು. ಬಹುಶಃ ಇದು ಶ್ರೀ ವೇದವ್ಯಾಸರ 'ಶಮ್ಯಪ್ರಾಸ' ಆಶ್ರಮವಿರಬಹುದು. ಶ್ರೀ ಗೌಡಪಾದಾಚಾರ್ಯರ ಆಶ್ರಮವೂ ಆಗಿರಬಹುದು. ಒಂದು ಗ್ರಂಥದ ಪ್ರಕಾರ ಆಶ್ರಮದ ವರ್ಣನೆ ಈ ಕೆಳಗಿನಂತಿದೆ.

ಆಶ್ರಮದ 'ಪೂರ್ವದಲ್ಲಿ ನೇಪಾಲದ ಪಶುಪತಿ ದೇವಾಲಯವೂ, ಪಶ್ಚಿಮದಲ್ಲಿ ಕುರುಕ್ಷೇತ್ರವೂ, ಉತ್ತರದಲ್ಲಿ ಬದರಿನಾಥ ಕ್ಷೇತ್ರವೂ, ದಕ್ಷಿಣದಲ್ಲಿ ಮಥುರಾ ಕ್ಷೇತ್ರವೂ, ಆಗ್ನೇಯದಲ್ಲಿ ಅಯೋಧ್ಯಾ ಹಾಗೂ ಕಾಶೀ ಕ್ಷೇತ್ರಗಳೂ, ವಾಯುವ್ಯದಲ್ಲಿ ಅಮರನಾಥ ಹಾಗೂ ಕಾಶ್ಮೀರದ ಶಾರದಾ ಪೀಠಗಳೂ, ಈಶಾನ್ಯದಲ್ಲಿ ಕೈಲಾಸ ಮಾನಸ ಸರೋವರ' ಎಂದು ವರ್ಣಿಸಲಾಗಿದೆ. ಬಹುಶಃ ಹರಿದ್ವಾರದ ಬಳಿ ಇರಬಹುದು ಎನ್ನುತ್ತಾರೆ.

ಮಧ್ಯಪ್ರದೇಶದ ನರ್ಮದಾ ನದಿ ತೀರದ ಓಂಕಾರೇಶ್ವರದ (ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದು) ಬಳಿ ಒಂದು ಗುಫಾ (ಗುಹೆ) ಇದೆ. ಅದನ್ನು ಇಂದಿಗೂ 'ಗೌಡಪಾದ ಗುಫಾ' ಎಂದೇ ಕರೆಯುತ್ತಾರೆ. ಜಗದ್ಗುರು ಶ್ರೀ ಶಂಕರಾಚಾರ್ಯರು ಶ್ರೀಗೋವಿಂದ ಭಗವತ್ಪಾದರಿಂದ ಸಂನ್ಯಾಸ ದೀಕ್ಷೆ ಸ್ವೀಕರಿಸಿದ ಸ್ಥಳವೂ ಇದೇ ಆಗಿರುತ್ತದೆ ಎನ್ನುತ್ತಾರೆ.

ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ, ಹಾಗೂ ಅವರು ರಚಿಸಿದ ಗ್ರಂಥಗಳನ್ನು ಒಂದೊಂದಾಗಿ ಸಂಗ್ರಹಿಸುತ್ತಾ ಅಧ್ಯಾತ್ಮ ಸಾಧಕರಿಗೆ

ನೀಡಬೇಕೆಂದು ಬಯಸುತ್ತಾ, ಅವುಗಳ ಸಂಗ್ರಹಕ್ಕಾಗಿ ಊರೂರು ಅಲೆಯಲು ಆರಂಭಿಸಿದೆ. ಒಂದು ಗ್ರಂಥ ಶೃಂಗೇರಿಯಲ್ಲಿ ಸಿಕ್ಕಿದರೆ, ಇನ್ನೊಂದು ಮೈಸೂರಿನಲ್ಲಿ, ಮತ್ತೊಂದು ಕಾಶಿಯಲ್ಲಿ, ಮಗದೊಂದು ಓಂಕಾರೇಶ್ವರ (ಮಧ್ಯಪ್ರದೇಶ). ಹೀಗೆ ನನಗೆ ಶ್ರೀ ಗೌಡಪಾದರ ನಾಲ್ಕು ಗ್ರಂಥಗಳು ಸಿಕ್ಕಿದವು.

ಉಳಿದ ಗ್ರಂಥಗಳಿಗಾಗಿ ಪ್ರಯತ್ನಿಸುವಾಗ ಹಲವು ಸಲಹೆಗಳು – ಕಾಶಿ, ಪೂನ, ಹರಿದ್ವಾರ, ಕಲ್ಕತ್ತಾ... ಮುಂತಾದ ಊರುಗಳ ಪ್ರಸಿದ್ಧ ಗ್ರಂಥಾಲಯಗಳಲ್ಲಿ, ವಿವಿಧ ಆಶ್ರಮಗಳಲ್ಲಿ ಇತ್ಯಾದಿ ಇತ್ಯಾದಿ... ಸಿಗಬಹುದು ಎನ್ನುತ್ತಾರೆ. ಕೆಲವರಿಗೆ ಪತ್ರ ಬರೆದರೆ, 'ನಮ್ಮ ಗ್ರಂಥಾಲಯದಲ್ಲಿ ಇರಬಹುದು, ನೀವೇ ಬಂದು ಪ್ರಯತ್ನಿಸಿ' ಎಂದು ಉತ್ತರಿಸುತ್ತಾರೆ.

ಹೀಗೆ ಸಮಯದ ಅಭಾವ, ದೂರದ ಪ್ರಯಾಣ, ಅಧಿಕ ಖರ್ಚು ಇತ್ಯಾದಿಗಳಿಂದಾಗಿ ನನ್ನ ಸಂಶೋಧನೆ ಆಮೆಗತಿಯಲ್ಲಿ ಸಾಗುತ್ತಿತ್ತು.

ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿಯ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರಿಗೆ ನಾನು, ''ಶ್ರೀ ಗೌಡಪಾದಾಚಾರ್ಯರ ಜೀವನ ಚರಿತ್ರೆ ಹಾಗೂ ಅವರು ರಚಿಸಿದ ಗ್ರಂಥಗಳ'' ಬಗ್ಗೆ ಸಂಶೋಧನೆ ನಡೆಸುತ್ತಿರುವುದನ್ನು ತಿಳಿಸಿದಾಗ ಅವರು ಸಂತೋಷದಿಂದ, ಅವರ ಬಳಿ ಇರುವ ಶ್ರೀ ಗೌಡಪಾದಾಚಾರ್ಯರು ರಚಿಸಿದ 'ಉತ್ತರಗೀತಾ ಭಾಷ್ಯ'ವನ್ನು ನನಗೆ ನೀಡಿ 'ಈ ಕಾರ್ಯವು ಬಹಳ ಉತ್ತಮವಾದುದು' ಎಂದು ಹೇಳಿ ತಮ್ಮ ದಿವ್ಯ ಎರಡು ಹಸ್ತಗಳನ್ನು ಮೇಲೆತ್ತಿ ನನಗೆ ಆಶೀರ್ವಾದ ಮಾಡಿದರು.

ನಾನು ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿ ನಿತ್ಯಸ್ಥಾನಂದರಲ್ಲಿ ವಿನಂತಿಸಿಕೊಂಡಾಗ ಅವರು ಸಂತೋಷದಿಂದ ಅವರ ಗ್ರಂಥಾಲಯದಲ್ಲಿರುವ ಶ್ರೀ ಗೌಡಪಾದಾಚಾರ್ಯರು ರಚಿಸಿದ ಸಂಸ್ಕೃತ ಶ್ಲೋಕಗಳಿಂದ ಕೂಡಿದ 'ಸಾಂಖ್ಯಕಾರಿಕಾ ಭಾಷ್ಯ' ಎಂಬ ಗ್ರಂಥವನ್ನು ಓದಲು ನೀಡಿ, ಅದರ ಜರಾಕ್ಸ್ ಪ್ರತಿಯನ್ನು ತೆಗೆಯಲು ಅನುಮತಿಯನ್ನು ನೀಡಿದರು. ಮೈಸೂರು ನಿವಾಸಿ ಸಂಸ್ಕೃತ ತಿಳಿದಿರುವ ಡಾ। ಕೆ. ಎಲ್. ಪ್ರಸನ್ನಾಕ್ಷಿಯವರು ನೀಡಿದ ಸಹಾಯವನ್ನೂ ಇಲ್ಲಿ ಸ್ಮರಿಸುತ್ತೇನೆ.

ಅವುಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕಾಗಿತ್ತು. ಅನುವಾದ ಮಾಡುವುದಕ್ಕಾಗಿ ಕೆಲವರಲ್ಲಿ ಕೇಳಿದೆ. ಆದರೆ ಅವುಗಳನ್ನು ಅನುವಾದ ಮಾಡುವ ಧೈರ್ಯ ಯಾರೂ ಮಾಡಲಿಲ್ಲ.

ಹೀಗಿರುವಾಗ ಪರಮಾತ್ಮನ ಅನುಗ್ರಹದಿಂದ ಬೆಂಗಳೂರು ನಿವಾಸಿಯಾದ ಹಿರಿಯ ವಿದ್ವಾಂಸರಾದ, ರಾಷ್ಟ್ರಪತಿ ಪ್ರಶಸ್ತಿ ಸಮ್ಮಾನಿತರಾದ ಶ್ರೀ ವಿದ್ವಾನ್ ಎನ್. ರಂಗನಾಥ ಶರ್ಮಾರವರ ವಿಳಾಸ (Address) ಸಿಕ್ಕಿತು. ಅವರಿಗೊಂದು

ಪತ್ರ ಬರೆದೆ. ಕೂಡಲೇ ಅವರಿಂದ ಉತ್ತರ 'ತನಗಾಗಿ ಏನನ್ನೂ ಬಯಸದೇ, ಈ ಕಾರ್ಯ ಶ್ರೀ ಗೌಡಪಾದಾಚಾರ್ಯರ ಹಾಗೂ ಜಗದ್ಗುರು ಶ್ರೀ ಶಂಕರಾಚಾರ್ಯರ ನಿಸ್ವಾರ್ಥ ಸೇವೆ ಎಂದು ಭಾವಿಸಿ ಸಂಸ್ಕೃತ ಶ್ಲೋಕಗಳನ್ನು ಕನ್ನಡದಲ್ಲಿ ಅನುವಾದ ಮಾಡಿಕೊಡುವುದಾಗಿ ನನಗೆ ತಿಳಿಸಿದರು.'

ಅವರು ತಮ್ಮ ಪತ್ರದಲ್ಲಿ ಅವರಿಗೆ 94 ವರ್ಷ ವಯಸ್ಸು ಎಂದೂ ತಿಳಿಸಿದ್ದರು. ಅದನ್ನು ಓದಿ ನನಗೆ ಬಹಳ ಆಶ್ಚರ್ಯವಾಯಿತು. ಈ ವಯಸ್ಸಿನಲ್ಲಿಯೂ ಅವರಿಗಿದ್ದ ಉತ್ಸಾಹ, ಧರ್ಮ ಪ್ರಚಾರದ ಆಸಕ್ತಿ ಯಾವ ವಿದ್ವಾಂಸರನ್ನೂ ಒಮ್ಮೆ ಬೆರಗುಗೊಳಿಸಬಹುದು.

ಕೇವಲ ಮೂರು ತಿಂಗಳೊಳಗೆ ಶ್ರೀ ಗೌಡಪಾದಾಚಾರ್ಯರು ರಚಿಸಿದ 'ಸಾಂಖ್ಯಕಾರಿಕಾ ಭಾಷ್ಯ'ವನ್ನು ಕನ್ನಡದಲ್ಲಿ ಅನುವಾದ ಮಾಡಿ ನನಗೆ ಕಳುಹಿಸಿಕೊಟ್ಟರು. ಅವರ ಧರ್ಮಪ್ರಚಾರದ ನಿಸ್ವಾರ್ಥ ಸೇವೆಗೆ ನಾನು ತಲೆಬಾಗುತ್ತೇನೆ.

ಮಹಾಮಹೋಪಾಧ್ಯಾಯ, ವಿದ್ಯಾವಾಚಸ್ಪತಿ, ಪಂಡಿತರತ್ನಂ, ಪಂಡಿತರಾಜ ಶ್ರೀ ವಿದ್ವಾನ್ ಎನ್. ರಂಗನಾಥ ಶರ್ಮಾರವರು ಶತಾಯುಷಿಗಳಾಗಿ ಆರೋಗ್ಯದಿಂದಲೂ, ಸಂತೋಷದಿಂದಲೂ ಬಾಳಿ ಅವರಿಂದ ಇನ್ನೂ ಹೆಚ್ಚು ಧರ್ಮಪ್ರಚಾರ ಕಾರ್ಯ ಆಧ್ಯಾತ್ಮ ಸಾಧಕರಿಗೆ ಹೆಚ್ಚು ಹೆಚ್ಚು ಉಪಯೋಗವಾಗುವಂತಾಗಲಿ ಎಂದು ಹೃತ್ಪೂರ್ವಕವಾಗಿ ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ.

ಹಿರಿಯ ವಿದ್ವಾಂಸರಾದ ಶ್ರೀ ಎನ್. ರಂಗನಾಥ ಶರ್ಮಾರವರಿಗೆ ದೃಷ್ಟಿದೋಷವಿರುವುದರಿಂದ ಸಣ್ಣ ಸಣ್ಣ ಅಕ್ಷರಗಳು ಸರಿಯಾಗಿ ಕಾಣದೆ ಇರುವುದರಿಂದ, ಈ ಗ್ರಂಥವನ್ನು ಓದಿ ಹೇಳಿ ಹಾಗೂ ಶ್ರೀ ರಂಗನಾಥ ಶರ್ಮಾರವರು ಹೇಳಿದಂತೆ ಅನುವಾದವನ್ನು ಬರೆದು ಸಹಕರಿಸಿದ ವೇ || ಯ. ಕೃಷ್ಣ ಶರ್ಮಾರವರಿಗೆ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಇನ್ನು 'ಸಾಂಖ್ಯಕಾರಿಕೆ'ಯ ಬಗ್ಗೆ ಸ್ವಲ್ಪ ತಿಳಿಯಲು ಪ್ರಯತ್ನಿಸೋಣ.

ಸಂಖ್ಯೆ ಎಂದರೆ ನಾವು ಬಳಸುವ ಅಂಕೆಗಳು. ಈ ಅಂಕೆಗಳ ಮೂಲಕವೇ ಒಳಗಿನ ಹಾಗೂ ಹೊರಗಿನ ರಹಸ್ಯವನ್ನು ತಿಳಿಯುವುದು ಸಾಂಖ್ಯ. ಇನ್ನೂ ಆಳಕ್ಕೆ ಹೋದರೆ ಸಾಂಖ್ಯ ಎಂದರೆ ಸಮ್ಯಕ್ + ಖ್ಯಾತಿ = ಸರಿಯಾಗಿ ತಿಳಿಯುವುದು. ಇದ್ದದ್ದನ್ನು ಇದ್ದ ಹಾಗೆ, ಕಂಡದ್ದನ್ನು ಕಂಡ ಹಾಗೆ ಹಾಗೂ ಕಂಡದನ್ನು ಮಾತ್ರವಲ್ಲ, ಕಾಣದನ್ನೂ ತಿಳಿಯುವುದು.

ಕಾಣುವ ಸತ್ಯದೊಂದಿಗೆ ಕಾಣದ ಸತ್ಯವನ್ನೂ ತಿಳಿಯುವ ಜ್ಞಾನಮಾರ್ಗ ಸಾಂಖ್ಯ. ಪಿಂಡಾಂಡದಲ್ಲಿಯೂ, ಬ್ರಹ್ಮಾಂಡದಲ್ಲಿಯೂ ಕಾಣುವ ಸತ್ಯದ ಒಳಗೊಂದು ಕಾಣದ ಸತ್ಯವಿದೆ.

ಅದೇ

ಚೈತನ್ಯ...

ಆತ್ಮ...

**ಶುದ್ಧಾತ್ಮ ತತ್ತ್ವವಿಜ್ಞಾನಂ ಸಾಂಖ್ಯಮಿತ್ಯಭಿಧೀಯತೇ**

ಹೀಗೆ ಸಾಂಖ್ಯವೆಂದರೆ ಪರಿಶುದ್ಧವಾದ ಆತ್ಮನ ಪರಿಶುದ್ಧವಾದ ಅರಿವು.

ಸಾಂಖ್ಯ, ಯೋಗ, ಧ್ಯಾನ... ಆಧ್ಯಾತ್ಮ ಸಾಧಕರು ಎತ್ತರಕ್ಕೆ ಏರಲು ಉಪಯೋಗಿಸುವ ಒಂದೊಂದು ಮೆಟ್ಟಲುಗಳು.

ಆದುದರಿಂದಲೇ ಶ್ರೀ ಗೌಡಪಾದಾಚಾರ್ಯರು ''ಸಾಂಖ್ಯಕಾರಿಕೆಗೆ ಭಾಷ್ಯ''ವನ್ನೂ, ''ಯೋಗದರ್ಶನಕ್ಕೆ ಭಾಷ್ಯ''ವನ್ನೂ ಹಾಗೂ ಧ್ಯಾನಕ್ಕಾಗಿ ಸುಲಭವಾಗಲು ''ಸುಭಗೋದಯ ಸ್ತೋತ್ರಮ್'' ಮುಂತಾದ ಗ್ರಂಥಗಳನ್ನು ರಚಿಸಿರುತ್ತಾರೆ ಎಂದು ತಿಳಿಯಬಹುದು.

**ಯು. ಹರೀಶ್ ಪಿ. ಶೆಣೈ**

3-11-2008 *(ಆಡಳಿತ ಮೊಕ್ತೇಸರರು)*

ಉಡುಪಿ *ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟ್*

# ಪ್ರಸ್ತಾವನೆ

ಪುಣ್ಯಭೂಮಿಯಾದ ಈ ಭಾರತ ದೇಶದಲ್ಲಿ ಇದ್ದ ಪ್ರಾಚೀನ ಋಷಿಗಳೂ, ವಿದ್ವಾಂಸರೂ ಅತ್ಯುತ್ತಮವಾದ ಗ್ರಂಥಗಳನ್ನು ರಚಿಸಿ ನಮ್ಮ ಸಂಸ್ಕೃತಿಯನ್ನು ಬೆಳಗಿಸಿದ್ದಾರೆ. ಅವರ ವಿಚಾರಗಳು ಗಾಢವೂ ಗಂಭೀರವೂ ಆದವುಗಳು. ಮುಖ್ಯವಾಗಿ ಅಧ್ಯಾತ್ಮದ ವಿಚಾರವನ್ನು ಕುರಿತ ಅವರ ಚಿಂತನೆಗಳು ಸಮಸ್ತ ಮಾನವ ಜನಾಂಗದ ಕಲ್ಯಾಣ ಸಂಪದಕ್ಕೆ ಅಮೂಲ್ಯವಾದ ಕೊಡುಗೆಗಳಾಗಿವೆ. ಈ ಆಧ್ಯಾತ್ಮಿಕ ಚಿಂತನೆಗಳನ್ನು ದರ್ಶನಗಳೆಂದು ಕರೆಯುವುದು ರೂಢಿ. ಸತ್ಯವಾದ ತತ್ತ್ವವು ಯಾವುದೆಂಬುದರ ಅನ್ವೇಷಣೆಯೇ ದರ್ಶನಗಳ ಗುರಿಯಾಗಿರುತ್ತದೆ. ''ದೃಶ್ಯತೇ ಪರಮಾರ್ಥತತ್ತ್ವಂ ಅನೇನ ಇತಿ ದರ್ಶನಮ್'' ಎಂದು ಈ ಶಬ್ದದ ವ್ಯುತ್ಪತ್ತಿ. ನಮ್ಮ ಸುತ್ತಲೂ ಗೋಚರವಾಗಿರುವ ಈ ಜಗತ್ತು ಯಾರಿಂದ ನಿರ್ಮಿತವಾಯಿತು ? ಈ ನಿರ್ಮಾಣದ ಉದ್ದೇಶವೇನು ? ಮನುಷ್ಯನೇ ಮೊದಲಾದ ಜೀವಿಗಳ ಸೃಷ್ಟಿಗೆ ನಿಮಿತ್ತವೇನು ? ಮನುಷ್ಯರಲ್ಲಿಯೂ ಸುಖ-ದುಃಖಗಳ ಏರುಪೇರಿಗೆ ಕಾರಣವೇನಾದರೂ ಇದೆಯೇ ? ಮನುಷ್ಯನು ಸತ್ತಮೇಲೆ ಅವನ ಗತಿ ಮುಗಿಯಿತೇ ? ಪುನರ್ಜನ್ಮ ಉಂಟೇ ಇತ್ಯಾದಿ ಪ್ರಶ್ನೆಗಳು ಬುದ್ಧಿಶಾಲಿಯಾದ ಮನುಷ್ಯನಿಗೆ ಹುಟ್ಟುವುದು ಸ್ವಾಭಾವಿಕ. ಈ ಪ್ರಶ್ನೆಗಳಿಗೆ ವಿವೇಚನಪೂರ್ವಕವಾಗಿ ಉತ್ತರ ಕೊಡುವುದು ಸುಲಭವಲ್ಲ. ಈ ದೃಷ್ಟಿಯಿಂದ ಭಾರತೀಯ ದರ್ಶನಗಳು ಯಥಾಶಕ್ತಿಯಾಗಿ ಪ್ರಯತ್ನಿಸಿರುತ್ತವೆ. ಒಂದು ಮಾತಿನಲ್ಲಿ ಹೇಳಬಹುದಾದರೆ ಭಾರತೀಯ ದರ್ಶನಕಾರರು ಮಾಡಿರುವ ಜಗದ್ವಿವೇಚನೆಯು, ಅನ್ವೇಷಣವು ಅತ್ಯಂತ ಅಮೂಲ್ಯವಾದವು. ಇವುಗಳಿಗಿಂತ ಉತ್ತಮವಾದ ಅನ್ವೇಷಣವನ್ನು ಈ ಜಗತ್ತಿನಲ್ಲಿ ಇನ್ನು ಯಾರೂ ಮಾಡಿಲ್ಲವೆಂದರೆ ಅತಿಶಯೋಕ್ತಿಯಾಗುವುದಿಲ್ಲ.

## ಭಾರತೀಯ ದರ್ಶನಗಳು

ಭಾರತೀಯ ದರ್ಶನಗಳನ್ನು ವೈದಿಕ-ಅವೈದಿಕ ಎಂದು ಎರಡು ವಿಧವಾಗಿ ವಿಂಗಡಿಸುತ್ತಾರೆ. ವೇದವು ಪ್ರಮಾಣವೆಂದು ಅಂಗೀಕರಿಸುವ ದರ್ಶನಗಳು ವೈದಿಕ ದರ್ಶನಗಳು. ವೇದಗಳು ಪ್ರಮಾಣವೆಂದು ಅಂಗೀಕರಿಸದಿರುವ ದರ್ಶನಗಳು ಅವೈದಿಕಗಳು. ವೈದಿಕ ದರ್ಶನಗಳು ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸಾ, ಉತ್ತರಮೀಮಾಂಸಾ (ವೇದಾಂತ) ಎಂದು ಆರು ವಿಧಗಳಾಗಿವೆ. ಚಾರ್ವಾಕ ದರ್ಶನ, ಬೌದ್ಧ ದರ್ಶನ, ಜೈನ ದರ್ಶನ ಎಂದು ಅವೈದಿಕ ದರ್ಶನಗಳು ಮೂರು ವಿಧ.

## ದರ್ಶನಗಳಿಗೆ ಪ್ರಾಮಾಣ್ಯ

ಯಾವುದೇ ಒಂದು ಸಿದ್ಧಾಂತವನ್ನು ಅಂಗೀಕರಿಸಬೇಕಾದರೂ ಅದಕ್ಕೆ ಸರಿಯಾದ ಪ್ರಮಾಣಗಳನ್ನು ಕೊಡಬೇಕಾಗುತ್ತದೆ. ಈ ದರ್ಶನಗಳು ಸಿದ್ಧಾಂತ ಸ್ಥಾಪನೆಗಾಗಿ ಈ ಪ್ರಮಾಣಗಳು ಎಷ್ಟೆಂಬುದನ್ನು ಗೊತ್ತುಮಾಡಿವೆ. ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಇವು ದರ್ಶನ ಶಾಸ್ತ್ರಗಳಲ್ಲಿ ಮುಖ್ಯವಾದ ಪ್ರಮಾಣಗಳು. ಪ್ರತ್ಯಕ್ಷವೆಂದರೆ ನಮ್ಮ ಜ್ಞಾನೇಂದ್ರಿಯಗಳಿಗೆ ಗೋಚರವಾಗ ತಕ್ಕದ್ದು. ಶ್ರೋತ್ರ, ನೇತ್ರ, ತ್ವಕ್, ಜಿಹ್ವೆ, ಘ್ರಾಣ ಇವು ಪಂಚ ಜ್ಞಾನೇಂದ್ರಿಯಗಳು. ಇವುಗಳಿಂದ ಕ್ರಮವಾಗಿ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಇವುಗಳನ್ನು ತಿಳಿಯುತ್ತೇವೆ. ಇದರಿಂದ ಶಬ್ದಾರ್ಥಾದಿಗಳು ಹೇಗಿವೆ ? ಎಂಬುದನ್ನು ನಿರ್ಣಯಿಸಬಹುದು. ಈ ಪ್ರತ್ಯಕ್ಷವು ಪ್ರಬಲವಾದ ಪ್ರಮಾಣ. ಲೋಕವೆಲ್ಲವೂ ಇದನ್ನು ಮುಖ್ಯವಾಗಿ ಅವಲಂಬಿಸಿದೆ. ಪ್ರತ್ಯಕ್ಷವಲ್ಲದ್ದನ್ನು ಅನುಮಾನದಿಂದ ನಿಶ್ಚಯಿಸಬಹುದು. ದೂರದಲ್ಲಿ ಹೊಗೆಯನ್ನು ನೋಡಿ ಅಲ್ಲಿ ಬೆಂಕಿ ಇದೆ ಎಂದು ನಿರ್ಣಯಿಸಬಹುದು. ಬೆಂಕಿಯನ್ನು ಪ್ರತ್ಯಕ್ಷವಾಗಿ ನೋಡದಿದ್ದರೂ ಬೆಂಕಿಯಿದೆ ಎಂಬ ನಿರ್ಣಯವು ಪ್ರಾಮಾಣಿಕವೇ ಆಗುತ್ತದೆ. ಎಲ್ಲಿ ಹೊಗೆ ಇದೆಯೋ ಅಲ್ಲಿ ಬೆಂಕಿ ಇದ್ದೇ ಇರಬೇಕು ಎಂಬ ವ್ಯಾಪ್ತಿಯ ಜ್ಞಾನವೇ ಇದಕ್ಕೆ ಕಾರಣ. ಹೊಗೆಯನ್ನು ಹೇತುವೆಂದೂ ಲಿಂಗವೆಂದೂ ಹೇಳುತ್ತಾರೆ.

ಉಪಮಾನದಿಂದ ನಿರ್ಣಯಿಸುವುದಕ್ಕೆ ಸಾದೃಶ್ಯವೇ ಕಾರಣ. ಸಾದೃಶ್ಯವೆಂದರೆ ಹೋಲಿಕೆ. ಒಂದು ಭಾವಚಿತ್ರದಿಂದ ಆ ಹೋಲಿಕೆಯ ಮನುಷ್ಯನು ಯಾರೆಂದು ನಿರ್ಣಯಿಸಬಹುದು. ಇದೇನೂ ಪ್ರಬಲವಾದ ಪ್ರಮಾಣವಲ್ಲ. ಕೆಲವರು ಈ ಉಪಮಾನವನ್ನು ಅನುಮಾನ ಪ್ರಮಾಣದಲ್ಲೇ ಸೇರಿಸಿಬಿಟ್ಟಿದ್ದಾರೆ.

ಇನ್ನು ಉಳಿದದ್ದು ಶಬ್ದ. ಶಬ್ದವೆಂದರೆ ಆಪ್ತವಾಕ್ಯ. ಆಪ್ತನೆಂದರೆ ಯಥಾರ್ಥವಾಗಿ ಸತ್ಯವನ್ನೇ ನುಡಿಯತಕ್ಕವನು. ನಾವು ಆಪ್ತನಾದ ಒಬ್ಬ ಮಿತ್ರನ ಮಾತನ್ನು ನಂಬುತ್ತೇವಲ್ಲವೇ ? ಪತ್ರಿಕೆಗಳಲ್ಲಿ ಬರುವ ನಾನಾ ಸುದ್ದಿಗಳನ್ನು ಓದಿ ನಾವು ಕೆಲವು ವಿಷಯಗಳನ್ನು ನಿರ್ಣಯಿಸಿಕೊಳ್ಳುತ್ತೇವೆ. ಇದೆಲ್ಲವೂ ಆಪ್ತವಾಕ್ಯವೆನಿಸಿದ ಶಬ್ದದಿಂದ ಆದದ್ದು. ಲೋಕ ವ್ಯವಹಾರದಲ್ಲಿ ಈ ಆಪ್ತವಾಕ್ಯವೆಂಬ ಪ್ರಮಾಣವು ಬಹಳ ಮುಖ್ಯವಾದದ್ದು. ನಮ್ಮ ಗೃಹಕೃತ್ಯಗಳೂ, ಹೊರಗಿನ ವ್ಯವಹಾರಗಳೂ ಈ ಶಬ್ದಪ್ರಮಾಣವನ್ನು ಆಧರಿಸಿ ನಡೆಯುತ್ತವೆಯೆಂಬುದು ಸರ್ವವಿದಿತ.

## ವೇದ ಪ್ರಾಮಾಣ್ಯ

ಭಾರತೀಯರಿಗೆ ವೇದಗಳು ಸರ್ವಶ್ರೇಷ್ಠವಾದ ಪ್ರಮಾಣ ಗ್ರಂಥಗಳು. ವೇದಕ್ಕಿಂತ ಪ್ರಾಚೀನವಾದ ಇನ್ನೊಂದು ಗ್ರಂಥವು ಜಗತ್ತಿನಲ್ಲಿ ದೊರಕಿಲ್ಲ. ಪಾಶ್ಚಾತ್ಯ ವಿದ್ವಾಂಸರಾದ ಮ್ಯಾಕ್ಸ್‌ಮುಲ್ಲರ್ ಪ್ರಭೃತಿಗಳು ವೇದ ಸಾಹಿತ್ಯದ ಪ್ರಾಚೀನತೆಯನ್ನು ಒಪ್ಪಿಕೊಂಡಿದ್ದಾರೆ. ಶೋಪನ್‌ಹೇರ್ ಎಂಬ ಜರ್ಮನ್ ವಿದ್ವಾಂಸನು ಋಗ್ವೇದವು ಕ್ರಿಸ್ತಪೂರ್ವ ಹನ್ನೆರಡು ಸಾವಿರ ವರ್ಷಗಳಿಗಿಂತ ಪೂರ್ವದ್ದೆಂದು ಹೇಳುತ್ತಾನೆ. ವೇದವಾದರೋ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣ ವೇದವೆಂದು ನಾಲ್ಕು ವಿಭಾಗಗಳನ್ನು ಹೊಂದಿದೆ. ಮಂತ್ರ - ಬ್ರಾಹ್ಮಣಗಳಿಗೆ ವೇದವೆಂದು ಹೆಸರು. ಉಪನಿಷತ್ತುಗಳು ವೇದದಲ್ಲಿಯೇ ಅಡಕವಾಗುತ್ತವೆ. ಅವು ವಿಶೇಷವಾಗಿ ಅಧ್ಯಾತ್ಮ ವಿಚಾರಗಳನ್ನು ಒಳಗೊಂಡಿರುವುದರಿಂದ ವೇದ ಮತ್ತು ಉಪನಿಷತ್ತು ಎಂದು ವ್ಯವಹರಿಸುವುದುಂಟು. ಈ ವೇದಸಾಹಿತ್ಯವಾದರೋ ನಾನಾ ಶಾಖೆಗಳ ನ್ನೊಳಗೊಂಡು ಅಪಾರವೂ ಅನಂತವೂ ಆಗಿದೆ. ಉದಾಹರಣೆಗೆ: ಋಗ್ವೇದದಲ್ಲಿ ಇಪ್ಪತ್ತೊಂದು ಶಾಖೆಗಳು, ಯಜುರ್ವೇದದಲ್ಲಿ ನೂರಾಒಂದು ಶಾಖೆಗಳು, ಸಾಮವೇದದಲ್ಲಿ ಸಾವಿರ ಭೇದಗಳು, ಅಥರ್ವಣದಲ್ಲಿ ಒಂಬತ್ತು ಶಾಖೆಗಳು – ಎಂದು ವ್ಯಾಕರಣ ಮಹಾಭಾಷ್ಯಕಾರನಾದ ಪತಂಜಲಿಯು ಪಸ್ಪಶಾಹ್ನಿಕದಲ್ಲಿ ಹೇಳಿದ್ದಾನೆ. ಇಂತಹ ಅಪಾರವಾದ ವೇದರಾಶಿಯನ್ನು ಯಾರು ಯಾವಾಗ ರಚಿಸಿದರೆಂದು ಹೇಳಲು ಶಕ್ಯವಾಗುವುದಿಲ್ಲ. ಈಗ ಉಪಲಬ್ಧ ವಾಗಿರುವುದು ಅತ್ಯಲ್ಪವೇ ಸರಿ.

ಇಂತಹ ವೇದರಾಶಿಯನ್ನು ಅಪೌರುಷೇಯವೆಂದು ಭಾರತೀಯರು ಹೇಳುತ್ತಾರೆ. ಅಪೌರುಷೇಯವೆಂದರೆ ಮನುಷ್ಯನಿಂದ ರಚಿತವಾದದ್ದಲ್ಲ ಎಂದು ಅಭಿಪ್ರಾಯ. ಈ ವೇದಗಳು ಸರ್ವಜ್ಞನಾದ ಈಶ್ವರನಿಂದ ರಚಿತವಾಗಿವೆಯೆಂದು ಕೆಲವರ ಆಶಯ. ಕೆಲವು ದಾರ್ಶನಿಕರು ವೇದಗಳೆಲ್ಲವೂ ನಿತ್ಯವಾದವುಗಳೆಂದೂ ಯಾರಿಂದಲೂ ರಚಿತವಾದವುಗಳಲ್ಲವೆಂದೂ ಹೇಳುತ್ತಾರೆ. ಹೇಗಿದ್ದರೂ ವೇದವು ಪ್ರತಿಪಾದಿಸುವ ತತ್ತ್ವಗಳು ಅಮೂಲ್ಯವಾದವು. ಇಂತಹ ತತ್ತ್ವಗಳನ್ನೊಳಗೊಂಡ ವೇದಗಳನ್ನು ಪ್ರಮಾಣವೆಂದು ಅಂಗೀಕರಿಸಿರುವುದು ಆಶ್ಚರ್ಯವಲ್ಲ. ವ್ಯಾಕರಣ ಭಾಷ್ಯಕಾರರಾದ ಪತಂಜಲಿ ಮುನಿಗಳೇ ಒಂದು ಸ್ಥಳದಲ್ಲಿ ''ನಿತ್ಯೋ ವೇದಃ ನ ಹಿ ವೇದಾಃ ಕ್ರಿಯಂತೇ'' ಎಂದಿದ್ದಾರೆ.

ವೇದವು ಪರಮಾತ್ಮನ ಬಾಯಿಯಿಂದ ನಿರ್ಗಮಿಸಿತೆಂದೂ, ಆತನೂ ಸಹ ಇದನ್ನು ರಚಿಸಲಿಲ್ಲವೆಂದೂ ಹೇಳಬಹುದು. ''ಮಹತೋ ಭೂತಸ್ಯ ನಿಃಶ್ವಸಿತಮೇತತ್ ಯತ್ ಋಗ್ವೇದೋ ಯಜುರ್ವೇದಃ

ಸಾಮವೇದೋಽಥರ್ವಣಶ್ಚ'' ಎಂದು ಶ್ರುತಿಯೇ ಹೇಳಿಕೊಂಡಿದೆ. ವೇದವು ಪರಮಾತ್ಮನ ನಿಃಶ್ವಸಿತ. ಯಾವ ಪ್ರಯತ್ನವೂ ಇಲ್ಲದೇ ಉಸಿರು ಬಿಡುವಂತೆ ಆತನ ಮುಖದಿಂದ ವೇದವು ಹೊರಬಂದಿತು ಎಂದು ಅಭಿಪ್ರಾಯ. ವಸಿಷ್ಠ, ವಾಮದೇವ, ವಿಶ್ವಾಮಿತ್ರಾದಿ ಋಷಿಗಳು ಕಠಿಣವಾದ ತಪಸ್ಸಿನಲ್ಲಿ ತೊಡಗಿ ಸಮಾಧಿ ಸ್ಥಿತಿಯಲ್ಲಿರುವಾಗ ಅವರಿಗೆ ವೇದಗಳು ಹೊಳೆದವು. ಅವರು ತಮ್ಮ ಮುಖದಿಂದ ಉಚ್ಚರಿಸಿದರು. ಋಷಿಗಳೂ ಸಹ ವೇದವನ್ನು ರಚಿಸಲಿಲ್ಲ. ಈ ಮಾತನ್ನು ವೇದಾಂಗವಾದ ನಿರುಕ್ತವನ್ನು ರಚಿಸಿದ ಯಾಸ್ಕ ಮುನಿಗಳೇ ಹೇಳಿದ್ದಾರೆ. ಋಷಿಗಳೆಂದರೆ ಯಾರು ? – ''ತದ್ಯದೇನಾನ್ ತಪಸ್ಯಮಾನಾನ್ ಬ್ರಹ್ಮಸ್ವಯಂಭು ಅಭ್ಯಾನರ್ಷತ್. ತತ್ ತೇ ಋಷಯೋಽಭವನ್. ತದೃಷೀಣಾಂ ಋಷಿತ್ವಮ್'' (– ನಿರುಕ್ತಃ ಕಾಂಡ ೨, ೩, ೧೨) ತಪಸ್ಸು ಮಾಡುತ್ತಿದ್ದ ಈ ಜನರ ಬಳಿಗೆ ಋಗ್ಯಜುಃ ಸಾಮಗಳೆಂಬ ಕೃತಕವಲ್ಲದ ವೇದಗಳು ''ಅಭ್ಯಾನರ್ಷತ್'' = ಬಂದು ಸೇರಿದವು. ಆದ್ದರಿಂದ ಇವರು ಋಷಿಗಳೆನಿಸಿದರು ಎಂದು ತಾತ್ಪರ್ಯ. ಬ್ರಹ್ಮವೆಂದರೆ ವೇದ. ಇದು ಸ್ವಯಂಭು, ತಾನಾಗಿಯೇ ಇದ್ದದ್ದು, ಕೃತಕವಲ್ಲ. ಋಷೀ-ಗತೌ ಎಂಬ ಧಾತುವಿನಿಂದ ಋಷಿ ಶಬ್ದವು ನಿಷ್ಪನ್ನವಾಗಿದೆ. ತಪಸ್ಸು ಮಾಡುತ್ತಿದ್ದ ಋಷಿಗಳಿಗೆ ಅನಾದಿಯಾದ ವೇದಗಳು ಹೊಳೆದವು. ಅವರು ಅವುಗಳನ್ನು ರಚಿಸಲಿಲ್ಲ ಎಂದು ಆಶಯ.

ವೇದವು ಮನುಷ್ಯರಚಿತವಾಗಿದ್ದರೆ ಮನುಷ್ಯರಾಡುವ ಭಾಷೆಯಂತೆ ರಚಿತವಾಗಿರಬೇಕು. ಆದರೆ ಹಾಗೆ ರಚಿತವಾಗಿಲ್ಲ. ವೇದದಲ್ಲಿ ಉದಾತ್ತ, ಅನುದಾತ್ತ, ಸ್ವರಿತ ಮುಂತಾದ ಹಲವಾರು ಸ್ವರಭೇದಗಳಿವೆ. ಇವು ಯಥೇಷ್ಟವಾಗಿ ಸೇರಿಸಿದವುಗಳಲ್ಲ. ಕೆಲವು ಶಾಸ್ತ್ರೀಯ ನಿಯಮಗಳನ್ನು ಅನುಸರಿಸಿಯೇ ಈ ಸ್ವರಗಳು ಬಂದಿರುತ್ತವೆ. ಈ ನಿಯಮಗಳನ್ನು ವೈದಿಕ ವ್ಯಾಕರಣವೂ, ಪ್ರಾತಿಶಾಖ್ಯವೂ ಸ್ಪಷ್ಟವಾಗಿ ತಿಳಿಸಿಕೊಟ್ಟಿವೆ. ಹೀಗೆ ಸ್ವರಸಹಿತವಾಗಿ ಯಾವ ಮನುಷ್ಯರೂ ಮಾತಾಡಲು ಶಕ್ಯವಿಲ್ಲ. ಸಂಸ್ಕೃತ ಭಾಷೆಯಂತೆ ಇದು ತೋರಿದರೂ ಸಾವಿರಾರು ಶಬ್ದಗಳು ಪಾಣಿನಿಯ ಭಾಷಾ ವ್ಯಾಕರಣದಲ್ಲಿಯೂ ಕಂಡುಬರುವುದಿಲ್ಲ. ಯಾವ ನಿಘಂಟುವಿನಲ್ಲಿಯೂ ದೊರಕದ ''ಜರ್ಭರೀ, ತುರ್ಫರೀತು'' ಮುಂತಾದ ಶಬ್ದಗಳು ವೇದದಲ್ಲಿ ಕಂಡುಬರುತ್ತವೆ. ಅಲ್ಲದೇ ಪ್ರತ್ಯಕ್ಷ, ಅನುಮಾನಗಳಿಗೂ ಗೋಚರಿಸದ, ಮನುಷ್ಯನ ಊಹೆಗೂ ನಿಲುಕದ ವೈಜ್ಞಾನಿಕ ಸತ್ಯಗಳನ್ನು ವೇದದಲ್ಲಿ ಕಾಣಬಹುದು ಮತ್ತು ಈ ವೇದವನ್ನು ಯಾವ ಋಷಿಯು ಅಥವಾ ವಿದ್ವಾಂಸನು ರಚಿಸಿದನೆಂದು ಯಾರೂ ಹೇಳಿಲ್ಲ. ಅಲ್ಲದೇ ಅಪಾರವಾದ ಈ ವೇದರಾಶಿಯನ್ನು ಮನುಷ್ಯರಿಂದ ರಚಿಸಲು ಸಾಧ್ಯವಾಗದೆಂದು ವೇದವನ್ನು ಪರಿಶೀಲಿಸಿದ ಯಾವ ವಿದ್ವಾಂಸನಾದರೂ ಅವಶ್ಯವಾಗಿ ಹೇಳಬೇಕಾಗುತ್ತದೆ. ಆದ್ದರಿಂದಲೇ ಘನವಿದ್ವಾಂಸರೂ ಅಸಾಧಾರಣ

ತತ್ತ್ವಜ್ಞಾನಿಗಳೂ ಆದ ಶ್ರೀ ಶಂಕರಾಚಾರ್ಯರು ''ನ ಹಿ ಈದೃಶಸ್ಯ ಶಾಸ್ತ್ರಸ್ಯ ಋಗ್ವೇದಾದಿ ಲಕ್ಷಣಸ್ಯ ಸರ್ವಜ್ಞಗುಣಾನ್ವಿತಸ್ಯ ಸರ್ವಜ್ಞಾದನ್ಯತಃ ಸಂಭವೋಽಸ್ತಿ'' (ಸೂ. ಭಾ. ೧.೧.೩.) ಎಂದು ಹೇಳಿದ್ದಾರೆ.

ಅರ್ಥ – ಋಗ್ವೇದಾದಿ ಶಾಸ್ತ್ರವು ಸರ್ವಾರ್ಥಪ್ರಕಾಶನ ಸಮರ್ಥವಾಗಿ ಸರ್ವಜ್ಞಸದೃಶವಾಗಿದೆ. ಇಂತಹ ವೇದವು ಸರ್ವಜ್ಞನಾದ ಈಶ್ವರನಲ್ಲದೇ ಇನ್ನೊಬ್ಬನಿಂದ ಉತ್ಪನ್ನವಾಗಲಾರದು.

ಇಷ್ಟು ಸಾಕು. ಈ ಕಾರಣಗಳಿಂದಲೇ ಭಾರತೀಯರು ವೇದವನ್ನು ಶ್ರೇಷ್ಠವಾದ ಪ್ರಮಾಣ ಗ್ರಂಥವೆಂದು ನಂಬಿದ್ದಾರೆ. ಇಂತಹ ವೇದವನ್ನು ಬೈಬಲ್ಲಿಗೂ ಖುರಾನಿಗೂ ಹೋಲಿಸಿ ಅಲ್ಪೀಕರಿಸುವುದು ಮೂರ್ಖತನದ ಪರಮಾವಧಿಯೇ ಸರಿಯೆನ್ನದೇ ವಿಧಿಯಿಲ್ಲ.

ಪಾರಮಾರ್ಥಿಕ ವಿಚಾರದಲ್ಲಿ ತೊಡಗಿರುವ ದರ್ಶನಗಳಿಗೆ ಪ್ರತ್ಯಕ್ಷ ಪ್ರಮಾಣವು ಹೆಚ್ಚು ಪ್ರಯೋಜನಕಾರಿಯಾಗುವುದಿಲ್ಲ. ಅನುಮಾನವು ಯುಕ್ತಿಪ್ರಧಾನವಾದದ್ದು. ಕಾರ್ಯಕಾರಣ ಭಾವವೆಂಬ ಯುಕ್ತಿಯ ಬಲದಿಂದ ಆಧ್ಯಾತ್ಮಿಕ ವಿಷಯವನ್ನು ತಕ್ಕಮಟ್ಟಿಗೆ ನಿರ್ಣಯಿಸಬಹುದು. ಆದರೂ ಅದು ಪೂರ್ಣವಾದ ತೃಪ್ತಿಯನ್ನು ಕೊಡಲಾರದು. ಉದಾಹರಣೆಗೆ: ಜೀವಾತ್ಮ-ಪರಮಾತ್ಮರನ್ನು ಯುಕ್ತಿಯಿಂದ ಸಾಧಿಸಬಹುದಾದರೂ ಅವರ ಸ್ವರೂಪವನ್ನಾಗಲೀ, ಗುಣಕ್ರಿಯೆಗಳನ್ನಾಗಲೀ ನಿರ್ಣಯಿಸುವುದು ಸಾಧ್ಯವೇ ಇಲ್ಲ. ಆದ್ದರಿಂದಲೇ ದರ್ಶನಗಳು ಆಪ್ತವಾಕ್ಯವೆಂಬ ಶಬ್ದಪ್ರಮಾಣವನ್ನು ವಿಶೇಷವಾಗಿ ಆಶ್ರಯಿಸುತ್ತವೆ. ಅಧ್ಯಾತ್ಮದ ವಿಚಾರದಲ್ಲಿ ಮಾನವರ ಹೇಳಿಕೆ ನಿರ್ಣಯಕಾರಿಯಾಗದು. ಆದ್ದರಿಂದಲೇ ಭಾರತೀಯ ದರ್ಶನಗಳು ಪೂರ್ವೋಕ್ತವಾದ ವೇದವನ್ನೇ ಪ್ರಧಾನವಾಗಿ ಆಶ್ರಯಿಸಿವೆ.

ವೇದ ಪ್ರಾಮಾಣ್ಯದಲ್ಲಿಯೂ ಮತಿಭೇದದಿಂದ ಚಾರ್ವಾಕ-ಬೌದ್ಧದರ್ಶನಗಳು ಪ್ರವೃತ್ತವಾದವು.

## ಚಾರ್ವಾಕ ದರ್ಶನ

ಚಾರ್ವಾಕರು ವೇದವನ್ನು ಪ್ರಮಾಣವೆಂದು ಅಂಗೀಕರಿಸುವುದಿಲ್ಲ. ಇವರ ಮತದಂತೆ ದೇವರಿಲ್ಲ, ಜೀವಾತ್ಮರೂ ಇಲ್ಲ. ಜಗತ್ತು ಸ್ವತಃ ಸಿದ್ಧವಾದದ್ದು. ಮನುಷ್ಯನು ಸತ್ತಮೇಲೆ ಅವನ ಸಮಾಪ್ತಿಯಾದಂತೆಯೇ ಸರಿ. ಕಾರ್ಯಕಾರಣ ಭಾವವೆಂಬ ಯುಕ್ತಿಯನ್ನೂ ಇವರು ಮಾನ್ಯ ಮಾಡುವುದಿಲ್ಲ. ಪಾಪ-ಪುಣ್ಯಗಳೆಂಬುದು ಲೋಕನಿರ್ವಹಣೆಗಾಗಿ ಕಲ್ಪಿತವಾಗಿವೆ. ಮನುಷ್ಯನು ಸಮಾಜದಲ್ಲಿ ಸರ್ವಸಂಮ್ಮತವಾದ ನೀತಿಯಿಂದ ಜೀವಿಸಬೇಕಾದದ್ದು ಆವಶ್ಯಕ.

ಕಳ್ಳತನ, ಮೋಸ ಮೊದಲಾದವು ದುಷ್ಕರ್ಮಗಳು, ಅವುಗಳಿಂದ ಸಮಾಜಕ್ಕೆ ಕೇಡಾಗುವುದು ನಮಗೆ ಪ್ರತ್ಯಕ್ಷವೇ ಆಗಿದೆ. ಆದ್ದರಿಂದ ಜನರು ಸೌಜನ್ಯದಿಂದ ಬಾಳಬೇಕಾದದ್ದು ಆವಶ್ಯಕ. ರೋಗ ಮುಂತಾದ ಬಾಧೆಗಳನ್ನು ಚಿಕಿತ್ಸೆ ಮುಂತಾದ ಮಾನುಷ ಪ್ರಯತ್ನಗಳಿಂದ ಪರಿಹರಿಸಿಕೊಳ್ಳಬೇಕು ಎಂಬುದು ಚಾರ್ವಾಕ ದರ್ಶನದ ತಾತ್ಪರ್ಯ.

## ಬೌದ್ಧ ದರ್ಶನ

ಬೌದ್ಧರು ವೇದವನ್ನು ಪ್ರಮಾಣವೆಂದು ಅಂಗೀಕರಿಸುವುದಿಲ್ಲ. ಬುದ್ಧನೆಂಬ ತತ್ತ್ವಜ್ಞಾನಿಯ ಉಪದೇಶವೇ ಬೌದ್ಧರಿಗೆ ಪ್ರಮಾಣ. ಬುದ್ಧನು ಯಾವ ಗ್ರಂಥವನ್ನೂ ಬರೆಯಲಿಲ್ಲ. ಅವನು ಕಾಲವಾದ ಮೇಲೆ ಸುಮಾರು ಮೂರು ನಾಲ್ಕು ಶತಮಾನಗಳ ಅನಂತರ ಬೌದ್ಧ ವಿದ್ವಾಂಸರು ಸಂಪ್ರದಾಯದಿಂದ ಬಂದ ಬುದ್ಧನ ಹೇಳಿಕೆಗಳನ್ನು ಸಂಗ್ರಹಿಸಿದರು. ಈ ಉಪದೇಶ ಗ್ರಂಥಗಳಿಗೆ 'ಪಿಟಕ'ಗಳೆಂದು ಹೆಸರು. ಅವುಗಳಲ್ಲಿಯೂ ಅಭಿಪ್ರಾಯಭೇದಗಳಿಂದ 'ಸೂತ್ರ ಪಿಟಕ', 'ವಿನಯ ಪಿಟಕ', 'ಅಭಿಧರ್ಮ ಪಿಟಕ' ಎಂದು ಮೂರು ಪಿಟಕಗಳಾದವು. ಅವೆಲ್ಲವೂ ಪಾಳೀ ಭಾಷೆಯಲ್ಲಿವೆ. ಅನಂತರ ಇನ್ನಷ್ಟು ಮತಭೇದಗಳು ಒದಗಿ ಸೌತ್ರಾಂತಿಕ, ವೈಭಾಷಿಕ, ವಿಜ್ಞಾನವಾದ, ಮಾಧ್ಯಮಿಕ ಎಂಬ ನಾಲ್ಕು ಭೇದಗಳಾದವು.

ಬೌದ್ಧರು ಪ್ರತ್ಯಕ್ಷ, ಅನುಮಾನ ಎಂಬ ಎರಡು ಪ್ರಮಾಣಗಳನ್ನು ಒಪ್ಪುತ್ತಾರೆ. ಆದರೆ ಪ್ರತ್ಯಕ್ಷವೇ ಪರಮಾರ್ಥವಲ್ಲ. ಅದೇ ಪರಮಾರ್ಥವಾದರೆ ಬಾಲಕರಿಗೂ ವಿದ್ವಾಂಸರಿಗೂ ಭೇದವೇ ಇಲ್ಲದೆ ಹೋದೀತು. ಎಲ್ಲವೂ ಕ್ಷಣಿಕವಾದದ್ದು. ಆತ್ಮನೆಂಬ ಅತಿರಿಕ್ತ ವಸ್ತುವಿಲ್ಲ. ''ನಾನು ಆತ್ಮ ಸರ್ವದಾ ಇರತಕ್ಕವನು'' ಇತ್ಯಾದಿ ಭಾವನೆಗಳಿದ್ದರೆ ಅಹಂಕಾರವು ಪ್ರಬಲವಾಗಿ ಮಾನವನು ದುಷ್ಕಾರ್ಯದಲ್ಲಿ ಪ್ರವೃತ್ತನಾಗುತ್ತಾನೆ. ಆದ್ದರಿಂದ ಆತ್ಮನಿಲ್ಲವೆಂಬುದೇ ಸತ್ಯ. ಅಹಿಂಸೆಯೇ ಮುಖ್ಯವಾದ ಧರ್ಮ. ಇತ್ಯಾದಿ ವಿಚಾರಗಳು ಈ ಮತದಲ್ಲಿ ತುಂಬ ವಿಸ್ತೃತವಾಗಿ ಬಂದಿದೆ. ಆತ್ಮನಿಲ್ಲವೆಂಬ ಬೌದ್ಧರು ಬುದ್ಧನು ಅನೇಕ ಜನ್ಮಗಳನ್ನೆತ್ತಿದನೆಂಬ ಜಾತಕ ಕಥೆಗಳನ್ನು ನಂಬುತ್ತಾರೆ. ಹೀಗೆ ಅನ್ಯೋನ್ಯವಿರುದ್ಧವಾದ ಮತಭೇದಗಳು ಬೌದ್ಧ ದರ್ಶನದಲ್ಲಿವೆ. ಎಲ್ಲವೂ ಯುಕ್ತಿಪ್ರಧಾನವಾದವು. ಬುದ್ಧದೇವನ ನಿಜವಾದ ಉಪದೇಶವು ಯಾವುದೆಂದು ತಿಳಿಯುವುದು ಕಷ್ಟ.

## ಜೈನ ದರ್ಶನ

ಈ ದರ್ಶನವು ತೀರ್ಥಂಕರರ ಉಪದೇಶಗಳನ್ನು ಪ್ರಮಾಣವೆಂದು ಅಂಗೀಕರಿಸುತ್ತದೆ, ಸಹಜವಾದ ಸುಖ, ಜ್ಞಾನ, ವೀರ್ಯಾದಿಗಳು

ನಿರತಿಶಯವಾಗಿ ಯಾರಲ್ಲಿ ಅಭಿವ್ಯಕ್ತವಾಗಿವೆಯೋ ಅಂತಹ ಮಹಾಪುರುಷರಿಗೆ 'ತೀರ್ಥಂಕರ'ರೆಂದು ಹೆಸರು. ಒಟ್ಟು ಇಪ್ಪತ್ತನಾಲ್ಕು ತೀರ್ಥಂಕರರೆಂದು ಜೈನರು ನಂಬುತ್ತಾರೆ. ಪಾರ್ಶ್ವನಾಥ, ಮಹಾವೀರ ಎಂಬ ಇಬ್ಬರು ತೀರ್ಥಂಕರರು ಇತಿಹಾಸದಲ್ಲಿ ಕಂಡುಬರತಕ್ಕವರೆಂಬ ಅಭಿಪ್ರಾಯವಿದೆ. ಇವರು ಆತ್ಮನನ್ನೂ, ಪುನರ್ಜನ್ಮವನ್ನೂ ಒಪ್ಪುತ್ತಾರೆ. ಆದ್ದರಿಂದ ಪಾಪ-ಪುಣ್ಯಗಳೆಂಬ ಭೇದವುಂಟು. ಆತ್ಮನು ದೇಹವೆಲ್ಲವನ್ನೂ ವ್ಯಾಪಿಸಿಕೊಂಡಿರುವುದರಿಂದ ಅವನು ದೇಹ ಪ್ರಮಾಣನೆಂದು ಇವರ ಮತ. ಆನೆಯ ದೇಹದಲ್ಲಿ ಆತ್ಮವು ಆನೆಯಷ್ಟು ದೊಡ್ಡದಾಗಿರುತ್ತದೆ. ಇರುವೆಯ ದೇಹದಲ್ಲಿ ಆತ್ಮವು ಇರುವೆಯಷ್ಟು ಚಿಕ್ಕದಾಗಿರುತ್ತದೆ. ಆತ್ಮವು ದೇಹದಂತೆ ಬೆಳೆಯುತ್ತದೆ. ಚಿಕ್ಕದೂ ಆಗುತ್ತದೆ ಎಂಬ ಒಂದು ವಿಲಕ್ಷಣ ಸಿದ್ಧಾಂತವನ್ನು ಈ ದರ್ಶನವು ಅಂಗೀಕರಿಸಿದೆ. ತತ್ತ್ವಜ್ಞಾನದಿಂದ ಮೋಕ್ಷವಾಗುತ್ತದೆ. ಪುರುಷ ದೇಹದಲ್ಲಿಯೇ ಮೋಕ್ಷ. ಸ್ತ್ರೀಯರು ಪುರುಷರಾಗಿ ಹುಟ್ಟಿದ ಮೇಲೆ ಮಾತ್ರ ಮೋಕ್ಷವನ್ನು ಪಡೆಯಲು ಅರ್ಹರು. ಧರ್ಮ-ಅಧರ್ಮಗಳು ಸಂಸ್ಕಾರ ರೂಪದಿಂದ ಅಂತಃಕರಣಕ್ಕೆ ಅಂಟುವುದಿಲ್ಲ. ಅವು ಅತಿ ಸೂಕ್ಷ್ಮವಾದ ಪುದ್ಗಲಗಳ ರೂಪದಿಂದ ದೇಹಕ್ಕೆ ಅಂಟಿಕೊಳ್ಳುತ್ತವೆ ಎಂದು ಜೈನ ಮತವಿದೆ. ವೈದಿಕ ಮತದಂತೆ ಜೈನ ಮತವೂ ಸಹ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಚಾತುರ್ವರ್ಣ್ಯವನ್ನು ಅಂಗೀಕರಿಸುತ್ತದೆಂಬುದೊಂದು ವಿಶೇಷ.

## ನ್ಯಾಯ-ವೈಶೇಷಿಕ ದರ್ಶನಗಳು

ಈ ಎರಡು ದರ್ಶನಗಳಲ್ಲಿ ಹೆಚ್ಚಿನ ಭೇದವಿಲ್ಲ. ಇವನ್ನು ತಾರ್ಕಿಕ ದರ್ಶನ ಎಂಬ ಒಂದೇ ಶಬ್ದದಿಂದ ಕರೆಯಬಹುದು. ಅತ್ಯಲ್ಪ ವಿಷಯಗಳಲ್ಲಿ ಮತಭೇದವಿದ್ದರೂ ಅದನ್ನು ಗಣಿಸದೇ ಒಂದೇ ದರ್ಶನದಂತೆ ವ್ಯವಹಾರ ಬಂದಿದೆ. ನ್ಯಾಯದರ್ಶನಕ್ಕೆ ಗೌತಮ ಮುನಿಯೂ ವೈಶೇಷಿಕ ದರ್ಶನಕ್ಕೆ ಕಣಾದ ಮಹರ್ಷಿಯೂ ಸೂತ್ರಕಾರರಾದ ಮೂಲ ಪುರುಷರು. ಈ ತಾರ್ಕಿಕ ದರ್ಶನವು ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ, ಸಮವಾಯ, ಅಭಾವ ಎಂಬ ಸಪ್ತ ಪದಾರ್ಥಗಳನ್ನು ಅಂಗೀಕರಿಸುತ್ತವೆ. ವಿಶೇಷ, ಅಭಾವ ಎಂಬವನ್ನು ಪದಾರ್ಥವೆಂದು ಅಂಗೀಕರಿಸಿರುವುದೊಂದು ಇಲ್ಲಿನ ವಿಶೇಷವೆನ್ನಬಹುದು. ಪಂಚಮಹಾಭೂತಗಳನ್ನು ಮೂಲದ್ರವ್ಯಗಳೆಂದು ಈ ದರ್ಶನವು ಅಂಗೀಕರಿಸುತ್ತದೆ. ಸಾಂಖ್ಯದರ್ಶನವು ಅವ್ಯಕ್ತವೆಂಬ ಮೂಲ ಪ್ರಕೃತಿಯನ್ನು ಅಂಗೀಕರಿಸಿ ಅದರಿಂದ ಕ್ರಮವಾಗಿ ಪಂಚಭೂತಗಳು ಹುಟ್ಟಿದವೆಂದು ಹೇಳುತ್ತದೆ. ಈ ದರ್ಶನದಲ್ಲಿ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಎಂಬ ನಾಲ್ಕು ಪ್ರಮಾಣಗಳುಂಟು. ವೇದವು ಪರಮೋತ್ತಮವಾದ ಶಬ್ದಪ್ರಮಾಣ.

ಈಶ್ವರನಿದ್ದಾನೆ. ಅವನು ಸೃಷ್ಟಿ, ಸ್ಥಿತಿ, ಲಯ ಕರ್ತಾ. ಜೀವಾತ್ಮರು ಅಸಂಖ್ಯಾತರು. ಇವರೆಲ್ಲರೂ ವಿಭುಗಳು. ದಿಕ್, ಕಾಲ ಎಂಬ ಎರಡು ದ್ರವ್ಯಗಳೆಂದು ಈ ದರ್ಶನವು ಸ್ವೀಕರಿಸಿದೆ. ಜೀವೇಶ್ವರರ ಭೇದವನ್ನು ಅಂಗೀಕರಿಸಿರುವುದರಿಂದ ದ್ವೈತ ದರ್ಶನವೆನಿಸುತ್ತದೆ.

## ಪೂರ್ವಮೀಮಾಂಸಾ ದರ್ಶನ

ಈ ದರ್ಶನಕ್ಕೆ ಜೈಮಿನಿ ಎಂಬ ಮಹರ್ಷಿಯು ಸೂತ್ರಕಾರನಾಗಿದ್ದಾನೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬಿವು ಪುರುಷಾರ್ಥಗಳೆಂದು ಇವರು ಸ್ಥಾಪಿಸಿದ್ದಾರೆ. ಧರ್ಮವನ್ನು ಶ್ರುತಿ, ಸ್ಮೃತಿ, ಶಿಷ್ಟಾಚಾರಗಳಿಂದ ನಿರ್ಣಯಿಸಬೇಕು. ಶಬ್ದವು ನಿತ್ಯವೆಂದೂ ಉಚ್ಚಾರಣೆಯಿಂದ ಶಬ್ದವು ಅಭಿವ್ಯಕ್ತವಾಗುವುದೆಂದೂ ಈ ದರ್ಶನದ ಸಿದ್ಧಾಂತವಿದೆ. ಜಗತ್ತು ಅನಾದಿಯಾಗಿ ಇದೆಯೆಂದೂ, ಅದು ಈಶ್ವರ ನಿರ್ಮಿತವಲ್ಲವೆಂದೂ ಈ ದರ್ಶನವು ಹೇಳುತ್ತದೆ. ಈಶ್ವರನಿಲ್ಲವೆಂದು ಮೀಮಾಂಸಕರ ಸಿದ್ಧಾಂತವೆಂದರೆ ತಪ್ಪಾಗಲಾರದು. ಈ ದರ್ಶನದಲ್ಲಿ ಗೃಹಸ್ಥಾಶ್ರಮವೇ ಮುಖ್ಯವಾದುದ್ದು. ಪ್ರಭಾಕರ, ಕುಮಾರಿಲರೆಂಬ ಇಬ್ಬರು ವಿದ್ವಾಂಸರು ಈ ದರ್ಶನದಲ್ಲಿ ಪ್ರಧಾನ ಸ್ಥಾನವನ್ನು ಅಲಂಕರಿಸಿದ್ದಾರೆ. ಮುಖ್ಯವಾಗಿ ಚಾತುರ್ವರ್ಣ್ಯದ ಸ್ಥಾಪನೆಯು ಈ ದರ್ಶನದ ಪ್ರಧಾನ ವಿಷಯವಾಗಿದೆ. ಇದರ ವಿಚಾರವು ತುಂಬ ವಿಸ್ತೃತವಾಗಿ ಶಾಸ್ತ್ರದಲ್ಲಿ ಬಂದಿದೆ. ವೇದವು ಅಪೌರುಷೇಯವೆಂದೂ, ಅದನ್ನು ಯಾರೂ ನಿರ್ಮಿಸಲಿಲ್ಲವೆಂದೂ ಸ್ಪಷ್ಟವಾಗಿ ತಿಳಿಸಿದ್ದಾರೆ. ಯಾಗಾದಿ ಕರ್ಮಗಳನ್ನು ಮಾಡಿ ಸ್ವರ್ಗಾದಿ ಫಲಗಳನ್ನು ಪಡೆದು ಸುಖಿಸಬೇಕೆಂಬುದು ಈ ದರ್ಶನದ ನಿರ್ಣಯವೆಂದು ಹೇಳಬಹುದು.

## ಉತ್ತರಮೀಮಾಂಸಾ ದರ್ಶನ (ವೇದಾಂತ)

ಪೂರ್ವಮೀಮಾಂಸಕರು ವೇದದ ಕರ್ಮಕಾಂಡವನ್ನು ಪ್ರಧಾನವಾಗಿ ವಿಮರ್ಶಿಸಿದ್ದಾರೆ. ಉತ್ತರಮೀಮಾಂಸಕರು ವೇದಾಂತವೆನಿಸಿದ ಉಪನಿಷತ್ತುಗಳನ್ನು ಪ್ರಧಾನವಾಗಿ ವಿಚಾರ ಮಾಡಿದ್ದಾರೆ. ಆದ್ದರಿಂದ ಇವರಿಗೆ ವೇದಾಂತಿಗಳೆಂದೂ ಔಪನಿಷದರೆಂದೂ ಹೆಸರಿದೆ. ಋಗ್ವೇದಾದಿ ಸಂಹಿತಾ, ಆರಣ್ಯಕ ಬ್ರಾಹ್ಮಣಗಳನ್ನು 'ಕರ್ಮಕಾಂಡ', 'ಜ್ಞಾನಕಾಂಡ' ಎಂದು ಎರಡು ವಿಭಾಗವಾಗಿ ವಿಂಗಡಿಸಲಾಗಿದೆ. ಮೀಮಾಂಸಕರಿಗೆ ಕರ್ಮಕಾಂಡವು ಪ್ರಧಾನವಾದರೆ ವೇದಾಂತಿಗಳಿಗೆ ಜ್ಞಾನಕಾಂಡವು ಪ್ರಧಾನವಾಗಿದೆ.

ವೇದಾಂತ ಶಾಸ್ತ್ರದಲ್ಲಿ ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ – ಇವು ಮೂರು ಪ್ರಧಾನ ಗ್ರಂಥಗಳು. ಪ್ರಸ್ಥಾನತ್ರಯವೆಂದು ಇವಕ್ಕೆ ಹೆಸರಿದೆ. ಉಳಿದ

ಎಲ್ಲ ದರ್ಶನಗಳು ವೇದಾಂತ ದರ್ಶನಕ್ಕೆ ವಿರುದ್ಧವಾದವು. ಚಾರ್ವಾಕಾದಿ ದರ್ಶನಗಳನ್ನು ದ್ವೈತ ದರ್ಶನಗಳೆಂದೂ ವೇದಾಂತವನ್ನು ಅದ್ವೈತ ದರ್ಶನವೆಂದೂ ಹೇಳಬಹುದು. ಶ್ರೀ ಶಂಕರಾಚಾರ್ಯರು ಈ ದರ್ಶನವನ್ನು ಮಾತ್ರ ವೇದಾಂತವೆಂದೂ, ಔಪನಿಷದ ದರ್ಶನವೆಂದೂ ಕರೆದಿದ್ದಾರೆ. ಇದೊಂದೇ ಅದ್ವೈತ ದರ್ಶನವೆಂದೂ ಉಳಿದವೆಲ್ಲವೂ ದ್ವೈತ ದರ್ಶನಗಳೆಂದೂ ಅವರ ಆಶಯ. ವೇದಾಂತದಲ್ಲಿಯೂ ದ್ವೈತ, ವಿಶಿಷ್ಟಾದ್ವೈತ ಮುಂತಾದ ಒಳಭೇದಗಳುಂಟು. ಶ್ರೀ ಶಂಕರಾಚಾರ್ಯರು ಪ್ರಸ್ಥಾನತ್ರಯ ಭಾಷ್ಯಗಳಲ್ಲಿ ಸಾಂಖ್ಯಾದಿ ದರ್ಶನಗಳನ್ನು ಪರಾಮರ್ಶಿಸಿದ್ದರೂ ದ್ವೈತ, ವಿಶಿಷ್ಟಾದ್ವೈತಗಳ ಸೂಚನೆಯನ್ನು ಕೂಡ ಅವರು ನೀಡಿಲ್ಲ. ಆದ್ದರಿಂದ ದ್ವೈತ ವೇದಾಂತವೇ ಮೊದಲಾದ ಭೇದಗಳು ಆಚಾರ್ಯರ ಕಾಲದಿಂದ ಈಚೆಗೆ ಉತ್ಪನ್ನವಾಗಿವೆಯೆಂದು ಹೇಳಬಹುದು. ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ ॥ ಎಂಬುದು ವೇದಾಂತ ದರ್ಶನದ ಪರಮ ಸಿದ್ಧಾಂತ. ಪರಮಾತ್ಮನೊಬ್ಬನೇ ಸತ್ಯ. ಎಲ್ಲ ಜೀವರೂ ಪರಮಾರ್ಥದಲ್ಲಿ ಪರಮಾತ್ಮನೇ ಆಗಿದ್ದಾರೆ. ಮಾಯೆ ಎಂಬುದು ಪರಮಾತ್ಮನ ಶಕ್ತಿವಿಶೇಷ. ಅದಕ್ಕೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಮಾಯೆಯಿಂದ ಈ ಜಗತ್ತಿನ ನಿರ್ಮಾಣವಾಗಿದೆ. ಇದು ತೋರಿಕೆಯ ಸತ್ಯ. ವಾಸ್ತವವಾಗಿ ಜಗತ್ತು ಮಾಯಾಕಲ್ಪಿತವಾದ್ದರಿಂದ ಅಸತ್ಯ ಎಂಬುದು ಈ ದರ್ಶನದ ಸಿದ್ಧಾಂತವಾಗಿದೆ.

## ಯೋಗ ದರ್ಶನ

ಇದಕ್ಕೆ ಪತಂಜಲಿ ಮಹರ್ಷಿಗಳು ಸೂತ್ರಕಾರರು. ಹಿರಣ್ಯಗರ್ಭನೇ ಯೋಗಸಿದ್ಧಾಂತದ ಪ್ರಥಮ ಪ್ರವರ್ತಕನೆಂದು ಯಾಜ್ಞವಲ್ಕ್ಯರು ಹೇಳಿದ್ದಾರೆ. ಈ ಶಾಸ್ತ್ರದಲ್ಲಿ ಯೋಗೀಶ್ವರರ ಸಿದ್ಧಿಗಳೂ, ಮಹಿಮೆಗಳೂ ವರ್ಣಿತವಾಗಿವೆ. ಸಾಂಖ್ಯಸಿದ್ಧಾಂತದಂತೆಯೇ ಇದರಲ್ಲಿಯೂ ಮೂಲಪ್ರಕೃತಿಯೇ ಜಗತ್ತಿನ ಉಪಾದಾನ ಕಾರಣವೆಂದು ಹೇಳಲಾಗಿದೆ. ಸೂತ್ರಕಾರರಾದ ಪತಂಜಲಿ ಮುನಿಗಳು ಈಶ್ವರನನ್ನು ಅಂಗೀಕರಿಸಿದ್ದಾರೆ. ಇದೂ ದ್ವೈತ ದರ್ಶನವೇ ಹೌದು. ಪ್ರಾಯೇಣ ಸಾಂಖ್ಯಮತವನ್ನು ಇದು ಅನುಸರಿಸುವುದರಿಂದ ಯೋಗ ದರ್ಶನವನ್ನು ಸೇಶ್ವರ ಸಾಂಖ್ಯವೆಂದು ಕರೆಯುತ್ತಾರೆ. ಜೀವಾತ್ಮನು ಸಮಸ್ತ ಪ್ರಪಂಚದ ಸಂಬಂಧವನ್ನು ತೊರೆದು ತನ್ನ ನಿಜ ಸ್ವರೂಪದಲ್ಲಿ ಶಾಶ್ವತನಾಗಿ ನಿಲ್ಲುವುದೇ ಮೋಕ್ಷವೆಂದು ಯೋಗಶಾಸ್ತ್ರದ ನಿರ್ಣಯವಾಗಿದೆ. ಪ್ರಪಂಚದ ಸಂಬಂಧವನ್ನು ಕಳೆದುಕೊಳ್ಳಲು ಜೀವರಿಗೆ ಈಶ್ವರನು ಸಹಾಯ ಮಾಡುತ್ತಾನೆಂದು ಯೋಗ ದರ್ಶನದ ಆಶಯ.

ಇದುವರೆಗೆ ಭಾರತೀಯ ದರ್ಶನಗಳ ಸ್ಥೂಲವಾದ ಒಂದು ರೂಪರೇಖೆಗಳನ್ನು ತೋರಿಸಲಾಯಿತು. ಈಗ ಪ್ರಕೃತವಾದ ಸಾಂಖ್ಯ ದರ್ಶನವನ್ನು ವಿಶದವಾಗಿ ಪರಿಶೀಲಿಸಬಹುದು.

## ಸಾಂಖ್ಯ ದರ್ಶನ

ಇದುವರೆಗೆ ನಿರೂಪಿಸಿದ ಎಲ್ಲ ದರ್ಶನಗಳಿಗಿಂತಲೂ ಸಾಂಖ್ಯ ದರ್ಶನವು ಪ್ರಾಚೀನವಾದ ದರ್ಶನವೆಂದು ಹೇಳಬಹುದು. ಕಪಿಲನೆಂಬ ಸಿದ್ಧಪುರುಷನು ಈ ದರ್ಶನದ ಪ್ರವರ್ತಕನೆಂದು ಹೇಳುತ್ತಾರೆ. ಆದರೆ ಕಪಿಲನು ರಚಿಸಿದ ಯಾವ ಗ್ರಂಥವೂ ದೊರಕಿಲ್ಲ. ಸಾಂಖ್ಯ ಎಂಬ ಹೆಸರು ಬಂದುದಕ್ಕೆ ಅನೇಕ ಕಾರಣಗಳನ್ನು ಹೇಳಿರುವುದುಂಟು. ಈ ದರ್ಶನದಲ್ಲಿ ಪ್ರಕೃತಿ, ಪುರುಷ ಇತ್ಯಾದಿಯಾಗಿ ಇಪ್ಪತ್ತೈದು ತತ್ತ್ವಗಳನ್ನು ಎಣಿಸಿ ಹೇಳಿ ಈ ಪಂಚವಿಂಶತಿ ತತ್ತ್ವಗಳನ್ನು ತಿಳಿದವನು ಮುಕ್ತನಾಗುತ್ತಾನೆ ಎಂದು ವರ್ಣಿಸಲಾಗಿದೆ. ಹೀಗೆ ಸಂಖ್ಯಾಪ್ರಧಾನವಾದ್ದರಿಂದ ಇದಕ್ಕೆ 'ಸಾಂಖ್ಯ'ವೆಂಬ ಹೆಸರು ಬಂತು ಎಂದು ಕೆಲವರು ಹೇಳುತ್ತಾರೆ. ಈ ದರ್ಶನದಲ್ಲಿಯೇ ಹೇಳಿರುವ ವಿವೇಕ ಖ್ಯಾತಿಯೇ ಸಂಖ್ಯಾ ಎನಿಸುತ್ತದೆ. ಖ್ಯಾತಿ ಎಂದರೆ ಜ್ಞಾನ. ಪ್ರಕೃತಿ-ಪುರುಷರ ವಸ್ತುತತ್ತ್ವವನ್ನು ವಿವೇಚಿಸಿ ತಿಳಿಯುವುದೇ ವಿವೇಕ ಖ್ಯಾತಿ. ಸಂಖ್ಯಾ ಎಂದರೆ ಸಮೀಚೀನವಾದ ಜ್ಞಾನ ಎಂದರ್ಥ. ಈ ಸಂಖ್ಯಾ ಶಬ್ದದಿಂದ ಸಾಂಖ್ಯ ಎಂಬ ಪದವು ನಿಷ್ಪನ್ನವಾಗಿದೆಯೆಂದು ಹೇಳುವುದೇ ಸೂಕ್ತವೆಂದು ತೋರುತ್ತದೆ.

## ಸಾಂಖ್ಯ ಶಾಸ್ತ್ರದ ಪ್ರಾಚೀನತೆ

ಕಪಿಲ ಮುನಿಯು ಈ ಶಾಸ್ತ್ರದ ಆದ್ಯ ಪ್ರವರ್ತಕನೆಂದು ತಿಳಿದುಬರುತ್ತದೆ. ಈತನು ರಚಿಸಿದ ಸಾಂಖ್ಯಸೂತ್ರಗಳು ನಮಗೆ ಉಪಲಬ್ಧವಾಗಿಲ್ಲ. ಸೂತಸಂಹಿತೆಯ ವ್ಯಾಖ್ಯಾನದಲ್ಲಿ ಮಾಧವ ಮಂತ್ರಿಯು ''ಸತ್ತ್ವ ರಜಸ್ತಮೋಗುಣಾನಾಂ ಸಾಮ್ಯಾವಸ್ಥಾ ಪ್ರಕೃತಿಃ'' ಎಂಬ ಸಾಂಖ್ಯಸೂತ್ರವನ್ನು ಉದಾಹರಿಸಿದ್ದಾನೆ. ಮಾಧವ ಮಂತ್ರಿಯ ಕಾಲ ಕ್ರಿ.ಶ. ಹದಿನಾಲ್ಕನೆಯ ಶತಮಾನ. ಕಪಿಲನ ಸಾಕ್ಷಾತ್ ಶಿಷ್ಯನಾದ ಆಸುರಿಯು ಶ್ಲೋಕರೂಪದಲ್ಲಿ ಸಾಂಖ್ಯ ದರ್ಶನವನ್ನು ವಿವರಿಸಿದ್ದನೆಂದು ಹೇಳಬಹುದು. ಜೈನರ ಸ್ಯಾದ್ವಾದ ಮಂಜರಿಯಲ್ಲಿ ಆಸುರಿಯ ಒಂದು ಶ್ಲೋಕವು ಉದಾಹೃತವಾಗಿದೆ. ಆಸುರಿಯ ಶಿಷ್ಯ ಪಂಚಶಿಖ. ಈತನು 'ಷಷ್ಟಿತಂತ್ರ'ವೆಂಬ ವಿಸ್ತಾರವಾದ ಗ್ರಂಥವನ್ನು ರಚಿಸಿದ್ದನೆಂದು ಗೊತ್ತಾಗುತ್ತದೆ. ಸಾಂಖ್ಯದ ಇಪ್ಪತ್ತೈದು ತತ್ತ್ವಗಳನ್ನು ಅರವತ್ತು ತತ್ತ್ವಗಳನ್ನಾಗಿ ವಿಂಗಡಿಸಿದ್ದರಿಂದ ಷಷ್ಟಿತಂತ್ರವೆಂಬ ಹೆಸರು ಬಂದಿರುತ್ತದೆ. ಅನಂತರ ಸಾಂಖ್ಯ ದರ್ಶನಕ್ಕೆ ಈಶ್ವರಕೃಷ್ಣನು ರಚಿಸಿದ ಸಾಂಖ್ಯಕಾರಿಕೆಯು

ಸುಪ್ರಸಿದ್ಧವಾಗಿ ಉಳಿದು ಬಂದಿದೆ. ಇದೊಂದು ಪ್ರಾಮಾಣಿಕವಾದ ಗ್ರಂಥವೆಂದು ಶ್ರೀ ಶಂಕರಾಚಾರ್ಯರು ಅಂಗೀಕರಿಸಿದ್ದಾರೆ. ಈ ಸಾಂಖ್ಯಕಾರಿಕೆಯು ಚೀನಾ ಭಾಷೆಯಲ್ಲಿಯೂ ಅನೂದಿತವಾಗಿದೆ. ಈಶ್ವರಕೃಷ್ಣನು ಕ್ರಿಸ್ತಶಕ ಒಂದನೇ ಶತಮಾನದವನೆಂದು ಇತಿಹಾಸಕಾರರ ಅಭಿಪ್ರಾಯ. ಈಶ್ವರಕೃಷ್ಣನ ಸಾಂಖ್ಯಕಾರಿಕೆಗೆ ಗೌಡಪಾದರಚಿತವಾದ ಭಾಷ್ಯವು ಉಪಲಬ್ಧವಾಗಿದೆ. ಈ ಗೌಡಪಾದರು ಯಾರು ? ಶ್ರೀ ಶಂಕರಾಚಾರ್ಯರ ಪರಮ ಗುರುಗಳಾದ ಶ್ರೀ ಗೌಡಪಾದರಾಗಿದ್ದರೆ ಇವರ ಕಾಲ ಕ್ರಿಸ್ತಶಕ ಏಳನೆಯ ಶತಮಾನವಾಗುತ್ತದೆ. ಈ ಭಾಷ್ಯವು ತುಂಬ ಲಲಿತ ಶೈಲಿಯಲ್ಲಿದ್ದು ಅನೇಕ ನೂತನ ವಿಷಯಗಳನ್ನು ತಿಳಿಸಿಕೊಡುತ್ತದೆ. ಭಾಷ್ಯದ ಕಡೆಯಲ್ಲಿ ಈ ಕೆಳಗೆ ಕಂಡ ಶ್ಲೋಕವಿದೆ.

**ಸಾಂಖ್ಯಂ ಕಪಿಲಮುನಿನಾ ಪ್ರೋಕ್ತಂ ಸಂಸಾರವಿಮುಕ್ತಿಕರಣಂ ಹಿ ।**
**ಯತ್ರೈತಾಃ ಸಪ್ತತಿರಾರ್ಯಾ ಭಾಷ್ಯಂ ಚಾತ್ರ ಗೌಡಪಾದಕೃತಮ್ ॥**

ಇದರಿಂದ ಉಪಲಬ್ಧ ಭಾಷ್ಯವು ಗೌಡಪಾದರಚಿತವೆಂದು ತಿಳಿದುಬರುತ್ತದೆ.

ಪ್ರಸಿದ್ಧರಾದ ಶ್ರೀ ಗೌಡಪಾದರು ಅದ್ವೈತ ವೇದಾಂತಿಗಳೆಂದೂ ಶ್ರೀ ಶಂಕರಾಚಾರ್ಯರ ಪರಮಗುರುಗಳೆಂದೂ ನಿಶ್ಚಿತವಾಗಿದೆ. ಮಾಂಡೂಕ್ಯೋಪನಿಷತ್ತಿಗೆ ಇವರು ಬರೆದ ಒಂದು ನೂರು ಕಾರಿಕೆಗಳಿಗೆ ಶ್ರೀ ಶಂಕರಾಚಾರ್ಯರು ವಿಸ್ತೃತವಾದ ಭಾಷ್ಯವನ್ನು ರಚಿಸಿದ್ದಾರೆ. ಅಲ್ಲದೆ ಸಾಂಖ್ಯಮತವು ದ್ವೈತಪ್ರಧಾನವಾದದ್ದು. ಸಾಂಖ್ಯಮತವನ್ನು ಬಾದರಾಯಣರು ಬ್ರಹ್ಮಸೂತ್ರಗಳಲ್ಲಿ ಖಂಡಿಸಿದ್ದಾರೆ. ಶ್ರೀ ಶಂಕರರು ಸೂತ್ರಭಾಷ್ಯದಲ್ಲಿ ವಿಸ್ತಾರವಾಗಿ ಸಾಂಖ್ಯಮತವನ್ನು ದೂಷಿಸಿದ್ದಾರೆ. ಹೀಗಿರುವಾಗ ಅದ್ವೈತಾಚಾರ್ಯರಾದ ಶ್ರೀ ಗೌಡಪಾದರು ಸಾಂಖ್ಯಕಾರಿಕೆಗಳಿಗೆ ಭಾಷ್ಯವನ್ನು ರಚಿಸಿದರೂ, ಆ ಮತದಲ್ಲಿ ಅಸ್ವರಸವನ್ನು ಎಲ್ಲಾದರೂ ಸೂಚಿಸಬಹುದಾಗಿತ್ತು. ಎಲ್ಲಿಯೂ ಸೂಚಿಸಿಲ್ಲ. ಆದ್ದರಿಂದ ಈ ಗೌಡಪಾದರೆಂಬುವರು ಇನ್ನೊಬ್ಬರಾಗಿರಬಹುದೆಂಬ ಸಂಶಯವು ಮೂಡುತ್ತದೆ. ಅಥವಾ ಸಾಂಖ್ಯಮತವನ್ನು ಪೂರ್ವಪಕ್ಷಸ್ಥಾನದಲ್ಲಿರಿಸಿ ವೇದಾಂತ ಗ್ರಂಥದಲ್ಲಿ ಸಿದ್ಧಾಂತವನ್ನು ಸ್ಥಾಪಿಸಿದರಾಯಿತು ಎಂದು ಸುಮ್ಮನಾಗಿರಬಹುದು.

ವಿಜ್ಞಾನ ಭಿಕ್ಷುವು ಸಾಂಖ್ಯದ ಕೊನೆಯ ಆಚಾರ್ಯನೆಂದು ಹೇಳಬಹುದು. ಈತನು ಹದಿನಾರನೆಯ ಶತಮಾನದ ಪೂರ್ವಾರ್ಧದಲ್ಲಿ ಕಾಶಿಯಲ್ಲಿದ್ದನೆಂದು ತಿಳಿದುಬರುತ್ತದೆ. ಈತನು ಸ್ವತಂತ್ರ ವಿಚಾರಪರನಾದ ಆಚಾರ್ಯ, ಸಾಂಖ್ಯ, ವೇದಾಂತ ಮತ್ತು ಯೋಗ ದರ್ಶನಗಳ ಮೇಲೆ ಈತನು ಗ್ರಂಥಗಳನ್ನು ರಚಿಸಿದ್ದಾನೆ.

## ತತ್ತ್ವಮೀಮಾಂಸೆ

ಸಾಂಖ್ಯ ದರ್ಶನದಲ್ಲಿ ಒಟ್ಟು ಇಪ್ಪತ್ತೈದು ತತ್ತ್ವಗಳಿರುತ್ತವೆ. ಇವುಗಳ ಸತ್ಯಸ್ವರೂಪವನ್ನು ಅರಿತವನು ಮುಕ್ತನಾಗುತ್ತಾನೆಂದು ಇದರ ಸಿದ್ಧಾಂತವಿದೆ. ಈ ಜಗತ್ತನ್ನು ಜಡ ಮತ್ತು ಚೇತನ ಎಂದು ಎರಡು ವಿಧವಾಗಿ ವಿಂಗಡಿಸಬಹುದಷ್ಟೆ. ಈ ಮಾರ್ಗದಲ್ಲಿಯೇ ಸಾಂಖ್ಯರ ತತ್ತ್ವವಿಚಾರವು ಸಾಗುತ್ತದೆ. ಇದನ್ನೇ ಪ್ರಕೃತಿ-ಪುರುಷ ಎಂದು ಈ ದರ್ಶನದಲ್ಲಿ ನಾಮಕರಣ ಮಾಡಲಾಗಿದೆ. ಪ್ರಕೃತಿಯನ್ನು ಮೂಲಪ್ರಕೃತಿ, ಪ್ರಧಾನ ಅವ್ಯಕ್ತ ಎಂದು ಈ ದರ್ಶನದಲ್ಲಿ ವ್ಯವಹರಿಸಲಾಗಿದೆ. ಪುರುಷನೇ ಆತ್ಮ, ಚೇತನ ಎಂದು ತಿಳಿಯಬಹುದು. ನಾವು ಕಾಣುವ ಈ ವಿಶ್ವವು ಮೂಲಪ್ರಕೃತಿಯಿಂದಾದದ್ದು. ಈ ಪ್ರಕೃತಿಯನ್ನು ಪ್ರಕೃತಿ, ವಿಕೃತಿ, ಪ್ರಕೃತಿ-ವಿಕೃತಿ ಎಂದು ಮೂರು ವಿಧವಾಗಿ ವಿಂಗಡಿಸಬಹುದು. ಹೇಗೆಂದರೆ:

೧) ಎಲ್ಲ ಜಡ ಪ್ರಪಂಚಕ್ಕೂ ಕಾರಣವಾದದ್ದು, ಅದು ಯಾವುದರ ಕಾರ್ಯವೂ ಅಲ್ಲ. ಅದೇ ಮೂಲಪ್ರಕೃತಿ.

೨) ಕೆಲವು ತತ್ತ್ವಗಳು ಕಾರಣದಿಂದ ಹುಟ್ಟುವುದರಿಂದ ಕಾರ್ಯಗಳೆನಿಸುತ್ತವೆ. ಸ್ವಯಂ ಯಾವುದನ್ನೂ ಉತ್ಪನ್ನ ಮಾಡುವುದಿಲ್ಲ– ಇವು ವಿಕೃತಿಗಳು.

೩) ಇನ್ನು ಕೆಲವು ಇನ್ನೊಂದರಿಂದ ಹುಟ್ಟುತ್ತವೆ. ಸ್ವಯಂ ಇನ್ನು ಕೆಲವನ್ನು ಉತ್ಪಾದಿಸುತ್ತವೆ. ಇವು ಕಾರ್ಯಗಳೂ ಹೌದು, ಕಾರಣಗಳೂ ಹೌದು. ಇವನ್ನು ಪ್ರಕೃತಿ-ವಿಕೃತಿಗಳೆಂದು ಕರೆಯುತ್ತಾರೆ.

೪) ಕೆಲವು ತತ್ತ್ವಗಳು ಕಾರ್ಯಗಳೂ ಅಲ್ಲ; ಕಾರಣಗಳೂ ಅಲ್ಲ. ಎಂದರೆ ಪ್ರಕೃತಿಯೂ ಅಲ್ಲ; ವಿಕೃತಿಯೂ ಅಲ್ಲ. ಉದಾಹರಣೆಗೆ ಪುರುಷರು (ಚೇತನಗಳು-ಜೀವಾತ್ಮರು) ಕೆಳಗೆ ಕಂಡ ಕೋಷ್ಟಕದಲ್ಲಿ ಇದು ಸ್ಪಷ್ಟವಾಗಿದೆ:

| ಸ್ವರೂಪ | ಸಂಖ್ಯೆ | ನಾಮ |
|---|---|---|
| ೧) ಪ್ರಕೃತಿ | ೧ | ಪ್ರಧಾನ, ಅವ್ಯಕ್ತ, ಪ್ರಕೃತಿ |
| ೨) ವಿಕೃತಿ | ೧೬ | ಪಂಚ ಜ್ಞಾನೇಂದ್ರಿಯಗಳು – ಚಕ್ಷುಃ, ಘ್ರಾಣ, ರಸನಾ, ತ್ವಕ್ ಮತ್ತು ಶ್ರೋತ್ರ. ಪಂಚಕರ್ಮೇಂದ್ರಿಯಗಳು – ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥ. ಮನಸ್ಸು ಮತ್ತು ಪಂಚ ಮಹಾಭೂತಗಳು – ಪೃಥ್ವಿ, ಅಪ್, ತೇಜಸ್ಸು, ವಾಯು ಮತ್ತು ಆಕಾಶ. |

| ಸ್ವರೂಪ | ಸಂಖ್ಯೆ | ನಾಮ |
|---|---|---|
| ೩) ಪ್ರಕೃತಿ-ವಿಕೃತಿ | ೭ | ಮಹತತ್ತ್ವ, ಅಹಂಕಾರ, ತನ್ಮಾತ್ರ – ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ, ಗಂಧತನ್ಮಾತ್ರ. |
| ೪) ಪ್ರಕೃತಿಯೂ ಅಲ್ಲ ವಿಕೃತಿಯೂ ಅಲ್ಲ | ೧ | ಪುರುಷ |

ಈ ಮೇಲಿನ ಕೋಷ್ಟಕದಲ್ಲಿ ಕಾಣಿಸಿದ ತತ್ತ್ವಗಳ ಉತ್ಪತ್ತಿಯನ್ನು ಹೀಗೆ ನಿರೂಪಿಸಬಹುದು. ಅವ್ಯಕ್ತವೆಂಬ ಒಂದು ಅತಿಸೂಕ್ಷ್ಮವಾದ ಮೂಲತತ್ತ್ವವಿದೆ. ಇದೇ ಮೂಲಪ್ರಕೃತಿ, ಇದರಿಂದ ಮಹತತ್ತ್ವವೂ (ಬುದ್ಧಿ) ಅದರಿಂದ ಅಹಂಕಾರವೂ, ಅಹಂಕಾರದಿಂದ ಶಬ್ದತನ್ಮಾತ್ರ, ಸ್ಪರ್ಶತನ್ಮಾತ್ರ, ರೂಪತನ್ಮಾತ್ರ, ರಸತನ್ಮಾತ್ರ, ಗಂಧತನ್ಮಾತ್ರ ಎಂಬ ಪಂಚತನ್ಮಾತ್ರಗಳು ಹುಟ್ಟುತ್ತವೆ. ಈ ಪಂಚ ತನ್ಮಾತ್ರಗಳಿಂದ ಕ್ರಮವಾಗಿ ಆಕಾಶ, ವಾಯು, ಅಗ್ನಿ, ಜಲ, ಪೃಥ್ವಿ ಎಂಬ ಪಂಚಮಹಾಭೂತಗಳು ಉದಯಿಸುತ್ತವೆ. ಈ ಪಂಚಮಹಾಭೂತಗಳು ಪಂಚೀಕರಣವೆಂಬ ವಿಧಾನದಿಂದ ಪರಸ್ಪರ ಸಂಮಿಲಿತವಾಗಿವೆ ಮತ್ತು ಸ್ಥೂಲವಾಗಿದ್ದು ಇಂದ್ರಿಯ ಗೋಚರವಾಗುತ್ತವೆ. ತನ್ಮಾತ್ರಗಳು ಪಂಚೀಕರಣದಿಂದ ಸಂಮಿಲಿತವಾಗದೇ ಕೇವಲ ಸ್ವಸ್ವರೂಪದಲ್ಲಿದ್ದು ಇಂದ್ರಿಯ ಗೋಚರವಾಗುವುದಿಲ್ಲ. ಈ ಪಂಚತನ್ಮಾತ್ರಗಳೂ ಸಹ ಒಂದರಿಂದೊಂದು ಕ್ರಮವಾಗಿ ಹುಟ್ಟುತ್ತವೆ.

ಮೂಲಪ್ರಕೃತಿಯು ಸತ್ವ-ರಜ-ತಮೋಗುಣಗಳೆಂಬ ಮೂರು ಗುಣಗಳ ಸಮುದಾಯ. ಇಲ್ಲಿ ಗುಣವೆಂದರೆ ವೈಶೇಷಿಕರು ಅಂಗೀಕರಿಸುವ ರೂಪರಸಾದಿಗಳಂತೆ ದ್ರವ್ಯದಲ್ಲಿರುವ ಗುಣಗಳಲ್ಲ. ಇವೇ ಅತಿಸೂಕ್ಷ್ಮವಾದ ಮೂಲದ್ರವ್ಯಗಳು. ಇವು ಸಮಪ್ರಮಾಣದಲ್ಲಿರುವಾಗ ಅವ್ಯಕ್ತ ಅಥವಾ ಪ್ರಧಾನವೆನಿಸುತ್ತದೆ. ಈ ಮೂಲದ್ರವ್ಯಗಳು ಪ್ರಕೃತಿಯಿಂದ ಹುಟ್ಟಿ ಎಲ್ಲ ವಸ್ತುಗಳಲ್ಲಿಯೂ ತರತಮಭಾವದಿಂದ ಅನುಸ್ಯೂತವಾಗಿರುತ್ತವೆ. ಅಹಂಕಾರದಲ್ಲಿರುವ ಸತ್ವಗುಣದ ಪ್ರಧಾನಾಂಶದಿಂದ ಮನಸ್ಸು ಹುಟ್ಟುತ್ತದೆ. ಮಧ್ಯಮಸ್ಥಿತಿಯಲ್ಲಿರುವ ಸತ್ವಗುಣದ ಅಂಶದಿಂದ ಪಂಚ ಜ್ಞಾನೇಂದ್ರಿಯಗಳೂ, ಕನಿಷ್ಠ ಸ್ಥಿತಿಯಲ್ಲಿರುವ ಸತ್ವಗುಣದ ಅಂಶದಿಂದ ಪಂಚ ಕರ್ಮೇಂದ್ರಿಯಗಳೂ ಹುಟ್ಟುತ್ತವೆ. ತಮೋಗುಣದ ಪ್ರಾಧಾನ್ಯದಿಂದ ಶಬ್ದಾದಿ ತನ್ಮಾತ್ರೆಗಳೂ, ಪಂಚಮಹಾಭೂತಗಳೂ ಹುಟ್ಟುತ್ತವೆಯೆಂದು ತಿಳಿಯಬೇಕು. ಅಹಂಕಾರದ ರಜೋಗುಣವು ಈ ಎಲ್ಲ ವಸ್ತುಗಳ ಉತ್ಪತ್ತಿಗೆ ಸಹಾಯ ಮಾಡುತ್ತದೆ.

ಅಲ್ಲದೇ ಈ ಪ್ರಕೃತಿಯು ಮಹತತ್ತ್ವಕ್ಕಿಂತ ಮೊದಲು ಅನಂತ ಲಿಂಗಶರೀರಗಳನ್ನು ಉತ್ಪಾದಿಸುತ್ತದೆ. ಇವೇ ಜಗತ್ತಿನಲ್ಲಿರುವ ಸಮಸ್ತ ಪ್ರಾಣಿಗಳ ಶರೀರಗಳು. ಇದೇ ಚೇತನಾಧಿಷ್ಠಿತವಾದಾಗ ಜೀವ ಎನಿಸಿಕೊಳ್ಳುತ್ತದೆ. ಈ ಲಿಂಗಶರೀರದಲ್ಲಿ ಸಕಲ ಇಂದ್ರಿಯಗಳೂ, ಮನಸ್ಸೂ ಸೇರಿಕೊಂಡಿವೆ. ಈ ಸೂಕ್ಷ್ಮಶರೀರವು ವಿಶ್ವದಲ್ಲಿರುವ ಯಾವ ಪದಾರ್ಥದಲ್ಲಾದರೂ ನುಗ್ಗಿ ಹೋಗಬಲ್ಲ ಸಾಮರ್ಥ್ಯವನ್ನು ಗಳಿಸಿರುತ್ತದೆ. ಈ ಲಿಂಗಶರೀರವು ನಿತ್ಯವಾದದ್ದು. ಇದಕ್ಕೆ ಸಾವು ಎಂಬುದಿಲ್ಲ.

ಮೂಲಪ್ರಕೃತಿಯಲ್ಲದೇ ಪುರುಷ ಎಂಬ ಇಪ್ಪತ್ತೈದನೆಯ ತತ್ತ್ವವನ್ನು ಸಾಂಖ್ಯ ಶಾಸ್ತ್ರವು ಅಂಗೀಕರಿಸಿದೆಯಷ್ಟೇ. ಈ ಪುರುಷನೇ ಚೇತನ, ಆತ್ಮ. ಈ ಪುರುಷರು ಅನಂತ ಸಂಖ್ಯೆಯಲ್ಲಿದ್ದು ಸಮಸ್ತ ಪ್ರಾಣಿಗಳ ಶರೀರಗಳಲ್ಲಿಯೂ ನೆಲೆಸಿದ್ದಾರೆ. ಸ್ವತಃ ಪುರುಷನಿಗೆ ಸುಖ-ದುಃಖಾದಿಗಳ ಯಾವ ಸಂಬಂಧವೂ ಇಲ್ಲ. ಸುಖ-ದುಃಖಾದಿಗಳೆಲ್ಲವೂ ಪ್ರಕೃತಿಗೆ ಸೇರಿದ ಮನಸ್ಸಿಗೆ ಸಂಬಂಧಿಸಿದವು. ಪ್ರಕೃತಿಯೇ ತಾನು ಎಂಬ ಭ್ರಮೆಯಿಂದ ಪುರುಷನು ಭ್ರಮಾತ್ಮಕವಾದ ಸಂಸಾರವನ್ನು ಅನುಭವಿಸುತ್ತಾನೆ. ಪ್ರಕೃತಿಯ ಆಟವನ್ನು ನೋಡುತ್ತಿರುವ ಕೇವಲ ಸಾಕ್ಷಿಯಾದ ಪುರುಷನು ದೃಕ್ ಎನಿಸುತ್ತಾನೆ. ಸಮಸ್ತ ಪ್ರಕೃತಿ ಸ್ವರೂಪವು ಅವನಿಗೆ ದೃಶ್ಯವಾಗಿದೆ. ತನಗೂ ಪ್ರಕೃತಿಗೂ ಯಾವ ಸಂಬಂಧವೂ ಇಲ್ಲ. ತಾನು ಕೇವಲ ದೃಕ್ ಆಗಿದ್ದೇನೆ ಎಂಬ ನಿಶ್ಚಿತ ಜ್ಞಾನ ಉಂಟಾಗುವುದೇ ಮೋಕ್ಷ. ಈ ಭೇದವನ್ನು ತಿಳಿಸಿಕೊಡುವುದೇ ಸಾಂಖ್ಯಶಾಸ್ತ್ರದ ಮುಖ್ಯ ಉದ್ದೇಶವಾಗಿರುತ್ತದೆ. ಹೀಗೆ ಮೋಕ್ಷವೆಂದರೆ ತಾಪತ್ರಯಗಳು ಎಂದೆಂದಿಗೂ ಬಾರದಂತೆ ತಡೆಯುವುದೇ ಆಗಿರುತ್ತದೆ.

ಇದಿಷ್ಟು ಸಾಂಖ್ಯ ದರ್ಶನದ ಸಂಕ್ಷೇಪ. ಇದರ ಮೇಲೆ ಕೆಲವು ಪ್ರಶ್ನೆಗಳು ಹುಟ್ಟುತ್ತವೆ. ಮೂಲಪ್ರಕೃತಿಯು ತನ್ನ ಮೂಲಾವಸ್ಥೆಯಲ್ಲಿ ಅತ್ಯಂತ ಸೂಕ್ಷ್ಮವಾಗಿದ್ದು ಬೃಹದಾಕಾರದ ಈ ವಿಶ್ವವಾಗಿ ಪರಿಣಮಿಸುತ್ತದೆಯಷ್ಟೇ. ಇದು ಹೇಗೆ ಸಾಧ್ಯ ? ಚಿಕ್ಕದು ದೊಡ್ಡದಾಗುವುದೆಂದರೆ ಅವಯವಗಳ ವಿಸ್ತರಣೆ. ಇದು ಸ್ವಯಂ ಶಕ್ಯವಾದದ್ದಲ್ಲ. ಒಂದು ಅಶ್ವತ್ಥವೃಕ್ಷದ ಸೂಕ್ಷ್ಮವಾದ ಬೀಜವು ಮಹಾ ವೃಕ್ಷವಾಗಿ ಪರಿಣಮಿಸುತ್ತದೆ ಎಂಬ ದೃಷ್ಟಾಂತವು ಸರಿಯಲ್ಲ. ಬೀಜದಲ್ಲಿ ವೃಕ್ಷವಾಗುವ ಶಕ್ತಿಯಿದೆ ಎಂಬುದನ್ನು ಒಪ್ಪಬಹುದು. ಆದರೆ ಆ ಶಕ್ತಿಯು ಬಾಹ್ಯ ವಸ್ತುವನ್ನು ಅಪೇಕ್ಷಿಸುತ್ತದೆ. ಮಣ್ಣು, ನೀರು, ಗಾಳಿ, ಬೆಳಕು ಎಂಬ ಬಾಹ್ಯ ವಸ್ತುಗಳ ಸಹಾಯವಿಲ್ಲದೇ ಬೀಜವು ಎಂದಿಗೂ ವೃಕ್ಷವಾಗುವುದಿಲ್ಲ. ರೂಪಾಂತರಗೊಂಡ ಬಾಹ್ಯ ವಸ್ತುಗಳ ಸಮುದಾಯವೇ ವೃಕ್ಷ. ಹಾಗೆಯೇ ಮೂಲಪ್ರಕೃತಿಯು ವಿಶ್ವವಾಗಿ ಬೆಳೆಯಲು ಬೇಕಾದ ಬಾಹ್ಯ ವಸ್ತು ಯಾವುದು ? ಚೇತನನಾದ

ಪುರುಷನು ಎಂದಿಗೂ ಜಡ ಪ್ರಪಂಚವಾಗುವುದಿಲ್ಲ. ಈ ಮೂಲಪ್ರಕೃತಿಯು ವ್ಯವಸ್ಥಿತವಾದ ರೂಪದಲ್ಲಿ ಬೆಳೆದಿದೆಯೆಂದು ಒಪ್ಪಬೇಕಾಗುತ್ತದೆ. ಹಗಲು-ರಾತ್ರಿ, ಸೂರ್ಯ-ಚಂದ್ರ, ಮಳೆಗಾಲ-ಚಳಿಗಾಲ ಮುಂತಾದವು ಒಂದಾನೊಂದು ನಿಯಮಕ್ಕೆ ಕಟ್ಟುಬಿದ್ದಿವೆ. ಹಾಗೆಯೇ ಮನುಷ್ಯನೇ ಮೊದಲಾದ ಪ್ರಾಣಿಗಳ ಶರೀರಗಳ ರಚನೆ, ಅವುಗಳು ಮಾಡುವ ಕಾರ್ಯವೈಖರಿ ಎಲ್ಲವೂ ಅದ್ಭುತವಾದವು. ಇಂತಹ ಅದ್ಭುತವನ್ನು ಜಡವಾದ ಮೂಲ ಪ್ರಕೃತಿಯು ಹೇಗೆ ನಿರ್ಮಿಸೀತು ? ಹೀಗೆಯೇ ನಿರ್ಮಿಸಬೇಕೆಂಬ ಉದ್ದೇಶ-ಇಚ್ಛೆಯಾದರೂ ಹೇಗೆ ಬಂದೀತು ? ಇಚ್ಛೆ ಕೇವಲ ಚೇತನದ ಧರ್ಮವಾಗಿರುತ್ತದೆ. ಅ ಚೇತನವಾದ ಮೂಲಪ್ರಕೃತಿಗೆ ಇಚ್ಛೆ ಬರುವುದಾದರೂ ಹೇಗೆ ? ಇತ್ಯಾದಿ ಶಂಕೆಗೆ ಉತ್ತರವೇನೆಂದು ಸ್ಫುಟವಾಗಿ ತಿಳಿದು ಬರುವುದಿಲ್ಲ.

ಸಾಂಖ್ಯವು ದ್ವೈತ ದರ್ಶನ. ಇದರ ಪ್ರಕಾರ ಎಷ್ಟು ಜೀವಿಗಳಿವೆಯೋ ಅಷ್ಟು ಚೇತನಗಳಿರುತ್ತಾರೆ. ಇವರ ಪ್ರೇರಣೆಯಿಂದ ಮೂಲಪ್ರಕೃತಿಯು ಕೆಲಸ ಮಾಡುತ್ತದೆ ಎನ್ನುವುದೂ ಉಚಿತವಲ್ಲ. ಚೇತನರು ಅನಂತರಾದ್ದರಿಂದ ಏಕಮುಖವಾದ ಪ್ರೇರಣೆ ದೊರೆಯಲಾರದು. ಭಿನ್ನಾಭಿಪ್ರಾಯವು ತಲೆದೋರಿದಾಗ ಪ್ರಕೃತಿಯ ಕಾರ್ಯವೆಲ್ಲವೂ ನಿಂತು ಹೋದೀತು. ಈ ಚೇತನರು ವಿಭುಗಳೇ ? ಅಥವಾ ಚಿಕ್ಕ ಪ್ರಮಾಣದವರೇ ? ಎಂಬುದೂ ಸ್ಪಷ್ಟವಿಲ್ಲ. ಒಬ್ಬೊಬ್ಬ ಚೇತನನಿಗೆ ಒಂದೊಂದು ಲಿಂಗಶರೀರವಿರಬೇಕಾಗುತ್ತದೆ. ಅತಿಸೂಕ್ಷ್ಮವಾದ ಲಿಂಗಶರೀರಕ್ಕೂ ಚೇತನರಿಗೂ ಆಗುವ ಸಂಬಂಧ ಯಾವ ಕಾರಣದಿಂದ ಎಂಬುದೂ ಸ್ಪಷ್ಟವಿಲ್ಲ. ಮರಣಾನಂತರ ಲಿಂಗಶರೀರವು ತನ್ನ ಹಿಂದಿನ ಚೇತನವನ್ನೇ ಹೇಗೆ ಸೇರಿಕೊಳ್ಳುತ್ತದೆ ? ಎಂಬುದೂ ಗೊತ್ತಾಗುವುದಿಲ್ಲ.

ಸಾಂಖ್ಯದರ್ಶನವು ವೇದವನ್ನು ಶಬ್ದಪ್ರಮಾಣವೆಂದು ಅಂಗೀಕರಿಸಿದೆ. ಆದರೆ ಈ ಸಾಂಖ್ಯಕಾರಿಕೆಗಳಲ್ಲಿ ಪ್ರಮೇಯವನ್ನು ಗೊತ್ತುಪಡಿಸುವುದಕ್ಕೆ ಯಾವ ಶಬ್ದ ಪ್ರಮಾಣವನ್ನೂ ಉದಾಹರಿಸಿಲ್ಲ. ಶ್ರೀ ಗೌಡಪಾದ ಭಾಷ್ಯವು ಈ ವಿಚಾರದಲ್ಲಿ ತಟಸ್ಥವಾಗಿದೆ. ''ಅಜಾಮೇ ಕಾಂ ಲೋಹಿತ ಶುಕ್ಲಕೃಷ್ಣಾಂ...'' ( ) ಎಂಬ ಒಂದೇ ಶ್ರುತಿವಾಕ್ಯವನ್ನು ಇತರ ಸಾಂಖ್ಯಗ್ರಂಥಗಳಲ್ಲಿ ಉದಾಹರಿಸಿದ್ದು ಕಂಡುಬರುತ್ತದೆ.

ಈ ರೀತಿಯಾಗಿ ಹಲವಾರು ಶಂಕೆಗಳು ಸಾಂಖ್ಯದರ್ಶನದ ಮೇಲೆ ಹುಟ್ಟುತ್ತವೆ. ಸಮಾಧಾನವನ್ನು ಇತರ ಸಾಂಖ್ಯಗ್ರಂಥಗಳು ಹೇಳಿವೆಯಾದರೂ ತೃಪ್ತಿಕರವಾಗಿಲ್ಲ. ಹೀಗೆಯೇ ಇತರ ಎಲ್ಲ ದರ್ಶನಗಳಲ್ಲಿಯೂ ಶಂಕೆಗೆ ಅವಕಾಶವಿದೆ. ಅದೃಶ್ಯವೂ ಅಜ್ಞೇಯವೂ ಆದ ಪರತತ್ತ್ವದ ಜ್ಞಾನವು

ಸುಗಮವಲ್ಲ. ಬ್ರಹ್ಮಸಾಕ್ಷಾತ್ಕಾರವಾದ ಮೇಲೆ ಮಾತ್ರ ಈ ಸಂದೇಹಗಳು ನಿವೃತ್ತವಾಗುತ್ತವೆ !

ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ ॥

## ಕೃತಜ್ಞತಾ ಸಮರ್ಪಣೆ

ಉಡುಪಿ ಶ್ರೀ ಯು. ಪುಂಡಲೀಕ ಶೆಣೈ ಮೆಮೋರಿಯಲ್ ಟ್ರಸ್ಟಿನ ಆಡಳಿತ ಮೊಕ್ತೇಸರರಾದ ಶ್ರೀ ಯು. ಹರೀಶ ಪಿ. ಶೆಣೈ ಅವರು ಶ್ರೀ ಈಶ್ವರಕೃಷ್ಣನ ಸಾಂಖ್ಯಕಾರಿಕೆಯ ಸಂಸ್ಕೃತ ಗ್ರಂಥವನ್ನು ನನಗೆ ಕಳಿಸಿ, ಇದನ್ನು ಕನ್ನಡಕ್ಕೆ ಭಾಷಾಂತರಿಸಿ ಕೊಡಬೇಕೆಂದು ಅಪೇಕ್ಷಿಸಿದರು. ಇದು ಶ್ರೀ ಗೌಡಪಾದಾಚಾರ್ಯರ ಭಾಷ್ಯದಿಂದ ಸಹಿತವಾಗಿತ್ತು. ಭಾಷ್ಯ ಸಹಿತವಾಗಿ ಸಾಂಖ್ಯಕಾರಿಕೆಯನ್ನು ಅನುವಾದಿಸಬೇಕೆಂಬುದು ಶ್ರೀ ಶೆಣೈ ಅವರ ಆಶಯವಾಗಿತ್ತು. ಶ್ರೀ ಗೌಡಪಾದರ ಭಾಷ್ಯವಿರುವುದನ್ನು ನೋಡಿ ನಾನು ಕುತೂಹಲದಿಂದ ಕನ್ನಡಿಸಿ ಕೊಡುವುದಾಗಿ ಒಪ್ಪಿಕೊಂಡೆ. ಇದಕ್ಕೆ ಪೋಷಕವಾಗಿ ಶ್ರೀಯುತರು ಕಳಿಸಿದ ಪ್ರತಿಯು ಡಾ। ಟಿ. ಸಿ. ಮೈನಕರ (Dr. T. C. Mainkar) M.A., Ph.D., D. Litt. ಅವರ ಕೂಲಂಕಷವಾಗಿ ಇಂಗ್ಲಿಷ್ ವ್ಯಾಖ್ಯಾನದಿಂದ ಸಮೇತವಾಗಿದ್ದುದರಿಂದ ನನಗೆ ಮೂಲವನ್ನು ಭಾಷ್ಯ ಸಹಿತವಾಗಿ ಕನ್ನಡಿಸುವ ಇಚ್ಛೆ ಪ್ರಬಲವಾಯಿತು.

ಭಾಷ್ಯ ಸಹಿತವಾದ ಸಾಂಖ್ಯಕಾರಿಕೆಯ ಕನ್ನಡ ಭಾಷಾಂತರೀಕರಣವು ಕಷ್ಟವಾದದ್ದೇನೂ ಆಗಿರಲಿಲ್ಲ. ಆದರೆ ನನ್ನ ವಯೋಮಾನ, ಅನಾರೋಗ್ಯ ಮತ್ತು ದೃಷ್ಟಿದೋಷಗಳು ಅಡ್ಡಿಯಾಗಿ ನಿಂತವು. ಈ ಸಮಯದಲ್ಲಿ ನನ್ನ ಮಾನ್ಯ ಮಿತ್ರರಾದ ವೇ. ಬ್ರಹ್ಮಶ್ರೀ ಯಲ್ಲಾಪುರ ಕೃಷ್ಣ ಶರ್ಮಾರು ನನ್ನ ಕೇಳಿಕೆಯನ್ನು ಮನ್ನಿಸಿ ಸಹಾಯ ಮಾಡಲು ಒಪ್ಪಿದರು. ನಾನು ಹೇಳುತ್ತ ಹೋದಂತೆ ಅವರು ಇದನ್ನು ಪೂರ್ತಿಯಾಗಿ ಬರೆದುಕೊಟ್ಟಿದ್ದಾರೆ. ಪ್ರತಿದಿನ ನನ್ನ ಮನೆಗೆ ಬಂದು ಲೇಖಕರಾಗಿ ತುಂಬ ಉಪಕರಿಸಿರುವ ಈ ಮಹನೀಯರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ.


ಸಂಸ್ಕೃತದಲ್ಲಿರುವ ಮೂಲವನ್ನು ಯಥಾಶ್ರುತವಾಗಿ ಭಾಷಾಂತರಿಸುವುದು ಕನ್ನಡದ ಶೈಲಿಗೆ ಸರಿಯಲ್ಲವೆಂದು ನನ್ನ ಅಭಿಪ್ರಾಯವಿದೆ. ಅಂತಹ ಭಾಷಾಂತರವು ಕನ್ನಡಿಗರಿಗೆ ಎಂದಿಗೂ ರುಚಿಸಲಾರದು. ಕನ್ನಡಕ್ಕೆ ಸ್ವತಂತ್ರವಾದ ಒಂದು ಶೈಲಿಯುಂಟು. ಕರ್ಮಣಿ ಪ್ರಯೋಗವು ಕನ್ನಡಕ್ಕೆ ಒಗ್ಗುವುದಿಲ್ಲ. ಇತ್ಯಾದಿ ಕಾರಣಗಳಿಂದ ಈಗ ನಾನು ಮಾಡಿರುವುದು ನೇರವಾದ ಪರಿವರ್ತನೆಯಲ್ಲ.

ಇದು ಮೂಲದ ಭಾವಾನುವಾದವೆನ್ನಬಹುದು. ಮೂಲದಲ್ಲಿರುವ ವಿಷಯಕ್ಕೆ ಯಾವ ಚ್ಯುತಿಯೂ ಬಾರದಂತೆ ನನಗೆ ತಿಳಿದವುಟ್ಟಿಗೆ ಈ ಅನುವಾದವು ನಡೆದಿದೆ. ಶ್ರೀ ಗೌಡಪಾದ ಭಾಷ್ಯದಲ್ಲಿ ಬಂದಿರುವ ಕೆಲವು ವಿಷಯಗಳು ಓದುಗರಿಗೆ ಬಹು ವಿಸ್ತೃತವೆಂದು ತೋರಬಹುದಾದ್ದರಿಂದ ಕನ್ನಡ ಅನುವಾದದಲ್ಲಿ ಅವುಗಳನ್ನು ಕೈಬಿಡಲಾಗಿದೆ. ಆದರೆ ಜಿಜ್ಞಾಸುಗಳ ಸೌಕರ್ಯಕ್ಕಾಗಿ ಅನುಬಂಧದಲ್ಲಿ ಅವನ್ನು ಸೇರಿಸಿದ್ದೇನೆ. ಆದ್ದರಿಂದ ಭಾಷ್ಯದ ಸಮಗ್ರತೆಗೆ ಯಾವ ನ್ಯೂನತೆಯೂ ಆಗಿರುವುದಿಲ್ಲ.

ಶ್ರೀಮಾನ್ ಹರೀಶ ಪಿ. ಶೆಣೈ ಅವರು ಕೈಗೊಂಡಿರುವ ಈ ಜ್ಞಾನಪ್ರಸಾರದ ಕಾರ್ಯವು ಸ್ತುತ್ಯವಾದದ್ದು. ಅದರಲ್ಲಿಯೂ ಶ್ರೀ ಗೌಡಪಾದರ ಭಾಷ್ಯವು ಕನ್ನಡಿಗರಿಗೆ ದೊರೆಯಲೆಂಬ ಸದುದ್ದೇಶದಿಂದ ಪ್ರೇರಿತರಾಗಿ ಈ ಮಹನೀಯರು ಈ ಕೃತಿಯ ಪ್ರಕಟನೆಗೆ ದೊಡ್ಡ ತ್ಯಾಗವನ್ನೇ ಮಾಡಿದ್ದಾರೆ. ನನ್ನಿಂದ ಈ ಕೃತಿಗೆ ಒಂದು ಅಲ್ಪ ಸೇವೆಯಾದರೂ ಆಗಲೆಂದು ನನ್ನ ಈ ಇಳಿ ವಯಸ್ಸಿನಲ್ಲಿಯೂ ಯಥಾಶಕ್ತಿಯಾಗಿ ನನ್ನ ಸೇವೆಯನ್ನು ಸಲ್ಲಿಸಿದ್ದೇನೆ. ಈ ಅನುವಾದದಲ್ಲಿ ದೋಷವೇನಾದರೂ ಸಂಭವಿಸಿದ್ದರೆ ಸಹೃದಯರು ಕ್ಷಮಿಸುತ್ತಾರೆಂದು ನನ್ನ ನಂಬಿಕೆಯಿದೆ. ಈ ಅನುವಾದ ಕಾರ್ಯವನ್ನು ವಿಶ್ವಾಸದಿಂದ ನನಗೆ ವಹಿಸಿಕೊಟ್ಟ ಶ್ರೀ ಶೆಣೈ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

**ಶುಭಮಸ್ತು**

ಬೆಂಗಳೂರು – 85 **ವಿದ್ವಾನ್ ಎನ್. ರಂಗನಾಥ ಶರ್ಮಾ**
20-5-2008



ಶ್ರೀ ಕಾಶೀಮಠಾಧೀಶರಾದ ಶ್ರೀಮದ್ ಸುಧೀಂದ್ರ ತೀರ್ಥ ಸ್ವಾಮೀಜಿಯವರು ತಮ್ಮ ಅಮೃತ ಹಸ್ತಗಳಿಂದ ''ಅನುಗೀತಾ'' ಗ್ರಂಥವನ್ನು ಬಿಡುಗಡೆಗೊಳಿಸುತ್ತಿರುವುದು.

# ಶ್ರೀಃ

## ಶ್ರೀ ಮದೀಶ್ವರಕೃಷ್ಣ ವಿರಚಿತ

# ಸಾಂಖ್ಯಕಾರಿಕಾ

## (ಶ್ರೀ ಗೌಡಪಾದಾಚಾರ್ಯ ವಿರಚಿತ ಭಾಷ್ಯದ ಕನ್ನಡ ಅನುವಾದ ಸಹಿತ)

## ಶ್ರೀ ಗಣೇಶಾಯ ನಮಃ

### ಭಾಷ್ಯಕಾರರ ಮಂಗಳ ಶ್ಲೋಕ ಮತ್ತು ಉಪೋದ್ಘಾತ

**कपिलाय नमस्तस्मै येनाविद्योदधौ जगति मग्ने ।**
**कारुण्यात्सांख्यमयी नौरिव विहिता प्रतरणाय ॥**
**अल्पग्रन्थं स्पष्टं प्रमाणसिद्धान्तहेतुभिर्युक्तम् ।**
**शास्त्रं शिष्यहिताय समासतोऽहं प्रवक्ष्यामि ॥**

ಈ ಜಗತ್ತು ಅಜ್ಞಾನವೆಂಬ ಸಮುದ್ರದಲ್ಲಿ ಮುಳುಗಿಹೋಗಿರಲು, ಇಲ್ಲಿರುವ ಜಗತ್ತು (ಜನರು) ಇದನ್ನು ದಾಟಿ ಹೋಗುವುದಕ್ಕೆ ಉಪಯುಕ್ತವಾಗಲೆಂದು ಹಡಗಿನಂತಿರುವ ಸಾಂಖ್ಯ ಸಿದ್ಧಾಂತವನ್ನು ಕರುಣೆಯಿಂದ ರಚಿಸಿರುವ ಕಪಿಲ ಮಹರ್ಷಿಗಳಿಗೆ ನಮಸ್ಕಾರ ಮಾಡುತ್ತೇನೆ.

ಇದು ಚಿಕ್ಕ ಗ್ರಂಥವಾದರೂ ಸಿದ್ಧಾಂತಕ್ಕೆ ಆಧಾರವಾದ ಪ್ರಮಾಣ, ಸಿದ್ಧಾಂತ, ಅದಕ್ಕೆ ತಕ್ಕ ಸಾಧಕಯುಕ್ತಿಗಳಿಂದ ಕೂಡಿದೆ. ಇದನ್ನು ಅಧ್ಯಯನ ಮಾಡುವ ಶಿಷ್ಯರ ಹಿತಕ್ಕಾಗಿ, ಸ್ಪಷ್ಟವಾಗುವಂತೆ ನಾನು ಸಂಕ್ಷೇಪವಾಗಿ ಇದನ್ನು ನಿರೂಪಿಸುತ್ತೇನೆ.

ಸನಕ, ಸನಂದನ, ಸನಾತನ, ಆಸುರಿ, ಕಪಿಲ, ವೋಢು, ಪಂಚಶಿಖ – ಎಂಬ ಏಳು ಮಂದಿ ಬ್ರಹ್ಮದೇವನ ಮಾನಸ ಪುತ್ರರು. ಇವರಲ್ಲಿ ಕಪಿಲ ಮಹರ್ಷಿಗೆ ಜ್ಞಾನ, ವೈರಾಗ್ಯ, (ಅಣಿಮಾದಿ) ಐಶ್ವರ್ಯ – ಇವು ಸಹಜವಾಗಿಯೇ ಪ್ರಾಪ್ತವಾಗಿದ್ದವು. ಆತನು ಅಜ್ಞಾನಾಂಧಕಾರದಲ್ಲಿ ಮುಳುಗಿದ ಜನರನ್ನು ನೋಡಿ, ಸತ್ಯಸ್ಥಿತಿಯೇನೆಂಬುದನ್ನು ತಿಳಿಯಲಿಚ್ಛಿಸಿದ ಸಗೋತ್ರನಾದ ಆಸುರಿಗೆ, ಇಪ್ಪತ್ತೈದು ತತ್ತ್ವಗಳ ಜ್ಞಾನವಾಗುವಂತೆ ಕರುಣೆಯಿಂದ ಉಪದೇಶಿಸಿದನು. ಈ ತತ್ತ್ವಗಳ ಜ್ಞಾನದಿಂದ ಸಂಸಾರಿಗಳ ಕಷ್ಟವು ನಾಶವಾಗುತ್ತದೆ – ಎಂಬುದು ಕಪಿಲ ಮುನಿಯ ಉದ್ದೇಶವಾಗಿತ್ತು.

**पञ्चविंशतितत्त्वज्ञो यत्र तत्राश्रमे वसेत् ।**
**जटी मुण्डी शिखी वापि मुच्यते नात्र संशयः ॥**

ಈ ಪಂಚವಿಂಶತಿ ತತ್ತ್ವಜ್ಞನು ಯಾವ ಆಶ್ರಮದಲ್ಲಿಯೇ ಇರಲಿ – ಜಟಾಧಾರಿಯಾಗಿರಲಿ, ಶಿಖಾಧಾರಿಯಾಗಿರಲಿ ಅಥವಾ ಇವೆರಡೂ ಇಲ್ಲದ ಮುಂಡನಾಗಿರಲಿ – ಅವನು ಮುಕ್ತನಾಗುತ್ತಾನೆ. ಇದರಲ್ಲಿ ಸಂಶಯವಿಲ್ಲ. ಇದನ್ನೇ ಮುಂದೆ ಹೇಳಲಾಗುವುದು.

**दुःखत्रयाभिघाताज्जिज्ञासा तदभिघातके हेतौ ।**
**दृष्टे साऽपार्था चेत् नैकान्तात्यन्ततोऽभावात् ॥ १ ॥**

**ಭಾಷ್ಯ** – ಮೂರು ಬಗೆಯ ದುಃಖಗಳ ಹೊಡೆತವಿರುವುದರಿಂದ ಅದನ್ನು ನಿವಾರಿಸುವ ಉಪಾಯದ ವಿಷಯದಲ್ಲಿ ಜಿಜ್ಞಾಸೆಯನ್ನು ಮಾಡಬೇಕಾಗಿದೆ. ಅಂತಹ ಉಪಾಯವು ಜನರಿಗೆ ಗೊತ್ತಿರುವಾಗ ಜಿಜ್ಞಾಸೆಯು ವ್ಯರ್ಥವಲ್ಲವೇ ? ಆಧ್ಯಾತ್ಮಿಕ ದುಃಖವನ್ನು ಆಯುರ್ವೇದ ಶಾಸ್ತ್ರದಲ್ಲಿ ಹೇಳಿದ ಕ್ರಿಯೆಯಿಂದಲೂ, ಔಷಧಗಳಿಂದಲೂ ಪರಿಹರಿಸಲು ಸಾಧ್ಯವಾಗುತ್ತದೆ. ಆಧಿಭೌತಿಕ ಆಘಾತವನ್ನು ಎಂದರೆ – ಕ್ರಿಮಿಕೀಟಾದಿಗಳ ಬಾಧೆಯನ್ನು ನಾವೇ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಹೀಗೆ ಈ ಎರಡು ಬಗೆಯ ದುಃಖಗಳನ್ನು ಜನರೇ ಪರಿಹರಿಸಿಕೊಳ್ಳಲು ಸಾಧ್ಯವಿರುವಾಗ ಅವೆರಡರ ಪರಿಹಾರಕ್ಕಾಗಿ ಜಿಜ್ಞಾಸೆಯು ಅನಾವಶ್ಯಕವಲ್ಲವೇ ? ಹಾಗಲ್ಲ, ಈ ಉಪಾಯಗಳು ಪೂರ್ಣವಾಗಿ ಫಲವನ್ನು ಕೊಡುತ್ತವೆಯೆಂಬ ನಿಶ್ಚಯವಿಲ್ಲ ಮತ್ತು ಈ ಉಪಾಯಗಳು ಶಾಶ್ವತವಾದ ಪರಿಹಾರಗಳೂ ಅಲ್ಲ.

**ವಿವರಣೆ:** ಆಧ್ಯಾತ್ಮಿಕ = ಇಲ್ಲಿ ಆತ್ಮವೆಂದರೆ ದೇಹವೆಂದರ್ಥ. ದೇಹಕ್ಕೆ ಬರುವ ನಾನಾ ಬಗೆಯ ರೋಗಗಳು ಆಧ್ಯಾತ್ಮಿಕ ದುಃಖಗಳು. ಆಧಿಭೌತಿಕ = ಕ್ರಿಮಿಕೀಟ ವ್ಯಾಘ್ರಾದಿ ಪ್ರಾಣಿಗಳಿಂದ ಆಗುವ ಬಾಧೆ. ಆಧಿದೈವಿಕ = ಭೂತ ಪ್ರೇತಾದಿಗಳ ಕಾಟ, ಅತಿವೃಷ್ಟಿ, ಬರಗಾಲ ಮುಂತಾದವುಗಳಿಂದಾಗುವ ತೊಂದರೆ. ಈ ಆಧಿದೈವಿಕ ಅಭಿಘಾತವನ್ನು ತಪ್ಪಿಸಿಕೊಳ್ಳಲು ಅಸಾಧ್ಯವಾದ್ದರಿಂದ ಜಿಜ್ಞಾಸೆ ಬೇಕು ಎಂದು ತಾತ್ಪರ್ಯ. ಮುಪ್ಪು, ಸಾವು ಇವೂ ಸಹ ಆಧಿದೈವಿಕಗಳೇ.

ಹಾಗಾದರೆ ವೇದೋಕ್ತವಾದ ಪರಿಹಾರದಿಂದ ಇವೆಲ್ಲವನ್ನೂ ಹೋಗಲಾಡಿಸಿಕೊಳ್ಳಲು ಸಾಧ್ಯವುಂಟು. ''ಅಪಾಮ ಸೋಮಮಮೃತಾ ಅಭೂಮ'' ಇತ್ಯಾದಿ ವೇದವಾಕ್ಯವು ಪರಿಹಾರವನ್ನು ಹೇಳಿದೆ. ಹಿಂದೆ

ಒಂದಾನೊಂದು ಕಲ್ಪದಲ್ಲಿ ಇಂದ್ರಾದಿ ದೇವತೆಗಳು ಅಮೃತವನ್ನು ಕುಡಿದು ಮರಣ ರಹಿತರಾದರು. ಅವರು ಸ್ವರ್ಗವನ್ನು ಸೇರಿದ ಮೇಲೆ ಅವರನ್ನು ಯಾವ ಬಾಧೆಯೂ ಮುಟ್ಟಲಾರದು. ಸ್ವರ್ಗದಲ್ಲಿ ಅವರು ಸುಖವಾಗಿದ್ದಾರೆ. ಆ ದೇವತೆಗಳು ಈ ಮಂತ್ರವನ್ನು ಹಾಡಿಕೊಂಡಿದ್ದಾರೆ. ಆದ್ದರಿಂದ ದುಃಖತ್ರಯದ ಪರಿಹಾರಕ್ಕೆ ಯಾವ ಜಿಜ್ಞಾಸೆಯನ್ನೂ ಮಾಡಬೇಕಾಗಿಲ್ಲ ಎಂದರೆ –

**दृष्टवदानुश्रविकः स ह्यविशुद्धिक्षयातिशययुक्तः ।**
**तद्विपरीतः श्रेयान् व्यक्ताव्यक्तज्ञविज्ञानात् ॥ २ ॥**

ಅಶ್ವಮೇಧ ಮುಂತಾದ ಯಾಗಗಳಲ್ಲಿ ಬಹಳ ಪ್ರಾಣಿಗಳನ್ನು ಕೊಲ್ಲಬೇಕಾಗುತ್ತದೆ. ಶಾಸ್ತ್ರವಿಹಿತವಾದ್ದರಿಂದ ಅದು ಧರ್ಮವೇ ಎಂದು ಹೇಳುವುದಾದರೆ ಪಶುಘಾತದಿಂದಾಗಿ ಅಶುದ್ಧವಾದದ್ದೂ ಹೌದು. ಅಲ್ಲದೇ ಪ್ರಾಣಿಗಳಿಗೆ ದುಃಖವನ್ನು ಉಂಟುಮಾಡುತ್ತದೆ ಮತ್ತು ಇಂದ್ರಾದಿ ದೇವತೆಗಳೂ ಸಾವನ್ನು ಅಪ್ಪುವುದರಿಂದ ಸ್ವರ್ಗವೂ ಶಾಶ್ವತವಲ್ಲ. ಆದ್ದರಿಂದ ಯಾವ ಹಿಂಸೆಯೂ ಇಲ್ಲದಿರುವುದರಿಂದಲೂ ಮತ್ತು ದೇವತೆಗಳಿಗೆ ಮಹಾಪ್ರಳಯ ಕಾಲದಲ್ಲಿ ನಾಶವಿರುವಂತೆ ನಾಶವಿಲ್ಲದಿರುವುದರಿಂದಲೂ ಮುಂದೆ ನಾವು ಹೇಳುವ ಅತಿಶಯವಾದ ಉಪಾಯವೇ ಶ್ರೇಯಸ್ಕರವಾದದ್ದು. ಈ ಮಾರ್ಗದಲ್ಲಿ ಪ್ರಾಣಿಹಿಂಸೆಯೂ ಇಲ್ಲ. ಪ್ರಳಯ ಕಾಲದಲ್ಲಿ ನಾಶವೂ ಇಲ್ಲ.

**मूलप्रकृतिरविकृतिर्महदाद्याः प्रकृतिविकृतयः सप्त ।**
**षोडशकस्तु विकारो न प्रकृतिर्न विकृतिः पुरुषः ॥ ३ ॥**

ಮೂಲಪ್ರಕೃತಿಯೆಂದರೆ ಪ್ರಧಾನ. ಪ್ರಕೃತಿ ವಿಕೃತಿಗಳಾದ ಏಳು ತತ್ತ್ವಗಳಿಗೆ ಇದು ಮೂಲಭೂತವಾದದ್ದು. ಮೂಲವಾದ ಪ್ರಕೃತಿಯಾದ್ದರಿಂದ ಮೂಲಪ್ರಕೃತಿ. ಇದು ಅವಿಕೃತಿ. ಎಂದರೆ ಇನ್ನೊಂದರಿಂದ ಹುಟ್ಟಿದ್ದಲ್ಲ. ಆದ್ದರಿಂದ ಪ್ರಕೃತಿ. ಇನ್ನೊಂದರ ವಿಕಾರವೂ ಅಲ್ಲ . ಆದ್ದರಿಂದ ಅವಿಕೃತಿ.

ಮಹತ್ತು ಮೊದಲಾದ ಪ್ರಕೃತಿ ವಿಕೃತಿಗಳು ಏಳು. ಮಹತ್ತೆಂದರೆ ಬುದ್ಧಿ. ಮಹತ್ತೇ ಮೊದಲಾದ ಏಳು ತತ್ತ್ವಗಳು ಪ್ರಕೃತಿ ವಿಕೃತಿಗಳು. ಹೇಗೆಂದರೆ: ಪ್ರಧಾನದಿಂದ ಬುದ್ಧಿ ಹುಟ್ಟುತ್ತದೆ. ಆದ್ದರಿಂದ ಬುದ್ಧಿಯು ವಿಕೃತಿ. ಇದರಿಂದ ಅಹಂಕಾರ ಹುಟ್ಟುವುದರಿಂದ ಪ್ರಕೃತಿಯೂ ಹೌದು. ಅಹಂಕಾರವು ಬುದ್ಧಿಯಿಂದ ಹುಟ್ಟುವುದರಿಂದ ವಿಕೃತಿ. ಅದರಿಂದ ಪಂಚತನ್ಮಾತ್ರಗಳು ಹುಟ್ಟುವುದರಿಂದ ಪ್ರಕೃತಿಯೂ ಹೌದು. ಆ ತನ್ಮಾತ್ರಗಳಲ್ಲಿ ಶಬ್ದತನ್ಮಾತ್ರೆಯು

ಅಹಂಕಾರಕ್ಕೆ ವಿಕೃತಿ. ಸ್ಪರ್ಶತನ್ಮಾತ್ರೆಗೆ ಕಾರಣವಾದ್ದರಿಂದ ಪ್ರಕೃತಿ, ಹೀಗೆಯೇ ಸ್ಪರ್ಶತನ್ಮಾತ್ರೆಯು ವಿಕೃತಿಯೂ ಹೌದು. ರೂಪತನ್ಮಾತ್ರೆಗೆ ಪ್ರಕೃತಿಯೂ ಹೌದು. ಹೀಗೆಯೇ ಉಳಿದ ತನ್ಮಾತ್ರೆಗಳಲ್ಲಿಯೂ ಯೋಜಿಸಿಕೊಳ್ಳಬೇಕು.

ಷೋಡಶಕಶ್ಚ ವಿಕಾರಃ = ಪಂಚ ಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು, ಹನ್ನೊಂದನೆಯ ಇಂದ್ರಿಯವಾದ ಮನಸ್ಸು ಮತ್ತು ಪಂಚ ಮಹಾಭೂತಗಳು. ಈ ಹದಿನಾರು ವಸ್ತುಗಳು ಕೇವಲ ವಿಕಾರಗಳು. ಇವುಗಳಿಂದ ಯಾವ ಹೊಸ ತತ್ತ್ವವೂ ಹುಟ್ಟುವುದಿಲ್ಲ. ಪುರುಷನು (ಆತ್ಮನು) ಪ್ರಕೃತಿಯೂ ಅಲ್ಲ ವಿಕೃತಿಯೂ ಅಲ್ಲ. ಇವನು ಯಾವುದರಿಂದಲೂ ಹುಟ್ಟಿಲ್ಲ. ಇವನಿಂದ ಯಾವುದೂ ಹುಟ್ಟುವುದೂ ಇಲ್ಲ.

ವ್ಯಕ್ತ, ಅವ್ಯಕ್ತ ಮತ್ತು ಜ್ಞ (ಪುರುಷ) ಈ ಮೂರು ಪದಾರ್ಥಗಳ ಸಿದ್ಧಿಯು ಯಾವ ಪ್ರಮಾಣದಿಂದ ಆಗುತ್ತದೆ ? ಪ್ರಮೇಯ ಸಿದ್ಧಿಯು ಪ್ರಮಾಣದಿಂದ ಆಗಬೇಕು ಎಂಬ ಅಭಿಪ್ರಾಯದಿಂದ ಪ್ರಮಾಣವನ್ನು ತಿಳಿಸುವುದಕ್ಕಾಗಿ ಮುಂದಿನ ಕಾರಿಕೆ ಹೊರಟಿದೆ –

**दृष्टमनुमानमाप्तवचनं च सर्वप्रमाणसिद्धत्वात् ।**
**त्रिविधं प्रमाणमिष्टं प्रमेयसिद्धिः प्रमाणाद्धि ॥ ४ ॥**

ಶ್ರೋತ್ರ, ತ್ವಕ್, ನೇತ್ರ, ಜಿಹ್ವೆ, ಘ್ರಾಣ (ನಾಸಿಕಾ) ಎಂಬಿವು ಐದು ಜ್ಞಾನೇಂದ್ರಿಯಗಳು. ಇವುಗಳಿಗೆ ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಐದು ಕ್ರಮವಾಗಿ ವಿಷಯಗಳು. ಶ್ರೋತ್ರವು ಶಬ್ದವನ್ನೂ ಗ್ರಹಿಸುತ್ತದೆ, ತ್ವಗಿಂದ್ರಿಯವು ಸ್ಪರ್ಶವನ್ನೂ, ಜಿಹ್ವೆಯು (ನಾಲಗೆಯು) ರಸವನ್ನೂ, ನೇತ್ರವು ರೂಪವನ್ನೂ, ಘ್ರಾಣವು ಗಂಧವನ್ನೂ ಗ್ರಹಿಸುತ್ತವೆ. ಇದು ದೃಷ್ಟ (ಪ್ರತ್ಯಕ್ಷ) ಪ್ರಮಾಣ, ಪ್ರತ್ಯಕ್ಷದಿಂದಲೂ ಅನುಮಾನದ ವಿಷಯ ಮುಂದೆ ಬರುತ್ತದೆ. ಅನುಮಾನದಿಂದಲೂ ಯಾವುದು ಗೃಹೀತವಾಗುವುದಿಲ್ಲವೋ ಅದನ್ನು ಆಪ್ತ ವಚನದಿಂದ ತಿಳಿದುಕೊಳ್ಳಬೇಕು. ಹೇಗೆಂದರೆ – ಇಂದ್ರನು ದೇವತೆಗಳ ರಾಜ. ಉತ್ತರ ಕುರುದೇಶ, ಸ್ವರ್ಗದಲ್ಲಿ ಅಪ್ಸರೆಯರಿದ್ದಾರೆ ಇತ್ಯಾದಿ.

ಪ್ರತ್ಯಕ್ಷದಿಂದಾಗಲೀ, ಅನುಮಾನದಿಂದಾಗಲೀ ಯಾವುದು ತಿಳಿಯುವುದಿಲ್ಲವೋ ಅದನ್ನು ಆಪ್ತವಚನದಿಂದ (ಶಬ್ದ ಪ್ರಮಾಣ) ತಿಳಿಯಬೇಕಾಗುತ್ತದೆ. ಆಪ್ತ ಎಂದರೆ ಮುಖ್ಯವಾಗಿ ವೇದ ಮತ್ತು ರಾಗದ್ವೇಷಾದಿಗಳಿಲ್ಲದ, ಯಥಾರ್ಥವಾದಿಯಾದ ಸಾಧು ವ್ಯಕ್ತಿ. ಆತನು

ಎಂದಿಗೂ ಸುಳ್ಳು ಹೇಳುವುದಿಲ್ಲ. ಇತರರು ಹೇಳುವ 'ಸಂಭವ' ಮುಂತಾದ ಪ್ರಮಾಣಗಳು ಈ ಮೂರು ಪ್ರಮಾಣಗಳಲ್ಲಿಯೇ ಅಡಕವಾಗಿಬಿಡುತ್ತವೆ. ಹೇಗೆಂದರೆ – ಜೈಮಿನಿಯು ಅರ್ಥಾಪತ್ತಿ, ಸಂಭವ, ಅಭಾವ, ಪ್ರತಿಭಾ, ಐತಿಹ್ಯ, ಉಪಮಾನ ಎಂಬ ಆರು ಪ್ರಮಾಣಗಳನ್ನು ಅಧಿಕವಾಗಿ ಹೇಳುತ್ತಾನೆ. ಅವುಗಳಲ್ಲಿ ಅರ್ಥಾಪತ್ತಿ ಪ್ರಮಾಣವು ದೃಷ್ಟ, ಶ್ರುತ ಎಂದು ಎರಡು ವಿಧ. ದೃಷ್ಟಾರ್ಥಾಪತ್ತಿ – ಒಂದು ಅಂಶದಲ್ಲಿ ವಿಷಯವು ತಿಳಿದರೆ ಅದರ ಇನ್ನೊಂದು ಅಂಶದಲ್ಲಿಯೂ ವಿಷಯವು ಯಾವುದೆಂದು ತಿಳಿಯುತ್ತದೆ. (ಅನ್ನದ ಪಾತ್ರೆಯಲ್ಲಿರುವ ಎರಡು ಅಗಳನ್ನು ತೆಗೆದು ಹಿಸುಕಿ ನೋಡಿದರೆ ಪಾತ್ರೆಯಲ್ಲಿರುವ ಉಳಿದ ಅಗಳುಗಳು ಬೆಂದಿದೆಯೋ ಇಲ್ಲವೋ ಎಂಬ ಅಂಶವೂ ಗೊತ್ತಾಗುತ್ತದೆ.) ಶ್ರುತಾರ್ಥಾಪತ್ತಿ = ''ದಪ್ಪವಾಗಿರುವ ದೇವದತ್ತನು ಹಗಲು ಊಟ ಮಾಡುವುದಿಲ್ಲ'' ಎಂಬೀ ವಾಕ್ಯವನ್ನು ಕೇಳಿದಾಗ ''ಅವನು ರಾತ್ರಿ ಊಟ ಮಾಡುತ್ತಾನೆ'' ಎಂಬ ಅರ್ಥವು ಅಲ್ಲಿ ತೋರಿಬರುತ್ತದೆ. ಇದು ಶ್ರುತಾರ್ಥಾಪತ್ತಿ.

ಸಂಭವ = ಒಂದು ಪಕ್ಕಾ ಸೇರು ಅಕ್ಕಿಯಿದೆ ಎಂದು ಹೇಳಿದಾಗ ಅದರಲ್ಲಿ ನಾಲ್ಕು ಪಾವು ಅಕ್ಕಿಯಿದೆ ಎಂಬುದು ಸಂಭಾವ್ಯವಾಗಿ ತಿಳಿದುಬರುತ್ತದೆ.

ಅಭಾವ ನಾಲ್ಕು ವಿಧ – ಪ್ರಾಗಭಾವ, ಅನ್ಯೋನ್ಯಾಭಾವ, ಪ್ರಧ್ವಂಸಾಭಾವ, ಅತ್ಯಂತಾಭಾವ (ಸರ್ವಾಭಾವ). ಆ ಪ್ರದೇಶದಲ್ಲಿ ಪೂರ್ಣವಾಗಿ ಮಳೆಯ ಅಭಾವವಿದೆ ಎಂದಾಗ ಮಳೆಯ ಅತ್ಯಂತಾಭಾವದಿಂದ ಪೈರುಗಳು ಬೆಳೆದಿಲ್ಲ ಎಂದು ಗೊತ್ತಾಗುತ್ತದೆ. ಚೈತ್ರನ ಮಗಳಿಗೆ ಸೌಮಂಗಲ್ಯದ ಅಭಾವವಾಯಿತು ಎಂದಾಗ ಸೌಮಂಗಲ್ಯದ ಧ್ವಂಸಾಭಾವದಿಂದ ಅವಳ ಪತಿಯು ಮೃತನಾದನು ಎಂದು ಗೊತ್ತಾಗುತ್ತದೆ. ಹೀಗೆ ಅಭಾವವು ಪ್ರಮೇಯ ಸಿದ್ಧಿಗೆ ಪ್ರಮಾಣವಾಗಬಲ್ಲದು.

ಪ್ರತಿಭಾ = ಪ್ರತಿಭೆಯೆಂದರೆ ಪ್ರತ್ಯಕ್ಷ, ಶಬ್ದಾದಿ ಪ್ರಮಾಣದಿಂದ ತಿಳಿದು ಬಂದ ಅರ್ಥದೊಂದಿಗೆ ಹೊಂದಿಕೆಯಾಗುವ ಇನ್ನೊಂದು ಅರ್ಥದ ಸ್ಫುರಣೆ. ವಿಂಧ್ಯಪರ್ವತದ ದಕ್ಷಿಣದಲ್ಲಿ ಸಮುದ್ರದವರೆಗಿನ ಪ್ರದೇಶವು ಸುಂದರವಾಗಿದೆ ಎಂದು ಹೇಳಿದಾಗ ಆ ಪ್ರದೇಶದಲ್ಲಿ ಮನೋಹರವಾದ ಕೆಲವು ವಸ್ತುಗಳಿವೆ ಎಂದು ಗೊತ್ತಾಗುತ್ತದೆ.

ಐತಿಹ್ಯ – ಈ ಆಲದ ಮರದಲ್ಲಿ ಯಕ್ಷಿಣಿ ಇದೆ ಎಂದು ಹೇಳಿದಾಗ ಕೇಳುಗನಿಗೆ ಅಲ್ಲಿ ಯಕ್ಷಿಣಿ ಇರುವುದು ತಿಳಿಯುತ್ತದೆ. ಇದಕ್ಕೆ ಐತಿಹ್ಯವೆಂದು ಹೆಸರು.

ಉಪಮಾನವೆಂದರೆ ಸಾದೃಶ್ಯ. ಗೋವಿನಂತಿರುವ ಕಾಡುಪ್ರಾಣಿಯು ಗವಯ ಎಂದು ಹೇಳಿದಾಗ ಒಬ್ಬನು ಗೋವಿನಂತಿರುವ ಒಂದು ಪ್ರಾಣಿಯನ್ನು ಕಂಡು ಇದು ಗವಯ (ಗವಯ = ಕಾಡುಹಸು) ಎಂದು ನಿಶ್ಚಯಿಸುತ್ತಾನೆ.

ಈ ಆರು ಪ್ರಮಾಣಗಳು ಹಿಂದೆ ಹೇಳಿದ ಪ್ರತ್ಯಕ್ಷ ಅನುಮಾನ ಆಪ್ತವಚನ (ಶಬ್ದ) ಇವುಗಳಲ್ಲಿಯೇ ಸೇರಿ ಹೋಗುತ್ತವೆ. ಇವುಗಳಲ್ಲಿ ಸಂಭವ ಅಭಾವ ಪ್ರತಿಭಾ ಐತಿಹ್ಯ ಮತ್ತು ಉಪಮಾನ ಇವು ಆಪ್ತವಚನಗಳಲ್ಲೇ ಸೇರುತ್ತವೆ. ಅರ್ಥಾಪತ್ತಿಯು ಅನುಮಾನದಲ್ಲಿಯೇ ಸೇರುತ್ತದೆ. ಹೀಗೆ ಸರ್ವಪ್ರಮಾಣಗಳೂ ನಾವು ಹೇಳಿದ ಮೂರು ಪ್ರಮಾಣಗಳಲ್ಲಿ ಅಂತರ್ಭೂತವಾಗಿವೆ. ಆದ್ದರಿಂದ ಪ್ರತ್ಯಕ್ಷ ಅನುಮಾನ ಆಪ್ತವಚನ ಇವು ಮೂರೇ ಸಾಂಖ್ಯರು ಅಂಗೀಕರಿಸುವ ಪ್ರಮಾಣಗಳು.

**ಟಿಪ್ಪಣಿ:** ವ್ಯಾಪ್ಯದಿಂದ ವ್ಯಾಪಕವನ್ನು ಸಾಧಿಸುವುದಕ್ಕೆ 'ಅನುಮಾನ'ವೆಂದು ಹೆಸರು. ದೂರದಲ್ಲಿರುವ ಬೆಟ್ಟದಲ್ಲಿ ಹೊಗೆ ಏಳುತ್ತಿರುವುದನ್ನು ಕಂಡು ಅಲ್ಲಿ ಬೆಂಕಿಯಿದೆ ಎಂದು ಊಹಿಸುವುದಕ್ಕೆ ಅನುಮಾನವೆಂದು ಹೆಸರು. ಎಲ್ಲಿ ಹೊಗೆಯಿರುತ್ತದೆಯೋ ಅಲ್ಲಿ ಬೆಂಕಿ ಇದ್ದೇ ಇರುತ್ತದೆ. ಆದರೆ ಎಲ್ಲಿ ಬೆಂಕಿ ಇದೆಯೋ ಅಲ್ಲಿ ಹೊಗೆಯಿದೆಯೆಂದು ನಿಶ್ಚಯಿಸಲಾಗುವುದಿಲ್ಲ. ಕಾದ ಕಬ್ಬಿಣದ ತುಂಡಿನಲ್ಲಿ ಬೆಂಕಿಯಿರುತ್ತದೆ, ಹೊಗೆಯಿರುವುದಿಲ್ಲ. ಆದ್ದರಿಂದ ಹೊಗೆಯು ವ್ಯಾಪ್ಯ, ಬೆಂಕಿಯು ವ್ಯಾಪಕ.

ಈ ಪ್ರಮಾಣಗಳ ಲಕ್ಷಣವೇನೆಂದರೆ:

**प्रतिविषयाध्यवसायो दृष्टं, त्रिविधमनुमानमाख्यातम् ।**
**तल्लिङ्गलिङ्गिपूर्वकं, आप्तश्रुतिराप्तवचनं च ॥ ५ ॥**

ಶಬ್ದ ಸ್ಪರ್ಶಾದಿ ವಿಷಯಗಳನ್ನು ಶ್ರೋತ್ರಾದಿ ಇಂದ್ರಿಯಗಳಿಂದ ಗ್ರಹಿಸಿ ನಿಶ್ಚಯಿಸುವುದು ದೃಷ್ಟ ಅಂದರೆ ಪ್ರತ್ಯಕ್ಷವೆನಿಸುತ್ತದೆ. ಅನುಮಾನವು ಪೂರ್ವವತ್, ಶೇಷವತ್, ಸಾಮಾನ್ಯತೋ ದೃಷ್ಟಂ ಎಂದು ಮೂರು ವಿಧ ಮತ್ತು ಕಾರಣದಿಂದ ಕಾರ್ಯ ನಿಶ್ಚಯ, ಕಾರ್ಯದಿಂದ ಕಾರಣ ನಿಶ್ಚಯ ಎಂಬುದಾಗಿ ಇನ್ನೂ ಎರಡು ರೀತಿಯಲ್ಲಿ ಅನುಮಾನ ಭೇದವನ್ನು ಹೇಳುತ್ತಾರೆ.

೧) ಪೂರ್ವವತ್, ಉದಾಹರಣೆ: – ಮೋಡವು ತುಂಬಿಕೊಂಡಿದ್ದರಿಂದ ಮಳೆ ಬರುತ್ತದೆ ಎಂದು ಅನುಮಾನಿಸುವುದು ಪೂರ್ವವತ್. ಮೋಡ ಕವಿದಾಗ ಮಳೆ ಬರುವುದನ್ನು ಹಿಂದೆ ನೋಡಿದ್ದರಿಂದ ಆ ವ್ಯಕ್ತಿಗೆ ಈಗ ಮೋಡ ಕವಿದದ್ದನ್ನು ನೋಡಿದಾಗ ಈ ಅನುಮಾನ ಬಂದದ್ದರಿಂದ ಇದು ಪೂರ್ವವತ್ ಎನಿಸುತ್ತದೆ.

೨) ಶೇಷವತ್, ಉದಾ: – ಸಮುದ್ರದ ನೀರಿನಲ್ಲಿ ಸ್ವಲ್ಪ ಭಾಗವನ್ನು ತೆಗೆದುಕೊಂಡು ರುಚಿ ನೋಡಿದವನು ಸಮುದ್ರದ ಉಳಿದ ನೀರೂ ಹೀಗೆಯೇ ಉಪ್ಪಾಗಿರುತ್ತದೆ ಎಂದು ಅನುಮಾನಿಸುವುದು ಶೇಷವತ್. ಶೇಷ = ಉಳಿದದ್ದು.

೩) ಸಾಮಾನ್ಯತಃ ದೃಷ್ಟಂ ಉದಾ: – ಚೈತ್ರನು ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿ ಕಾಣಿಸಿಕೊಂಡಾಗ ಅವನು ಹಿಂದಿನ ಸ್ಥಳದಿಂದ ಈ ಸ್ಥಳಕ್ಕೆ ಬಂದಿದ್ದಾನೆಂದು ಅವನ ಗಮನವನ್ನು ಅನುಮಾನಿಸಿ ತಿಳಿದಿರುತ್ತೇವೆ. ಚಂದ್ರ ಮತ್ತು ನಕ್ಷತ್ರಗಳು ಹೀಗೆಯೇ ಒಂದು ಸ್ಥಳದಿಂದ ಇನ್ನೊಂದು ಸ್ಥಳದಲ್ಲಿ ಕಾಣಿಸಿಕೊಂಡಾಗ ಇವೂ ಸಹ ಚೈತ್ರನಂತೆಯೇ ಗಮನವುಳ್ಳವು ಎಂದು ಅನುಮಾನಿಸುವುದು ಸಾಮಾನ್ಯತಃ ದೃಷ್ಟ ಎನಿಸುತ್ತದೆ.

ಆಪ್ತವಚನವೆಂದರೆ ಶ್ರುತಿ – ವೇದ ಬ್ರಹ್ಮನೇ ಮೊದಲಾದ ಆಚಾರ್ಯರು ಆಪ್ತರು, ಅವರ ವಚನವೇ ಶ್ರುತಿ.

**ಟಿಪ್ಪಣಿ:** ಕಾರಿಕೆಯಲ್ಲಿರುವ ಲಿಂಗ ಶಬ್ದಕ್ಕೆ ವ್ಯಾಪ್ಯವಾದ ಹೇತು ಎಂದರ್ಥ. ಲಿಂಗಿ ಎಂದರೆ ಲಿಂಗದಿಂದ ಸಿದ್ಧವಾಗುವ ಪ್ರಮೇಯ. ಹೊಗೆಯು ಲಿಂಗ. ಬೆಂಕಿಯು ಲಿಂಗಿ.

ಹೀಗೆ ಮೂರು ವಿಧವಾದ ಪ್ರಮಾಣವನ್ನು ಹೇಳಿದ್ದಾಯಿತು. ಅವುಗಳಲ್ಲಿ ಯಾವ ಪ್ರಮಾಣದಿಂದ ಯಾವುದು ಸಾಧ್ಯ ಎಂಬುದನ್ನು ಈಗ ಹೇಳಲಾಗುತ್ತದೆ –

**सामान्यतस्तु दृष्टादतीन्द्रियाणां प्रसिद्धिरनुमानात् ।**
**तस्मादपि चासिद्धं परोक्षमाप्तागमात् सिद्धम् ॥ ६ ॥**

ಸಾಮಾನ್ಯವಾಗಿ ದೃಷ್ಟವಾದ ಅನುಮಾನದಿಂದ ಇಂದ್ರಿಯಗೋಚರವಲ್ಲದ ವಸ್ತುಗಳ ಸಿದ್ಧಿಯಾಗುತ್ತದೆ. ಪ್ರಧಾನವೂ ಪುರುಷನೂ ಇಂದ್ರಿಯ ಗೋಚರಗಳಲ್ಲ. ಸಾಮಾನ್ಯತಃ ದೃಷ್ಟವಾದ ಅನುಮಾನದಿಂದ ಅವೆರಡನ್ನು ಸಾಧಿಸಬೇಕಾಗಿದೆ. ಸಾಮಾನ್ಯವಾಗಿ ಮಹದಾದಿ ತತ್ತ್ವಗಳು ನಮಗೆ ಗೋಚರವಾಗಿವೆ. ಇವು ತ್ರಿಗುಣಾತ್ಮಕವಾದವು. ಆದ್ದರಿಂದ ತ್ರಿಗುಣಾತ್ಮಕವಾದ ಮೂಲ ಪ್ರಕೃತಿಯೊಂದು ಇದೆಯೆಂದು ಸಿದ್ಧವಾಗುತ್ತದೆ. ತ್ರಿಗುಣಾತ್ಮಕವಾದ ಈ ಕಾರ್ಯಕ್ಕೆ ಕಾರಣವಾದದ್ದು ಇರಬೇಕು. ಅದೇ ಮೂಲ ಪ್ರಕೃತಿಯಾದ ಪ್ರಧಾನ ಎಂದು ನಿರ್ಣಯಿಸಬಹುದು. ಈ ಪ್ರಧಾನದಿಂದಲೇ ಪುರುಷನೂ ಸಿದ್ಧನಾಗುತ್ತಾನೆ. ಹೇಗೆಂದರೆ ಜಡವಾದ ಈ ಪ್ರಕೃತಿಯು ಚೈತನ್ಯವುಳ್ಳಂತೆ ಕಾಣಿಸುವುದರಿಂದ ಇದಕ್ಕೆ ಚೈತನ್ಯವನ್ನು ಕೊಡುವ ಚೇತನನಾದ

ಪುರುಷನಿದ್ದಾನೆಂದು ಸಿದ್ಧವಾಗುತ್ತದೆ. ಈ ಅನುಮಾನದಿಂದಲೂ ಸಿದ್ಧವಾಗದ ವಸ್ತು ಪರೋಕ್ಷವೆನಿಸುತ್ತದೆ. ಪರೋಕ್ಷವಾದರೋ ಆಪ್ತವಚನದಿಂದ ಸಿದ್ಧವಾಗುತ್ತದೆ. ಇಂದ್ರನು ದೇವತೆಗಳ ರಾಜ. ಸ್ವರ್ಗದಲ್ಲಿ ಅಪ್ಸರೆಯರಿದ್ದಾರೆ. ಉತ್ತರದಲ್ಲಿ ಕುರುದೇಶವಿದೆ. ಇತ್ಯಾದಿ ಉದಾಹರಣೆಗಳು.

ಇದರ ಮೇಲೆ ಒಂದು ಆಕ್ಷೇಪ – ಪ್ರಧಾನವಾಗಲಿ, ಪುರುಷನಾಗಲಿ ನಮಗೇನೂ ಗೋಚರಿಸುವುದಿಲ್ಲ. ಯಾವುದು ಅನುಭವ ಗೋಚರವಲ್ಲವೋ ಅದು ಇಲ್ಲವೆಂದೇ ತಿಳಿಯಬೇಕು. ಉದಾಹರಣೆಗೆ – ಎರಡನೆಯ ತಲೆ, ಮೂರನೆಯ ತೋಳು. ಆದ್ದರಿಂದ ಪ್ರಧಾನ ಪುರುಷರು ಇಲ್ಲವೆಂದೇ ಹೇಳಬೇಕು, ಈ ಆಕ್ಷೇಪಕ್ಕೆ ಉತ್ತರ –

**अतिदूरात् सामीप्यादिन्द्रियघातान्मनोऽनवस्थानात् ।**
**सौक्ष्म्याद् व्यवधानादभिभवात् समानाभिहाराच्च ॥ ७ ॥**

ಈ ಎಂಟು ನಿಮಿತ್ತಗಳಿಂದ ಇರುವ ವಸ್ತುಗಳೂ ಸಹ ಗೋಚರಿಸುವುದಿಲ್ಲ. ೧) ಬಹಳ ದೂರವಿರುವುದು – ದೇಶಾಂತರದಲ್ಲಿರುವ ಚೈತ್ರ-ಮೈತ್ರ ಮೊದಲಾದವರು, ೨) ಬಹಳ ಸಮೀಪವಿರುವುದು – ಕಣ್ಣಿಗೆ ಹಚ್ಚಿರುವ ಕಾಡಿಗೆ, ೩) ಜ್ಞಾನೇಂದ್ರಿಯಗಳ ದೋಷ – ಕಿವುಡನಿಗೆ ಶಬ್ದವೂ ಕುರುಡನಿಗೆ ರೂಪವೂ ಗೋಚರಿಸುವುದಿಲ್ಲ, ೪) ಮನಸ್ಸು ಎತ್ತಲೋ ಇರುವುದು – ವ್ಯಗ್ರಚಿತ್ತನು ಹತ್ತಿರದಲ್ಲಿ ಹೇಳಿದ್ದನ್ನೂ ಕೇಳಿಸಿಕೊಳ್ಳುವುದಿಲ್ಲ, ೫) ಅತ್ಯಂತ ಸೂಕ್ಷ್ಮತೆ – ಹೊಗೆ, ನೀರು, ಮಂಜು ಇವುಗಳಲ್ಲಿರುವ ಪರಮಾಣುಗಳು, ೬) ವ್ಯವಧಾನ – ಗೋಡೆಯಿಂದ ಮರೆಯಾದ ವಸ್ತು ಕಾಣಿಸುವುದಿಲ್ಲ, ೭) ಅಧಿಕ ತೇಜಸ್ಸಿನಿಂದ ಮಂಕಾಗುವುದು – ಸೂರ್ಯ ತೇಜಸ್ಸಿನಿಂದ ಅಭಿಭೂತವಾದ ಗ್ರಹ ನಕ್ಷತ್ರಾದಿಗಳು ಗೋಚರಿಸುವುದಿಲ್ಲ, ೮) ಒಂದೇ ಬಗೆಯ ವಸ್ತುವಿನೊಡನೆ ಸೇರಿಕೊಂಡಿರುವಿಕೆ – ಹೆಸರು ಕಾಳಿನ ರಾಶಿಯಲ್ಲಿ ನಾವು ಎಸೆದ ಹೆಸರು ಕಾಳನ್ನು ಗುರುತಿಸಲಾಗುವುದಿಲ್ಲ.

ಈ ಪ್ರಕೃತಿ ಮತ್ತು ಪುರುಷ ಇರುವುದಾದರೆ ಅವು ಏಕೆ ಉಪಲಬ್ಧವಾಗುತ್ತಿಲ್ಲ? ಇರುವುದಾದರೆ ಯಾವ ಹೇತುವಿನಿಂದ ಉಪಲಬ್ಧವಾಗುತ್ತವೆ ? –

**सौक्ष्म्यात्तदनुपलब्धिर्नाभावात् कार्यतस्तदुपलब्धिः ।**
**महदादि तच्च कार्यं, प्रकृतिविरूपं सरूपं च ॥ ८ ॥**

ಅತ್ಯಂತ ಸೂಕ್ಷ್ಮವಾದ್ದರಿಂದ ಅವ್ಯಕ್ತವು (ಪ್ರಧಾನವು) ಉಪಲಬ್ಧ

ವಾಗುವುದಿಲ್ಲವೇ ಹೊರತು ಅಭಾವದಿಂದಲ್ಲ. ಪರಮಾಣುಗಳೇ ಇದಕ್ಕೆ ಉದಾಹರಣೆ. ಈ ಅವ್ಯಕ್ತದ ಕಾರ್ಯವನ್ನು ನೋಡಿ ಇದಕ್ಕೆ ಕಾರಣವಾದ ವಸ್ತು ಇದೆಯೆಂದು ಊಹಿಸಬಹುದು. ಇದರ ಕಾರ್ಯವು ಮಹತ್ತು (ಬುದ್ಧಿ) ಅಹಂಕಾರ, ಪಂಚತನ್ಮಾತ್ರೆಗಳು, ಜ್ಞಾನೇಂದ್ರಿಯ, ಕರ್ಮೇಂದ್ರಿಯಗಳು, ಪಂಚಮಹಾಭೂತಗಳು. ಈ ವ್ಯಕ್ತಗಳಿಗೆ ಕಾರಣವಾದ ಪ್ರಧಾನವು ಅವ್ಯಕ್ತ. ಈ ಕಾರ್ಯಗಳು ಪ್ರಕೃತಿಗೆ ಸದೃಶವೂ ಅಸದೃಶವೂ ಆಗಿರುತ್ತವೆ. ಹೀಗಾಗುವುದಕ್ಕೆ ಕಾರಣವನ್ನು ಮುಂದೆ ಹೇಳುತ್ತೇವೆ.

ಈ ಮಹದಾದಿ ಕಾರ್ಯವು ಮೊದಲೇ ಸತ್ ಆಗಿದೆಯೇ ? ಅಥವಾ ಅಸತ್ ಆಗಿದ್ದು ಹೊಸದಾಗಿ ಹುಟ್ಟುತ್ತದೆಯೇ ? ಎಂದು ಆಚಾರ್ಯರಲ್ಲಿ ಶಂಕೆಯುಂಟು. ಏಕೆಂದರೆ ಸಾಂಖ್ಯ ದರ್ಶನದಲ್ಲಿ ಕಾರ್ಯವು ಸತ್. ಬೌದ್ಧಾದಿಗಳ ಮತದಲ್ಲಿ ಕಾರ್ಯವು ಅಸತ್. ಲೋಕದಲ್ಲಿ ಅಸತ್ ಆದದ್ದು ಹುಟ್ಟುವುದಿಲ್ಲ. ಮರಳಿನಿಂದ ಎಣ್ಣೆ ಹುಟ್ಟುವುದಿಲ್ಲ. ಆದ್ದರಿಂದ ಕಾರ್ಯವು ಸತ್ ಆದ ಪ್ರಯುಕ್ತ ಅದು ಕಾರಣಾವಸ್ಥೆಯಲ್ಲಿಯೂ ಸತ್ ಆಗಿರಬೇಕು. ಆದ್ದರಿಂದ ಸದ್ವಸ್ತುಗಳಿಗೆ ಕಾರಣವಾದ ಅವ್ಯಕ್ತವೂ ಸದ್ವಸ್ತುವೇ ಆಗಿರಬೇಕು. ಆದ್ದರಿಂದ ಕಾರ್ಯವು ಸತ್.

ಅಸತ್ ಆದದ್ದು ಎಂದಿಗೂ ಹುಟ್ಟುವುದಿಲ್ಲ. ಮರಳಿನಲ್ಲಿ ಎಣ್ಣೆಯಿಲ್ಲವಾದ್ದರಿಂದ ಅದರಿಂದ ಎಣ್ಣೆ ಹುಟ್ಟುವುದಿಲ್ಲ.

**असदकरणादुपादानग्रहणात्, सर्वसम्भवाभावात् ।**
**शक्तस्य शक्यकरणात्, कारणभावाच्च, सत्कार्यम् ॥ ९ ॥**

೧) ಅಸದಕರಣಾತ್ – ಇದನ್ನು ಈ ಮೇಲೆ ವಿವರಿಸಲಾಗಿದೆ.

೨) ಆಯಾ ವಸ್ತುವಿಗೆ ಬೇಕಾದ ಉಪಾದಾನ ಕಾರಣದಿಂದಲೇ ಆಯಾ ಕಾರ್ಯವನ್ನು ಮಾಡಲಾಗುತ್ತದೆ. ಮೊಸರನ್ನು ಮಾಡಲು ಹಾಲನ್ನು ಮಾತ್ರ ಉಪಯೋಗಿಸುತ್ತೇವೆ. ನೀರನ್ನು ಉಪಯೋಗಿಸುವುದಿಲ್ಲ.

೩) ಒಂದು ವಸ್ತುವಿನಿಂದ ಸರ್ವವನ್ನೂ ನಿರ್ಮಿಸಲು ಸಾಧ್ಯವಿಲ್ಲ. ಚಿನ್ನವನ್ನು ಬೆಳ್ಳಿ ಮುಂತಾದ ಲೋಹದಿಂದಲೂ, ಹುಲ್ಲು-ಮಣ್ಣು-ಮರಳುಗಳಿಂದಲೂ ನಿರ್ಮಿಸಲಾಗುವುದಿಲ್ಲ.

೪) ಆಯಾ ಕಾರ್ಯವನ್ನು ಮಾಡಲು ಶಕ್ತನಾದವನೇ ಅದನ್ನು ಮಾಡಬೇಕು ಮತ್ತು ಅವನ ಸಾಧನವು ಅದನ್ನು ನಿರ್ಮಿಸಲು ಶಕ್ತವಾಗಿರಬೇಕು. ಗಡಿಗೆಯನ್ನು

ಕುಂಬಾರನೇ ಮಾಡಬೇಕಾಗುತ್ತದೆ. ಅದಕ್ಕೆ ಬೇಕಾದ ಮಣ್ಣು, ದಂಡ, ಚಕ್ರ ಮೊದಲಾದ ಸಾಧನಗಳನ್ನೇ ಬಳಸಬೇಕಾಗುತ್ತದೆ.

೫) ಕಾರ್ಯಕ್ಕೆ ಇದೇ ಕಾರಣವೆಂದು ನಿಶ್ಚಿತವಾಗಿದೆ. ಗೋದಿಯ ಸಸ್ಯಗಳಿಂದ ಗೋದಿಯೇ ಬೆಳೆಯುತ್ತದೆ. ಭತ್ತದ ಸಸ್ಯದಿಂದ ಭತ್ತವೇ ಬೆಳೆಯುತ್ತದೆ. ಆದ್ದರಿಂದ ಕಾರ್ಯವು ಕಾರಣದಲ್ಲಿ ಮೊದಲೇ ಇರುತ್ತದೆಯೆಂದು ತಿಳಿಯಬೇಕು. ಆದ್ದರಿಂದ ಸತ್-ಕಾರ್ಯವಾದವೇ ಸರಿಯಾದದ್ದು.

ಕಾರ್ಯವು ಪ್ರಕೃತಿಗೆ ಸದೃಶವೂ ಅಸದೃಶವೂ ಆಗಿರುತ್ತದೆಯೆಂಬುದನ್ನು ಈ ಮುಂದೆ ತಿಳಿಸಲಾಗುತ್ತದೆ.

**हेतुमदनित्यमव्यापि सक्रियमनेकमाश्रितं लिङ्गम् ।**
**सावयवं परतन्त्रं व्यक्तं विपरीतमव्यक्तम् ॥ १० ॥**

ವ್ಯಕ್ತವಾದ ಮಹದಾದಿ ಕಾರ್ಯವು ಹೇತುವುಳ್ಳದ್ದು. ಹೇತು, ಉಪಾದಾನ, ಕಾರಣ ಇವು ಒಂದೇ ಅರ್ಥವನ್ನು ಕೊಡುವ ಪರ್ಯಾಯ ಪದಗಳು. ವ್ಯಕ್ತವಾದ ಕಾರ್ಯಕ್ಕೆ ಹೇತುವಿರಲೇಬೇಕು. ಆದ್ದರಿಂದ ಎಲ್ಲ ವ್ಯಕ್ತ ವಸ್ತುಗಳೂ ಹೇತುಮತ್ತಾಗಿವೆ. ಬುದ್ಧಿಗೆ ಪ್ರಧಾನವು ಹೇತು. ಅಹಂಕಾರಕ್ಕೆ ಬುದ್ಧಿ ಹೇತು. ಪಂಚತನ್ಮಾತ್ರೆಗಳಿಗೂ ಏಕಾದಶ ಇಂದ್ರಿಯಗಳಿಗೂ ಅಹಂಕಾರವು ಹೇತು. ಆಕಾಶಕ್ಕೆ ಶಬ್ದತನ್ಮಾತ್ರವೂ, ವಾಯುವಿಗೆ ಸ್ಪರ್ಶತನ್ಮಾತ್ರವೂ, ವಹ್ನಿಗೆ ರೂಪ ತನ್ಮಾತ್ರೆಯೂ, ಜಲಕ್ಕೆ ರಸತನ್ಮಾತ್ರೆಯೂ, ಪೃಥ್ವಿಗೆ ಗಂಧತನ್ಮಾತ್ರೆಯೂ ಹೇತುಗಳು. ಹೀಗೆ ಪಂಚಮಹಾಭೂತಗಳವರೆಗೂ ಹೇತುಗಳಿವೆ. ಈ ಹೇತುಗಳುಳ್ಳ ಎಲ್ಲ ವಸ್ತುಗಳೂ ಅನಿತ್ಯವಾದವು. ಇವು ಒಂದೊಂದು ವ್ಯಾಪಕವಲ್ಲ. ಅನೇಕ ಬಗೆಯವು. ವ್ಯಕ್ತವೆಲ್ಲವೂ ಇನ್ನೊಂದನ್ನು ಆಶ್ರಯಿಸಿ ಕೊಂಡಿರುತ್ತದೆ. ಈ ವ್ಯಕ್ತಗಳೆಲ್ಲವೂ ಪ್ರಳಯ ಕಾಲದಲ್ಲಿ ಅವ್ಯಕ್ತದಲ್ಲಿ ಲೀನವಾಗುತ್ತವೆ. ಅವ್ಯಕ್ತವಾದ ಪ್ರಕೃತಿಯು ಮಾತ್ರ ಲೀನವಾಗುವುದಿಲ್ಲ. ಅದು ನಿತ್ಯವಾದದ್ದು. ವ್ಯಕ್ತವು ಅವಯವ ಸಹಿತವಾದದ್ದು ಮತ್ತು ಪರಾಧೀನವಾದದ್ದು. ಈ ವ್ಯಕ್ತಗಳು ತಮಗೆ ಕಾರಣವಾದುದಕ್ಕೆ ಅಧೀನವಾಗಿರುತ್ತವೆ.

ಅವ್ಯಕ್ತವಾದರೋ ಇವುಗಳಿಗೆ ವಿರೂಪವಾಗಿರುತ್ತದೆ. ಹೇಗೆಂದರೆ ಇದಕ್ಕೆ ಯಾವ ಹೇತುವೂ ಇಲ್ಲ. ಇದು ನಿತ್ಯವಾದದ್ದು. ವ್ಯಕ್ತವೆಲ್ಲವನ್ನೂ ವ್ಯಾಪಿಸಿಕೊಂಡಿದೆ. ಅದರಲ್ಲಿ ಕ್ರಿಯೆಯಿಲ್ಲ. ಇದಕ್ಕೆ ಪ್ರಳಯ ಕಾಲದಲ್ಲೂ ನಾಶವಿಲ್ಲ. ಅದು ಅವಯವ ರಹಿತವಾದದ್ದು. ಪರಾಧೀನವೂ ಅಲ್ಲ. ಏಕೆಂದರೆ

ಅದಕ್ಕೆ ಹೇತುವಾದ ಇನ್ನೊಂದು ವಸ್ತುವಿಲ್ಲ. ಹೀಗೆ ಅವ್ಯಕ್ತವು ವ್ಯಕ್ತಗಳಿಗಿಂತ ವಿರೂಪವಾಗಿರುತ್ತದೆ.

ಅವ್ಯಕ್ತವಾದ ಪ್ರಕೃತಿಗೆ ವ್ಯಕ್ತವು ಹೇಗೆ ವಿರೂಪವೆಂಬುದನ್ನು ಹೇಳಿದ್ದಾಯಿತು. ಸರೂಪ ಹೇಗೆ ಎಂಬುದನ್ನು ಈಗ ಹೇಳಲಾಗುವುದು.

**त्रिगुणमविवेकि विषय: सामान्यमचेतनं प्रसवधर्मि ।**
**व्यक्तं तथा प्रधानं, तद्विपरीतस्तथा च पुमान् ॥ ११ ॥**

ಅವ್ಯಕ್ತವಾದ ಪ್ರಧಾನವು ವ್ಯಕ್ತವಾದ ಮಹದಾದಿಗಳು ಸತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳುಳ್ಳವು. ವ್ಯಕ್ತವು ಅವಿವೇಕಿ ಎಂದರೆ ಇದು ವ್ಯಕ್ತವಾದದ್ದು, ಇವು ಗುಣಗಳು ಎಂಬ ವಿವೇಚನೆಗೆ ಒಳಗಾಗುವುದಿಲ್ಲವೆಂದರ್ಥ. ವ್ಯಕ್ತವು ವಿಷಯವಾಗುತ್ತದೆ. ಇದು ಪುರುಷನಿಗೆ ಭೋಜ್ಯ ಎಂದರ್ಥ. ಎಲ್ಲ ಪುರುಷರಿಗೂ ಭೋಜ್ಯವಾದದ್ದರಿಂದ ಸಾಮಾನ್ಯವೆನಿಸಿದೆ. ಇದು ಅಚೇತನ. ಸುಖ ದುಃಖ ಮೋಹಗಳನ್ನು ಸ್ವತಃ ತಿಳಿಯಲಾರದು. ಬುದ್ಧಿಯಿಂದ ಅಹಂಕಾರವೂ, ಅಹಂಕಾರದಿಂದ ಪಂಚತನ್ಮಾತ್ರಗಳೂ ಇತ್ಯಾದಿ ವಸ್ತುಗಳು ಪ್ರಸೂತವಾಗುವುದರಿಂದ ವ್ಯಕ್ತವು ಪ್ರಸವಧರ್ಮಿ. ಈ ಧರ್ಮಗಳೆಲ್ಲವೂ ಅವ್ಯಕ್ತದಲ್ಲಿಯೂ ಇರುವುದರಿಂದ ಈ ವ್ಯಕ್ತಾವ್ಯಕ್ತಗಳು ಸರೂಪಗಳಾಗಿವೆ. ಪ್ರಧಾನವು ಅವ್ಯಕ್ತವಾಗಿರುವುದೊಂದೇ ವಿಶೇಷ. ಇವೆಲ್ಲವಕ್ಕೂ ವಿರೂಪವಾದವನು ಪುರುಷ. ಅವನು ತ್ರಿಗುಣಾತ್ಮಕನಲ್ಲ. ವಿವೇಕಿಯಾದವನು ಯಾವುದಕ್ಕೂ ಭೋಜ್ಯವಲ್ಲ. ಯಾವ ಹೋಲಿಕೆಯೂ ಇಲ್ಲದವನು, ಚೈತನ್ಯವುಳ್ಳವನು, ಸುಖ-ದುಃಖ- ಮೋಹಗಳನ್ನು ತಿಳಿಯಬಲ್ಲವನಾದ್ದರಿಂದ ಚೇತನ. ಈತನಿಂದ ಯಾವುದೂ ಹುಟ್ಟುವುದಿಲ್ಲವಾದ ಕಾರಣ ಪುರುಷನು ಪ್ರಸವಧರ್ಮಿಯಲ್ಲ.

ಈ ಪ್ರಕಾರವಾಗಿ ಅವ್ಯಕ್ತ-ಪುರುಷರಿಗಿರುವ ಸಾಧರ್ಮ್ಯವನ್ನೂ, ವ್ಯಕ್ತ-ಪುರುಷರಿಗೆ ಇರುವ ವೈಧರ್ಮ್ಯವನ್ನೂ ತಿಳಿಸಲಾಯಿತು.

ಈಗ ತ್ರಿಗುಣಗಳ ಸ್ವರೂಪವೇನೆಂಬುದನ್ನು ಹೇಳಲಾಗುವುದು.

**प्रीत्यप्रीतिविषादात्मका: प्रकाशप्रवृत्तिनियमार्था: ।**
**अन्योऽन्याभिभवाश्रयजननमिथुनवृत्तयश्च गुणा: ॥ १२ ॥**

ಈ ಮೂರು ಗುಣಗಳು ಪ್ರೀತ್ಯಾತ್ಮಕಗಳು, ಅಪ್ರೀತ್ಯಾತ್ಮಕಗಳು, ವಿಷಾದಾತ್ಮಕಗಳು ಎಂದು ಕ್ರಮವಾಗಿ ಆಗಿರುತ್ತವೆ. ಪ್ರೀತಿ ಎಂದರೆ

ಸುಖವೆಂದರ್ಥ. ಸತ್ವಗುಣವು ಸುಖಾತ್ಮಕವಾದದ್ದು. ಅಪ್ರೀತಿ ಎಂದರೆ ದುಃಖ. ರಜೋಗುಣವು ದುಃಖಾತ್ಮಕವಾದದ್ದು. ವಿಷಾದವೆಂದರೆ ಮೋಹ. ತಮೋಗುಣವು ಮೋಹಾತ್ಮಕವಾದದ್ದು. (ಮೋಹವೆಂದರೆ ಅಜ್ಞಾನ) ಕಾರಿಕೆಯಲ್ಲಿರುವ ಅರ್ಥಶಬ್ದಕ್ಕೆ ಸಾಮರ್ಥ್ಯವೆಂದರ್ಥ. ಸತ್ವವು ಪ್ರಕಾಶನ ಸಮರ್ಥ. ರಜೋಗುಣವು ಪ್ರವರ್ತನ ಸಮರ್ಥ, ತಮೋಗುಣವು ಸ್ಥಿತಿಗೆ ಎಂದರೆ ಪ್ರವೃತ್ತಿಯನ್ನು ತಡೆಯುವುದಕ್ಕೆ ಸಮರ್ಥ. ಈ ಗುಣಗಳು ಒಂದನ್ನೊಂದು ಅಭಿಭವಗೊಳಿಸಿ ತಮ್ಮ ತಮ್ಮ ಹೆಚ್ಚುಗಾರಿಕೆಯನ್ನು ಸ್ಥಾಪಿಸುತ್ತವೆ. ಹೇಗೆಂದರೆ ಸತ್ವವು ಉತ್ಕಟವಾದಾಗ ರಜಸ್ಸು, ತಮೋಗುಣಗಳು ಹಿಂದಕ್ಕೆ ಸರಿಯುತ್ತವೆ. ರಜಸ್ಸು ಉತ್ಕಟವಾದಾಗ ಸತ್ವ, ತಮೋಗುಣಗಳನ್ನು ಮರೆಮಾಡಿ ತಾನು ಮುಂದಾಗುತ್ತದೆ. ತಮಸ್ಸು ಉತ್ಕಟವಾದಾಗ ಸತ್ವ, ರಜಸ್ಸುಗಳನ್ನು ಹಿಂದಕ್ಕೆ ಸರಿಸಿ ತಾನು ತನ್ನ ಅಧಿಕಾರವನ್ನು ಮೆರೆಸುತ್ತದೆ.

ಈ ಮೂರು ಗುಣಗಳಿಂದ ರಹಿತವಾದ ಯಾವ ವಸ್ತುವೂ ಇಲ್ಲ. ಉದಾಹರಣೆಗೆ – ಒಬ್ಬ ಸುಂದರಳೂ, ಸುಶೀಲಳೂ ಆದ ಸ್ತ್ರೀ ಎಲ್ಲರಿಗೂ ಸಂತೋಷವನ್ನುಂಟು ಮಾಡುತ್ತಾಳೆ. ಪತಿಗೆ ಸುಖವನ್ನುಂಟು ಮಾಡುತ್ತಾಳೆ. ಸವತಿಯರಿಗೆ ದುಃಖವನ್ನೂ, ಕಾಮುಕರಾದ ಪರಪುರುಷರಿಗೆ ಮೋಹ (ವಿಷಾದ)ವನ್ನೂ ಉಂಟುಮಾಡುತ್ತಾಳೆ.

**सत्त्वं लघु प्रकाशकमिष्टमुपष्टम्भकं चलं च रजः ।**
**गुरु वरणकमेव तमः प्रदीपवच्चार्थतो वृत्तिः ॥ १३ ॥**

ಸತ್ವಗುಣವು ಹಗುರವೂ, ಪ್ರಕಾಶಕವೂ ಆಗಿರುತ್ತದೆ. ರಜೋಗುಣವು ಉತ್ತೇಜಕವೂ, ಪ್ರವರ್ತಕವೂ ಆಗಿರುತ್ತದೆ. ತಮೋಗುಣವು (ಗುರುವೂ) ಭಾರವೂ, ಆವರಣ ಮಾಡತಕ್ಕದ್ದೂ ಆಗಿದೆ.

ಸತ್ವಗುಣವು ಉತ್ಕಟವಾದಾಗ ಅಂಗಗಳು ಹಗುರವಾಗಿರುವಂತೆಯೂ, ಬುದ್ಧಿಯು ಪ್ರಕಾಶಕವಾಗಿಯೂ, ಪ್ರಸನ್ನವಾಗಿಯೂ ಇರುತ್ತದೆ. ರಜಸ್ಸು ಉತ್ಕಟವಾದಾಗ ಬುದ್ಧಿಯು ಉದ್ಯೋಗಶೀಲವೂ ಮತ್ತು ಪ್ರವರ್ತಕವೂ ಆಗಿರುತ್ತದೆ. ತಮೋಗುಣವು ಉತ್ಕಟವಾದಾಗ ಅಂಗಗಳು ಭಾರವಾಗಿರು ವಂತೆಯೂ, ಇಂದ್ರಿಯಗಳು ಮಂಕಾಗಿರುವಂತೆಯೂ ಇರುತ್ತವೆ.

ಈ ಗುಣಗಳು ಪರಸ್ಪರ ವಿರುದ್ಧಗಳಾದರೆ ಯಾವ ಕಾರ್ಯವನ್ನು ಸಾಧಿಸಬಲ್ಲವು ? ಎಂಬ ಪ್ರಶ್ನೆಗೆ ಕಡೆಯ ವಾಕ್ಯವು ಉತ್ತರವನ್ನೊಳಗೊಂಡಿದೆ. ದೀಪದಂತೆ ಸಾರ್ಥಕವಾದ ಕಾರ್ಯವನ್ನು ಇವು ಮಾಡುತ್ತವೆ. ದೀಪವು ಪರಸ್ಪರ

ವಿರುದ್ಧವಾದ ತೈಲ, ಅಗ್ನಿ, ವಾಯು ಇವುಗಳ ಸಂಯೋಗದಿಂದ ಒಂದು ವಸ್ತುವನ್ನು ಬೆಳಗುವಂತೆ ಈ ಗುಣಗಳು ಪರಸ್ಪರ ವಿರುದ್ಧವಾದರೂ ತಮ್ಮ ತಮ್ಮ ಕಾರ್ಯವನ್ನು ಸಾಧಿಸುತ್ತವೆ.

ಪ್ರಧಾನವೂ ವ್ಯಕ್ತವಾದ ಮಹದಾದಿಗಳೂ, ತ್ರಿಗುಣಾತ್ಮಕಗಳೆಂದು ಹೇಳಲಾಯಿತು. ಅವುಗಳಲ್ಲಿ ಗುಣತ್ರಯಗಳಿವೆಯೆಂಬುದು ಹೇಗೆ ತಿಳಿಯುತ್ತದೆ ? ಎಂಬ ಶಂಕೆಗೆ ಉತ್ತರವಾಗಿ ಮುಂದಿನ ಕಾರಿಕೆ ಹೊರಟಿದೆ –

**अविवेक्यादिः सिद्धः त्रैगुण्यात्तद्विपर्ययाभावात् ।**
**कारणगुणात्मकत्वात् कार्यस्याव्यक्तमपि सिद्धम् ॥ १४ ॥**

ಮಹದಾದಿಗಳು ಅವಿವೇಕಿಗಳೂ, ಭೋಜ್ಯಗಳೂ ಎಂದೂ ತ್ರಿಗುಣಾತ್ಮಕಗಳೆಂದೂ ತಿಳಿದುಬರುತ್ತದೆ. ಅವುಗಳಿಗೆ ಕಾರಣವಾದ ಅವ್ಯಕ್ತವೂ ಸಹ ತ್ರಿಗುಣಾತ್ಮಕವೆಂದು ನಿಶ್ಚಯಿಸಬಹುದು. ಅದಕ್ಕೆ ವಿರೋಧವು ಎಂದಿಗೂ ಇರಲಾರದು. ಕಾರ್ಯವು ಯಾವಾಗಲೂ ಕಾರಣ ಗುಣಗಳಿಂದ ಕೂಡಿರುತ್ತದೆ. ಇವುಗಳಿಗೆ ಕಾರಣವಾದ ಅವ್ಯಕ್ತವೂ ತ್ರಿಗುಣಾತ್ಮಕವೆಂದು ಸಿದ್ಧವಾಗುತ್ತದೆ. ಹೇಗೆಂದರೆ ನೂಲುಗಳಿಂದ ಬಟ್ಟೆಯಾಗುತ್ತದೆ. ನೂಲುಗಳು ಬಿಳಿಯ ಬಣ್ಣವಾಗಿದ್ದರೆ ಬಟ್ಟೆಯೂ ಬಿಳಿಯದಾಗುತ್ತದೆ. ನೂಲು ಕಪ್ಪಾಗಿದ್ದರೆ ಬಟ್ಟೆಯೂ ಕಪ್ಪಾದುದಾಗುತ್ತದೆ. ಏವಂ ಚ ಕಾರ್ಯದಲ್ಲಿ ಕಂಡುಬರುವ ಗುಣಗಳು ಕಾರಣದಲ್ಲಿ ಇರಲೇಬೇಕಾಗುತ್ತದೆ. ಆದ್ದರಿಂದ ವ್ಯಕ್ತವಾದ ಮಹದಾದಿಗಳಲ್ಲಿ ತೋರುವ ತ್ರೈಗುಣ್ಯಾದಿ ಗುಣಗಳು ಮೂಲ ಕಾರಣವಾದ ಅವ್ಯಕ್ತದಲ್ಲಿಯೂ ಇವೆಯೆಂದು ಸಿದ್ಧವಾಗುತ್ತದೆ.

ವ್ಯಕ್ತದಲ್ಲಿ ಇರುವ ಎಲ್ಲ ಗುಣಗಳೂ ಅವ್ಯಕ್ತದಲ್ಲಿವೆ ಎಂಬ ಮಾತು ಒಪ್ಪತಕ್ಕದ್ದಲ್ಲ ಮತ್ತು ವ್ಯಕ್ತಕ್ಕೆ ಕಾರಣವಾದ ಅವ್ಯಕ್ತವಿದೆಯೆಂಬುದೂ ಸರಿಯಲ್ಲ. ಲೋಕದಲ್ಲಿ ಯಾವುದು ಉಪಲಬ್ಧವಾಗುವುದಿಲ್ಲವೋ ಅದು ಇಲ್ಲವೆಂದೇ ಹೇಳಬೇಕು ಎಂಬ ಆಕ್ಷೇಪಕ್ಕೆ ಈಗ ಉತ್ತರವನ್ನು ಹೇಳಲಾಗುವುದು.

**भेदानां परिमाणात्, समन्वयात्, शक्तितः प्रवृत्तेश्च ।**
**कारणकार्यविभागात्, अविभागाद्वैश्वरूप्यस्य ॥ १५ ॥**

ಉತ್ಪನ್ನವಾದ ವಿವಿಧ ವ್ಯಕ್ತಗಳಿಗೆ ಒಂದು ಪರಿಮಾಣವಿರುತ್ತದೆ. ವ್ಯಕ್ತವಾದ ಬುದ್ಧಿ, ಅಹಂಕಾರ, ತನ್ಮಾತ್ರಗಳು, ಮಹಾಭೂತಗಳು ಇವುಗಳಿಗೆ ಒಂದು ಅಳತೆ (ಪರಿಮಾಣ)ವುಂಟು. ಈ ಪರಿಮಾಣವು ಕಾರಣದಲ್ಲಿರುವುದರಿಂದಲೇ ಬಂದಿದೆ. ಕುಂಬಾರನು ಗಡಿಗೆಯನ್ನು ಮಾಡುವಾಗ ಗಡಿಗೆಗೆ ಬೇಕಾದಷ್ಟು

ಮಣ್ಣನ್ನು ಮಾತ್ರ ತೆಗೆದುಕೊಳ್ಳುತ್ತಾನೆ. ಈ ಪರಿಮಾಣವು ಕಾರಣದಲ್ಲೂ ಇರಲೇ ಬೇಕು.

ಕಾರಣದಲ್ಲಿರುವ ಗುಣವನ್ನೇ ಕಾರ್ಯದಲ್ಲಿ ಅನ್ವಯಿಸುವುದು ಲೋಕದಲ್ಲಿ ಕಂಡುಬಂದಿದೆ. ವ್ರತಧಾರಿಯಾದ ಒಬ್ಬ ವಟುವನ್ನು ನೋಡಿ ಇವನ ತಂದೆ-ತಾಯಿಗಳು ವ್ರತನಿಷ್ಠರಾದ ಬ್ರಾಹ್ಮಣರೆಂದು ತಿಳಿಯುತ್ತಾರೆ.

ಹಾಗೆಯೇ ಯಾವಾತನು ಯಾವ ಕಾರ್ಯದಲ್ಲಿ ಶಕ್ತನೋ ಅವನು ಅದನ್ನೇ ನಿರ್ಮಿಸುತ್ತಾನೆ. ಗಡಿಗೆಯನ್ನು ಮಾಡುವ ಕುಂಬಾರನು ಗಡಿಗೆಯನ್ನು ಮಾತ್ರ ಮಾಡುತ್ತಾನೆ. ಬಟ್ಟೆಯನ್ನು ನೇಯುವುದಿಲ್ಲ. ಅಂತೆಯೇ ಬುದ್ಧಿ ಮೊದಲಾದವನ್ನು ನಿಷ್ಪಾದಿಸುವ ಶಕ್ತಿ ಅದಕ್ಕೆ ಕಾರಣವಾದ ಅವ್ಯಕ್ತದಲ್ಲಿ ಇರಲೇಬೇಕು.

ಕಾರ್ಯಕ್ಕೆ ಅನುಗುಣವಾದ ಕಾರಣವಿರಲೇ ಬೇಕು. ಗಡಿಗೆಗೆ ಮಣ್ಣಿನ ಮುದ್ದೆ ಕಾರಣವೇ ಹೊರತು ಹತ್ತಿಯಲ್ಲ. ಆದರೆ ಕಾರ್ಯವು ಯಾವುದನ್ನು ಮಾಡಬಲ್ಲದೋ ಅದನ್ನು ಕಾರಣವು ಮಾಡಲಾರದು. ಗಡಿಗೆ ಹಾಲು ಮೊಸರುಗಳನ್ನು ಧರಿಸಬಲ್ಲದು. ಮಣ್ಣಿನ ಮುದ್ದೆಯು ಅವುಗಳನ್ನು ಧರಿಸಲಾರದು. ಈ ಕಾರಣಗಳಿಂದ ಅವ್ಯಕ್ತವಿದೆಯೆಂದೂ ಅದರಲ್ಲಿ ಗುಣತ್ರಯಾದಿ ವಿಶೇಷವಿದೆಯೆಂದೂ ಸಿದ್ಧವಾಗುತ್ತದೆ.

ನಾನಾ ವಿಧವಾದ ಜಗತ್ತಿಗೂ ಅವ್ಯಕ್ತಕ್ಕೂ ಅಭೇದವನ್ನು ಹೇಳಬೇಕಾಗಿದೆ. ನಾನಾ ರೂಪದಲ್ಲಿರುವ ಪಂಚಮಹಾಭೂತಗಳು ತಮಗೆ ಕಾರಣವಾದ ಪಂಚತನ್ಮಾತ್ರೆಗಳಲ್ಲಿ ಅಭೇದವನ್ನು ಹೊಂದಿವೆ. ಪಂಚತನ್ಮಾತ್ರೆಗಳು ಅಹಂಕಾರದಲ್ಲಿಯೂ ಅಹಂಕಾರವು ಮಹತ್ತಿನಲ್ಲಿಯೂ ಸೇರಿಕೊಂಡು ಅಭಿನ್ನವಾಗಿವೆ. ಹಾಗೆಯೇ ಮಹತ್ತು ಕಾರ್ಯವಾದ್ದರಿಂದ ತನ್ನ ಕಾರಣದೊಡನೆ ಅಭೇದವನ್ನು ಹೊಂದಿರಲೇಬೇಕು. ಸಾವಯವವಾದ ಕಾರ್ಯವು ಅವಯವರಹಿತವಾದ ಒಂದು ವಸ್ತುವಿನಲ್ಲಿ ಅಂತ್ಯಗೊಳ್ಳಬೇಕು, ಯಾವುದು ಅಂತ್ಯವೋ ಅದೇ ನಿರವಯವವಾದ ಅವ್ಯಕ್ತ.

**कारणमस्त्यव्यक्तं प्रवर्तते त्रिगुणत: समुदयाच्च ।**
**परिणामत: सलिलवत् प्रतिप्रतिगुणाश्रयविशेषात् ॥ १६ ॥**

ಆದ್ದರಿಂದ ಎಲ್ಲದಕ್ಕೂ ಕಾರಣವಾದ ಅವ್ಯಕ್ತವಿದೆಯೆಂದು ಸಿದ್ಧವಾಗುತ್ತದೆ. ಇದರಿಂದ ಮಹದಾದಿಗಳು ಉತ್ಪನ್ನವಾಗುತ್ತವೆ. ಉತ್ಪತ್ತಿಯು ತ್ರಿಗುಣಗಳ ಏರುಪೇರಿನಿಂದ ಆಗುತ್ತದೆ. ತ್ರಿಗುಣಗಳೆಲ್ಲವೂ ಸೇರಿ, ತಂತುಗಳು ಸೇರಿ ವಸ್ತ್ರಗಳನ್ನು ನಿರ್ಮಿಸುವಂತೆ ಮೂರು ಲೋಕಗಳೂ ಈ ಅವ್ಯಕ್ತದ

ಪರಿಣಾಮಗಳು. ನೀರು ಹೇಗೆ ಆಶ್ರಯಭೇದದಿಂದ ವಿಭಿನ್ನ ಗುಣಗಳನ್ನು ಪಡೆಯುವುದೋ ಹಾಗೆ ಆಶ್ರಯವಾದ ಗುಣಗಳ ತಾರತಮ್ಯದಿಂದ ಪದಾರ್ಥಗಳು ಬೇರೆ ಬೇರೆ ಸ್ವಭಾವದವುಗಳಾಗುತ್ತವೆ. ದೇವತೆಗಳು ಸತ್ವಗುಣದಿಂದ ಸುಖಿಗಳು. ಮನುಷ್ಯರು ರಜೋಗುಣಪ್ರಾಧಾನ್ಯದಿಂದ ದುಃಖಿಗಳು. ತಿರ್ಯಗ್ ಜಂತುಗಳು ತಮೋಗುಣಪ್ರಾಧಾನ್ಯದಿಂದ ಮೂಢಸ್ವಭಾವದವು. ಒಂದೇ ಬಗೆಯ ಮೋಡದಿಂದ ಸುರಿದ ನೀರು ಉಪ್ಪು ನೆಲದಲ್ಲಿ ಬಿದ್ದ ನೀರು ಉಪ್ಪಾಗಿಯೂ, ಬೇರೆ ಬೇರೆ ಬಣ್ಣದ ನೆಲದಲ್ಲಿ ನಾನಾ ಬಣ್ಣವುಳ್ಳದ್ದಾಗಿಯೂ ಪರಿಣಮಿಸುತ್ತದೆ.

ಈಗ ಪುರುಷನಿದ್ದಾನೆಂದು ಸಾಧಿಸಲಾಗುತ್ತದೆ –

**संघातपरार्थत्वात् त्रिगुणादिविपर्ययादधिष्टानात् ।**
**पुरुषोऽस्ति भोक्तृभावात् कैवल्यार्थं प्रवृत्तेश्च ॥ १७ ॥**

ಅನೇಕ ವಸ್ತುಗಳ ಸಂಘಾತವು (ಸಂಘಟನೆ) ಅನ್ಯಾರ್ಥವಾಗಿರುತ್ತದೆ. ಮಂಚವು ಮಲಗುವ ಪುರುಷನಿಗಾಗಿ, ಗೃಹನಿರ್ಮಾಣವು ವಾಸಮಾಡುವ ಜನರಿಗಾಗಿ, ಇದು ಲೋಕದಲ್ಲಿ ದೃಷ್ಟವಾಗಿದೆ. ಮಹದಾದಿ ವಸ್ತುಗಳ ಸಂಘಟನೆಯು (ಶರೀರವು) ಅನ್ಯರಿಗಾಗಿ, ಏವಂ ಚ ಅವ್ಯಕ್ತವಿಕಾರಗಳಿಗಿಂತ ಅನ್ಯನಾದ ಪುರುಷನು ಇದ್ದಾನೆಂದು ಸಿದ್ಧವಾಗುತ್ತದೆ. ಹಿಂದೆ ಹೇಳಿದ ತ್ರಿಗುಣಾತ್ಮಕವಾದ ಪ್ರಕೃತಿಗಿಂತ ಈ ಪುರುಷನು ವಿಲಕ್ಷಣ ಸ್ವಭಾವದವನು. ಇವನಲ್ಲಿ ಗುಣತ್ರಯವಿಲ್ಲ. ರಥವು ಸಾರಥಿಯಿಂದ ಹೇಗೆ ನಡೆಯುತ್ತದೆಯೋ ಹಾಗೆ ಈ ಶರೀರವೆಂಬ ರಥವನ್ನು ನಡೆಸತಕ್ಕವನೊಬ್ಬನಿರಬೇಕು. ಅವನೇ ಪುರುಷ. (ಅಧಿಷ್ಠಾನ = ಚಾಲಕನಿಗೆ ಆಶ್ರಯ) ನಾನಾ ಬಗೆಯ ಭಕ್ಷ್ಯ, ಅನ್ನ ಮೊದಲಾದವನ್ನು ತಿನ್ನುವ ಒಬ್ಬ ಭೋಕ್ತ ಇರಲೇಬೇಕು. ಹಾಗೆಯೇ ಅವ್ಯಕ್ತವು ನಿರ್ಮಿಸಿದ ನಾನಾ ಬಗೆಯ ಭೋಜ್ಯ ವಸ್ತುಗಳನ್ನು ಭೋಗಿಸುವ ಒಬ್ಬ ಭೋಕ್ತೃವಿರಬೇಕು. ಅವನೇ ಪುರುಷ ಮತ್ತು ಮೋಕ್ಷಾರ್ಥವಾಗಿ ಜನರ ಪ್ರವೃತ್ತಿಯು ಕಂಡುಬರುತ್ತದೆ. ಪ್ರತಿಯೊಬ್ಬ ಮನುಷ್ಯನು ಸಂಸಾರದ ಕಷ್ಟದಿಂದ ಬಿಡುಗಡೆಯನ್ನು ಅಪೇಕ್ಷಿಸುತ್ತಾನೆ. ಅವ್ಯಕ್ತವು ತಂದು ಒಡ್ಡಿದ ಸಂಸಾರದ ಕಷ್ಟಗಳಿಂದ ಮನುಷ್ಯನು ಬಿಡುಗಡೆಯನ್ನು ಅಪೇಕ್ಷಿಸುವುದರಿಂದ ಅವ್ಯಕ್ತಕ್ಕಿಂತ ಭಿನ್ನನಾದ ಪುರುಷನಿದ್ದಾನೆಂದು ನಿಶ್ಚಯಿಸಬಹುದು.

ಈ ಪುರುಷನು ಸರ್ವಶರೀರಗಳಲ್ಲಿಯೂ ಅಧಿಷ್ಠಾತೃವಾಗಿ ಒಬ್ಬನೇ ಇದ್ದಾನೆಯೇ ? ಅಥವಾ ಅನೇಕ ಪುರುಷರಿದ್ದಾರೆಯೇ ? (ಪುರುಷ = ಆತ್ಮ) ಎಂಬ ಶಂಕೆಗೆ ಉತ್ತರವಿದು: –

**जननमरणकरणानां प्रतिनियमादयुगपत्प्रवृत्तेश्च ।**
**पुरुषबहुत्वं सिद्धं त्रैगुण्यविपर्ययाच्चैव ॥ १८ ॥**

ಜನ್ಮ, ಮರಣ ಮತ್ತು ಇಂದ್ರಿಯಗಳು ಇವುಗಳಿಗೆ ವಿಭಿನ್ನವಾದ ನಿಯಮಗಳು ಇರುವುದರಿಂದ ಜೀವಾತ್ಮರು ಅನೇಕರಿದ್ದಾರೆ. ಒಬ್ಬನೇ ಜೀವಾತ್ಮನಾದರೆ ಎಲ್ಲರೂ ಏಕಕಾಲದಲ್ಲಿ ಹುಟ್ಟಿ ಏಕಕಾಲದಲ್ಲಿ ಸಾಯಬೇಕಾದೀತು. ಒಬ್ಬನ ನೇತ್ರೇಂದ್ರಿಯವು ಕುರುಡಾದರೆ ಎಲ್ಲರೂ ಕುರುಡರಾಗಬೇಕಾದೀತು. ಒಬ್ಬನು ಕಿವುಡನಾದರೆ ಎಲ್ಲರೂ ಕಿವುಡರಾಗ ಬೇಕಾದೀತು.

ಜನರು ವಿಭಿನ್ನಸ್ವಭಾವದವರಾಗಿ ಬೇರೆ ಬೇರೆ ಕಾರ್ಯಗಳಲ್ಲಿ ತೊಡಗುವುದರಿಂದಲೂ ಅನೇಕ ಆತ್ಮರಿದ್ದಾರೆಂದು ಸಿದ್ಧವಾಗುತ್ತದೆ. ಒಬ್ಬನು ಪುಣ್ಯಕಾರ್ಯದಲ್ಲಿ ತೊಡಗಿದ್ದರೆ, ಇನ್ನೊಬ್ಬನು ಪಾಪಕಾರ್ಯದಲ್ಲಿ ತೊಡಗಿರುತ್ತಾನೆ. ಒಬ್ಬನಿಗೆ ವಿದ್ಯೆಯಲ್ಲಿ ಪ್ರವೃತ್ತಿಯಿದ್ದರೆ, ಇನ್ನೊಬ್ಬನಿಗೆ ಇರುವುದಿಲ್ಲ. ಒಬ್ಬನಿಗೆ ವೈರಾಗ್ಯವಿದ್ದರೆ, ಇನ್ನೊಬ್ಬನಿಗೆ ಇರುವುದಿಲ್ಲ.

ಗುಣತ್ರಯಗಳು ಒಂದೇ ರೀತಿಯಲ್ಲಿ ಎಲ್ಲರಲ್ಲೂ ಇರುವುದಿಲ್ಲ. ಬೇರೆ ಬೇರೆ ವಿಧವಾಗಿರುವುದರಿಂದಲೂ ಜೀವಾತ್ಮರು ಅನೇಕರೆಂದು ಸಿದ್ಧವಾಗುತ್ತದೆ. ಒಬ್ಬನು ಸಾತ್ವಿಕನಾಗಿ ಸುಖಿಯಾಗಿರುತ್ತಾನೆ. ಇನ್ನೊಬ್ಬನು ರಾಜಸನಾಗಿ ದುಃಖಿಯಾಗಿರುತ್ತಾನೆ. ಮತ್ತೊಬ್ಬನು ತಾಮಸಗುಣದವನಾಗಿ ಮೂಢ ನಾಗಿರುತ್ತಾನೆ. ಆದ್ದರಿಂದ ಬಹುಮಂದಿ ಪುರುಷರಿದ್ದಾರೆಂದು ಸಿದ್ಧವಾಗುತ್ತದೆ.

**तस्माच्च विपर्यासात् सिद्धं साक्षित्वमस्य पुरुषस्य ।**
**कैवल्यं माध्यस्थ्यं द्रष्टृत्वमकर्तृभावश्च ॥ १९ ॥**

ಹಿಂದೆ ಹೇಳಿದ ವಿಶೇಷಣಗಳು ಯಾವುದೂ ಇಲ್ಲದ್ದರಿಂದ ಪುರುಷನು ಸಾಕ್ಷಿಯೆಂದು ಸಿದ್ಧವಾಗುತ್ತದೆ. ಸತ್ವ, ರಜಸ್ತಮೋಗುಣಗಳಾದರೋ ಕರ್ತೃಗಳು. ಪುರುಷನಾದರೋ ಸಾಕ್ಷಿಯಾದ್ದರಿಂದ ಇವನಲ್ಲಿ ಯಾವ ಪ್ರವೃತ್ತಿಯೂ ಇಲ್ಲ. ತಟಸ್ಥನಾಗಿರುವುದೇ ಪುರುಷನ ಸ್ವಭಾವ. ತಟಸ್ಥನಾದ ಒಬ್ಬ ಸಂನ್ಯಾಸಿಯು, ಹಳ್ಳಿಗಳಲ್ಲಿ ರೈತರು ಕೃಷಿಕರ್ಮವನ್ನು ಮಾಡುತ್ತಿದ್ದಾಗ ಅವರನ್ನು ಸುಮ್ಮನೇ ನೋಡುತ್ತಾ ಇರುವನೇ ಹೊರತು ಯಾವ ಕೆಲಸವನ್ನೂ ಮಾಡದೇ ತಟಸ್ಥನಾಗಿರುತ್ತಾನೆ. ಹಾಗೆಯೇ ಪುರುಷನು ಯಾವ ಕ್ರಿಯೆಯನ್ನೂ ಮಾಡದೇ ತಟಸ್ಥನಾಗಿರುತ್ತಾನೆ. ಆದ್ದರಿಂದ ಪುರುಷನು ಸಾಕ್ಷಿ. ಯಾವ ಕ್ರಿಯೆಯನ್ನೂ ಮಾಡದವನು ಎಂದು ಸಿದ್ಧವಾಗುತ್ತದೆ.

**ವಿವರಣೆ:** ಪುರುಷನ ಸ್ವರೂಪವು ಈ ಪ್ರಕಾರ ಸಿದ್ಧವಾಯಿತು.

೧) ಪುರುಷನಲ್ಲಿ ಯಾವ ಗುಣಗಳೂ ಇಲ್ಲ. ಇವನು ಕೇವಲ ಸಾಕ್ಷಿಯಾದವನು, ತಟಸ್ಥ, ಕೇವಲ ನೋಡತಕ್ಕವನು.

೨) ತಾಪತ್ರಯವಾವುದೂ ಇಲ್ಲದ ಕೈವಲ್ಯ ಪುರುಷನಿಗುಂಟು.

೩) ಅಕರ್ತೃಭಾವ (ಕರ್ತೃವಲ್ಲ)ವುಳ್ಳವನು.

ಪುರುಷನು ಅಕರ್ತೃವಾದರೆ ''ನಾನು ಧರ್ಮವನ್ನಾಚರಿಸುತ್ತೇನೆ. ಅಧರ್ಮವನ್ನು ಮಾಡುವವನಲ್ಲ'' ಇತ್ಯಾದಿ ನಿಶ್ಚಯವನ್ನು ಮಾಡತಕ್ಕವನು ಯಾರು ? ನಿಶ್ಚಯಿಸತಕ್ಕವನು ಪುರುಷನಾದರೆ ಅವನು ಅಕರ್ತೃ ಹೇಗಾಗುತ್ತಾನೆ ? ಎಂಬ ಆಕ್ಷೇಪಕ್ಕೆ ಈಗ ಉತ್ತರವನ್ನು ಹೇಳಲಾಗುವುದು.

**तस्मात्तत्संयोगादचेतनं चेतनावदिव लिङ्गम् ।**
**गुणकर्तृत्वे च तथा कर्तेव भवत्युदासीनः ॥ २० ॥**

ಚೇತನದ ಸಂಯೋಗವಾಗುವುದರಿಂದ ಲಿಂಗವು – ಎಂದರೆ ಮಹತ್ತು ಮುಂತಾದ ವ್ಯಕ್ತಪದಾರ್ಥವು ಚೈತನ್ಯವುಳ್ಳದ್ದೋ ಎಂಬಂತೆ ವರ್ತಿಸುತ್ತದೆ. ಲೋಕದಲ್ಲಿ ತಣ್ಣೀರಿನ ಸಂಬಂಧವಾದಾಗ ಗಡಿಗೆಯು ತಣ್ಣಗೂ, ಉಷ್ಣದ ಸಂಯೋಗವಾದಾಗ ಉಷ್ಣವಾಗಿಯೂ ತೋರುತ್ತದೆಯಲ್ಲವೇ ! ಹಾಗೆಯೇ ಮಹದಾದಿ ಲಿಂಗವು ಚೈತನ್ಯಶಾಲಿಯಾದ ಪುರುಷನ ಸಂಯೋಗದಿಂದ ಚೈತನ್ಯವುಳ್ಳದ್ದೋ ಎಂಬಂತೆ ಆಗುತ್ತದೆ. ಆದ್ದರಿಂದ ಗುಣತ್ರಯವು ನಿಶ್ಚಯ ಮಾಡುತ್ತದೆಯೇ ಹೊರತು ಪುರುಷನಲ್ಲ. ಹೀಗೆಯೇ ಲೋಕದಲ್ಲಿ ಮನುಷ್ಯನು ಗಂತೃ ಎಂದು ಪ್ರಯೋಗಿಸಿದರೂ ಪುರುಷನು ಗಂತೃವಾಗುವುದಿಲ್ಲ. ಗುಣಗಳು ಕರ್ತೃವಾದರೂ ಪುರುಷನು ಕರ್ತೃವೆಂಬಂತೆ ಕಾಣುತ್ತಾನೆ. ಹೇಗೆಂದರೆ ಕಳ್ಳನಲ್ಲದವನು ಕಳ್ಳರ ನಡುವೆ ಇದ್ದರೆ ಅವನೂ ಕಳ್ಳನೆಂದೇ ಲೋಕವು ಭಾವಿಸುತ್ತದೆ:

ಗುಣಗಳಿಗೂ ಪುರುಷನಿಗೂ ಏಕೆ ಸಂಯೋಗವಾಗುತ್ತದೆ ಎಂಬುದನ್ನು ಈಗ ಹೇಳಲಾಗುತ್ತದೆ.

**पुरुषस्य दर्शनार्थं कैवल्यार्थं तथा प्रधानस्य ।**
**पङ्ग्वन्धवदुभयोरपि संयोगस्तत्कृतः सर्गः ॥ २१ ॥**

ಪುರುಷನು ತನ್ನನ್ನು ನೋಡಲಿ ಎಂದು ಪ್ರಧಾನವೂ ಪ್ರಧಾನದಿಂದ ಆದ ತಾಪತ್ರಯವನ್ನು ತಪ್ಪಿಸಿಕೊಳ್ಳಲು ಪುರುಷನೂ ಇಚ್ಛಿಸುವುದರಿಂದ

ಉಭಯಸಂಯೋಗವಾಗಿರುತ್ತದೆ. ಇದು ಅನಾದಿಯೂ ಅವಿಚ್ಛಿನ್ನವೂ ಆದ ಸಂಬಂಧ. ಲೋಕದಲ್ಲಿ ಒಬ್ಬನು ಕುಂಟ, ಇನ್ನೊಬ್ಬನು ಕುರುಡ. ಉಭಯರ ಗುರಿಯು ಸಿದ್ಧವಾಗಲೆಂದು ಕುಂಟನು ಕುರುಡನ ಬೆನ್ನೇರಿ ಮುಂದೆ ಹೋಗುತ್ತಾನೆ. ಗುರಿಯನ್ನು ತಲುಪಿದಾಗ ಇಬ್ಬರೂ ಬೇರೆ ಬೇರೆಯಾಗುತ್ತಾರೆ. ಹೀಗೆ ಪ್ರಧಾನ ಪುರುಷರ ಸಂಯೋಗವಾಗಿದೆ. ಪ್ರಧಾನವು ತನ್ನ ವೈಭವವನ್ನು ತೋರಿಸಿಕೊಂಡದ್ದಾಗುವುದು. ಪುರುಷನು ಪ್ರಧಾನವನ್ನು ನೋಡಿ ಮುಗಿಸಿದ್ದಾಗುವುದು. ಆಗ ಉಭಯರೂ ಬೇರೆ ಬೇರೆಯಾಗುತ್ತಾರೆ. ಇದೇ ಮೋಕ್ಷ. ಪ್ರಕೃತಿ ಪುರುಷ ಸಂಯೋಗದಿಂದ ಜಗತ್ತಿನ ಸೃಷ್ಟಿಯಾಗಿದೆ.

**प्रकृतेर्महान्, ततोऽहङ्कारः तस्माद्गणश्च षोडशकः ।**
**तस्मादपि षोडशकात् पञ्चभ्यः पञ्च भूतानि ॥ २२ ॥**

ಪ್ರಕೃತಿಯಿಂದ ಮಹತ್ತು (ಬುದ್ಧಿ), ಅದರಿಂದ ಅಹಂಕಾರವೂ, ಅಹಂಕಾರದಿಂದ ಹದಿನಾರು ತತ್ತ್ವಗಳ ಸಮೂಹವೂ ಆ ಹದಿನಾರರಲ್ಲಿರುವ ಪಂಚತನ್ಮಾತ್ರಗಳಿಂದ ಪಂಚಮಹಾಭೂತಗಳೂ ಹುಟ್ಟುತ್ತವೆ.

ಮಹತ್, ಬುದ್ಧಿ, ಆಸುರಿ, ಮತಿ, ಖ್ಯಾತಿ, ಜ್ಞಾನ ಇವು ಪರ್ಯಾಯ ಶಬ್ದಗಳು. ಅಹಂಕಾರ, ಭೂತಾದಿ, ವೈಕೃತ, ತೈಜಸ, ಅಭಿಮಾನ ಇವು ಪರ್ಯಾಯ ಶಬ್ದಗಳು. ಅಹಂಕಾರದಿಂದ ಷೋಡಶ ಪದಾರ್ಥಗಳು ಹುಟ್ಟುತ್ತವಷ್ಟೇ, ಹೇಗೆಂದರೆ ಮೊದಲು ಪಂಚ ತನ್ಮಾತ್ರಗಳು, ಶಬ್ದ ತನ್ಮಾತ್ರ, ಸ್ಪರ್ಶತನ್ಮಾತ್ರ ಮುಂತಾದವುಗಳಿಂದ ಶ್ರೋತ್ರ, ತ್ವಕ್, ಚಕ್ಷು, ಜಿಹ್ವಾ, ಘ್ರಾಣ (ನಾಸಿಕಾ) ಎಂಬ ಪಂಚಜ್ಞಾನೇಂದ್ರಿಯಗಳು, ವಾಕ್, ಪಾಣಿ, ಪಾದ, ಪಾಯು, ಉಪಸ್ಥ (ಗುಹ್ಯೇಂದ್ರಿಯ) ಎಂಬ ಪಂಚಕರ್ಮೇಂದ್ರಿಯಗಳು. ಇವುಗಳೆಲ್ಲವೂ ಅಹಂಕಾರದಿಂದ ಹುಟ್ಟತಕ್ಕವು.

ಪಂಚತನ್ಮಾತ್ರೆಗಳಿಂದ ಪಂಚಮಹಾಭೂತಗಳು ಹುಟ್ಟುತ್ತವೆ. ಶಬ್ದತನ್ಮಾತ್ರೆಯಿಂದ ಆಕಾಶ, ಸ್ಪರ್ಶತನ್ಮಾತ್ರೆಯಿಂದ ವಾಯು, ರೂಪತನ್ಮಾತ್ರೆಯಿಂದ ತೇಜಸ್ಸು, ರಸತನ್ಮಾತ್ರೆಯಿಂದ ಜಲ, ಗಂಧತನ್ಮಾತ್ರೆಯಿಂದ ಪೃಥಿವೀ ಎಂಬ ಪಂಚಮಹಾಭೂತಗಳು ಹುಟ್ಟುತ್ತವೆ.

ಆಕಾಶದ ಗುಣ ಶಬ್ದ, ವಾಯುವಿನ ಗುಣ ಶಬ್ದ ಸ್ಪರ್ಶಗಳು, ತೇಜಸ್ಸಿನ ಗುಣ ಶಬ್ದ ಸ್ಪರ್ಶ ರೂಪಗಳು, ಜಲದ ಗುಣ ಶಬ್ದ ಸ್ಪರ್ಶ ರೂಪರಸಗಳು, ಪೃಥ್ವಿಯ ಗುಣ ಶಬ್ದಸ್ಪರ್ಶ ರೂಪ-ರಸ-ಗಂಧಗಳು.

ಈ ಪ್ರಕಾರವಾಗಿ ಅವ್ಯಕ್ತ, ಅದರಿಂದ ಹುಟ್ಟಿದ ವ್ಯಕ್ತ ಪದಾರ್ಥಗಳು ಸೇರಿ ಇಪ್ಪತ್ತನಾಲ್ಕು ತತ್ತ್ವಗಳಾದವು. ಪುರುಷನೂ ಸೇರಿ ಪಂಚವಿಂಶತಿ (ಇಪ್ಪತ್ತೈದು)

ತತ್ತ್ವಗಳಾದವು. ಅಸ್ತಿತ್ವವುಳ್ಳದ್ದು ತತ್ತ್ವವೆನಿಸುತ್ತದೆ. ಯಥಾರ್ಥವಾಗಿ ಇರತಕ್ಕದ್ದು ಎಂದರ್ಥ.

ಪ್ರಕೃತಿಯಿಂದ ಹುಟ್ಟಿದ ಮಹತ್ತಿನ ಲಕ್ಷಣವನ್ನು ಈಗ ಹೇಳಲಾಗುವುದು.

**अध्यवसायो बुद्धिधर्मो ज्ञानं विराग ऐश्वर्यम् ।**
**सात्त्विकमेतद्रूपं तामसमस्माद्विपर्यस्तम् ॥ २३ ॥**

ಅಧ್ಯವಸಾಯ, ಬುದ್ಧಿ, ಧರ್ಮ, ಜ್ಞಾನ, ವಿರಾಗ, ಐಶ್ವರ್ಯ – ಇದು ಸಾತ್ವಿಕರೂಪ. ಇದಕ್ಕೆ ವಿರುದ್ಧವಾದದ್ದು ತಾಮಸ. ಧರ್ಮವೆಂದರೆ ದಯೆ, ದಾನ, ಯಮ ನಿಯಮಗಳು. ಜ್ಞಾನವೆಂದರೆ ಅವಗಮ. ಈ ಜ್ಞಾನವು ಬಾಹ್ಯ, ಆಭ್ಯಂತರ ಎಂದು ಎರಡು ವಿಧ. ವೇದ, ವೇದಾಂಗಗಳು, ಪುರಾಣ, ನ್ಯಾಯ, ಮೀಮಾಂಸಾ, ಧರ್ಮಶಾಸ್ತ್ರಗಳು ಬಾಹ್ಯಜ್ಞಾನ ಆಭ್ಯಂತರವೆಂದರೆ ಪ್ರಕೃತಿಪುರುಷರ ಜ್ಞಾನ. ಪ್ರಕೃತಿಯೆಂದರೆ ಸತ್ವ ರಜಸ್ತಮೋಗುಣಗಳ ಸಾಮ್ಯಾವಸ್ಥೆ. ಪುರುಷನು ನಿರ್ಗುಣ, ವ್ಯಾಪಿ ಮತ್ತು ಚೇತನ. ಪ್ರಧಾನವು ಸ್ವಪ್ನದಂತೆ, ಇಂದ್ರಜಾಲದಂತೆ ಇದೆಯೆಂಬ ಜ್ಞಾನದಿಂದ ವೈರಾಗ್ಯವು ಪ್ರಾಪ್ತವಾಗುತ್ತದೆ. ಅಣಿಮಾ ಮಹಿಮಾದಿಗಳು ಐಶ್ವರ್ಯವೆನಿಸುತ್ತವೆ. ಸತ್ವಗುಣದಿಂದ ರಜಸ್ತಮೋಗುಣಗಳು ಯಾವಾಗ ಅಭಿಭೂತವಾಗುತ್ತವೋ ಆಗ ಪುರುಷನು ಧರ್ಮವೇ ಮೊದಲಾದ ಬುದ್ಧಿಗುಣಗಳನ್ನು ಪಡೆಯುತ್ತಾನೆ. ಧರ್ಮಕ್ಕೆ ವಿರುದ್ಧವಾದದ್ದು ಅಧರ್ಮ. ಅಜ್ಞಾನ ಅವೈರಾಗ್ಯ ಅನೈಶ್ವರ್ಯಗಳು ತಾಮಸಗುಣದಿಂದ ಉತ್ಪನ್ನವಾಗುತ್ತವೆ.

ಈಗ ಅಹಂಕಾರದ ಲಕ್ಷಣವನ್ನು ಹೇಳಲಾಗುವುದು.

**अभिमानोऽहङ्कारस्तस्माद्द्विविधः प्रवर्तते सर्गः ।**
**एकादशकश्च गणस्तन्मात्रः पञ्चकश्चैव ॥ २४ ॥**

ಅಹಂಕಾರವೆಂದರೆ ಅಭಿಮಾನ. ಇದರಿಂದ ಹನ್ನೊಂದು ವಿಧವಾದ ಇಂದ್ರಿಯಗಳ ಸೃಷ್ಟಿಯಾಗುತ್ತದೆ ಮತ್ತು ಪಂಚತನ್ಮಾತ್ರಗಳೂ ಹುಟ್ಟುತ್ತವೆ. ಹೀಗೆ ಎರಡು ವಿಧವಾದ ಸೃಷ್ಟಿಯು ಅಹಂಕಾರದಿಂದ ಉಂಟಾಗುತ್ತದೆ.

**सात्त्विक एकादशकः प्रवर्तते वैकृतादहङ्कारात् ।**
**भूतादेस्तन्मात्रः स तामसः, तैजसादुभयम् ॥ २५ ॥**

ಅಹಂಕಾರದಲ್ಲಿರುವ ರಜೋಗುಣ ತಮೋಗುಣಗಳು ಸತ್ವಗುಣದಿಂದ ಅಭಿಭೂತವಾದಾಗ ಆ ಸಾತ್ವಿಕ ಅಹಂಕಾರಕ್ಕೆ 'ವೈಕೃತ' ಎಂದು ಹೆಸರು. ಈ

ವೈಕೃತ ಅಹಂಕಾರದಿಂದ ಹನ್ನೊಂದು ಸಾತ್ವಿಕ ಇಂದ್ರಿಯಗಳು ಹುಟ್ಟುತ್ತವೆ. ತಾಮಸವಾದ 'ಭೂತಾದಿ' ಎಂಬ ಅಹಂಕಾರದಿಂದ ಪಂಚತನ್ಮಾತ್ರೆಗಳು ಹುಟ್ಟುತ್ತವೆ. ತಮೋಗುಣದಿಂದ ಸತ್ವ-ರಜೋಗುಣಗಳು ಅಭಿಭೂತವಾದಾಗ ಆ ಅಹಂಕಾರಕ್ಕೆ ಭೂತಾದಿ ಎಂದು ಸಂಜ್ಞೆ. ಅಹಂಕಾರವು ರಜೋಗುಣ ಪ್ರಧಾನವಾಗಿದ್ದರೆ ಅದಕ್ಕೆ 'ತೈಜಸ' ಎಂದು ಹೆಸರು. ಈ ತೈಜಸ ಅಹಂಕಾರವು ಮೇಲೆ ಹೇಳಿದ ವೈಕೃತ ಹಾಗೂ ಭೂತಾದಿ ಎಂಬ ಎರಡು ಬಗೆಯ ಸೃಷ್ಟಿಯಲ್ಲೂ ಸಹಾಯ ಮಾಡುತ್ತದೆ. ಅಂದರೆ ಏಕಾದಶ ಇಂದ್ರಿಯಗಳಲ್ಲೂ ಪಂಚತನ್ಮಾತ್ರೆಗಳಲ್ಲೂ ರಜೋಗುಣದ ಅಂಶ ಇದ್ದೇ ಇರುತ್ತದೆಂದರ್ಥ. ಎಲ್ಲ ಕಡೆಗಳಲ್ಲೂ ರಜೋಗುಣವು ಪ್ರೇರಕವಾಗಿರುತ್ತದೆ.

**बुद्धीन्द्रियाणि चक्षुःश्रोत्रघ्राणरसनस्पर्शनकानि ।**
**वाक्पाणिपादपायूपस्थान् कर्मेन्द्रियाण्याहुः ॥ २६ ॥**

ನೇತ್ರ, ಶ್ರೋತ್ರ, ಘ್ರಾಣ, ಜಿಹ್ವಾ, ಸ್ಪರ್ಶನಕ (ತ್ವಕ್) ಇವು ಜ್ಞಾನೇಂದ್ರಿಯಗಳು. ವಾಕ್, ಪಾಣಿ, ಪಾದ, ಪಾಯು (ಗುದ) ಉಪಸ್ಥ (ಗುಹ್ಯೇಂದ್ರಿಯ) ಇವು ಕರ್ಮೇಂದ್ರಿಯಗಳು. ಇವೆಲ್ಲವು ಸಾತ್ತ್ವಿಕ ಅಹಂಕಾರದಿಂದ ಹುಟ್ಟಿವೆ. ಪಂಚಜ್ಞಾನೇಂದ್ರಿಯಗಳು ರೂಪ, ಶಬ್ದಾದಿ ಪಂಚ ವಿಷಯಗಳನ್ನು ಕ್ರಮವಾಗಿ ಗ್ರಹಿಸುತ್ತವೆ. ವಾಗಿಂದ್ರಿಯವು ಮಾತನ್ನಾಡುತ್ತದೆ. ಪಾಣಿಯು ವಸ್ತುಗಳ ದಾನ ಆದಾನ ಮಾಡುತ್ತದೆ. ಪಾದಗಳು ನಡೆದಾಡುತ್ತವೆ. ಗುದವು ಮಲವಿಸರ್ಜನೆ ಮಾಡುತ್ತದೆ. ಗುಹ್ಯೇಂದ್ರಿಯವು (ಉಪಸ್ಥವು) ಸಂತಾನೋತ್ಪಾದನೆಯನ್ನೂ, ಆನಂದವನ್ನೂ ಉಂಟುಮಾಡುತ್ತದೆ.

**उभयात्मकमत्र मनः संकल्पकमिन्द्रियं च साधर्म्यात् ।**
**गुणपरिणामविशेषान्नानात्वं बाह्यभेदाश्च ॥ २७ ॥**

ಇವುಗಳಲ್ಲಿ ಮನಸ್ಸು ಉಭಯಾತ್ಮಕ. ಇದು ಜ್ಞಾನೇಂದ್ರಿಯವೂ ಹೌದು. ಕರ್ಮೇಂದ್ರಿಯವೂ ಹೌದು. ಇಂದ್ರಿಯಗಳೊಡನೆ ಹುಟ್ಟಿದ್ದರಿಂದ ಮನಸ್ಸೂ ಇಂದ್ರಿಯ. ಮನಸ್ಸು ಪ್ರೇರಕವಾದ್ದರಿಂದ ಕರ್ಮೇಂದ್ರಿಯವೂ ಹೌದು. ಈ ಹನ್ನೊಂದು ಇಂದ್ರಿಯಗಳೂ ಸಾತ್ವಿಕವಾದ ವೈಕೃತ ಅಹಂಕಾರದಿಂದ ಉತ್ಪನ್ನವಾಗಿವೆ. ಮನಸ್ಸಿನ ವ್ಯಾಪಾರ ಸಂಕಲ್ಪ. ಜ್ಞಾನೇಂದ್ರಿಯಗಳಿಗೆ ಶಬ್ದಾದಿ ವಿಷಯಗಳನ್ನು ಗ್ರಹಿಸುವುದು ವ್ಯಾಪಾರ. ಕರ್ಮೇಂದ್ರಿಯಗಳಿಗೆ ಮಾತಾಡುವುದು ಮೊದಲಾದದ್ದು ವ್ಯಾಪಾರ. ಗುಣಗಳ ಪರಿಣಾಮ ವಿಶೇಷದಿಂದ ಇಂದ್ರಿಯಗಳಿಗೆ ವಿಭಿನ್ನ ವ್ಯಾಪಾರಗಳುಂಟಾಗುತ್ತವೆ. ಈ

ಗುಣಪರಿಣಾಮ ವಿಶೇಷದಿಂದಲೇ ನಾನಾ ಇಂದ್ರಿಯಗಳೂ, ಅವುಗಳ ವ್ಯಾಪಾರಗಳೂ ಆಗಿರುತ್ತವೆ. ಈ ಭೇದಗಳು ಈಶ್ವರನಿಂದಾಗಲಿ ಬುದ್ಧಿಯಿಂದಾಗಲಿ ಅಥವಾ ಪುರುಷನಿಂದಾಗಲಿ ಆದವುಗಳಲ್ಲ. ಕೇವಲ ಗುಣಪರಿಣಾಮದಿಂದ ಆದವು. ಗೀತೆಯಲ್ಲಿ ಸಹ ''ಗುಣಾ ಗುಣೇಷು ವರ್ತಂತೇ'' ಎಂದು ಹೇಳಲಾಗಿದೆ.

**शब्दादिषु पञ्चानामालोचनमात्रमिष्यते वृत्तिः ।**
**वचनादानविहरणोत्सर्गानन्दाश्च पञ्चानाम् ॥ २८ ॥**

ಜ್ಞಾನೇಂದ್ರಿಯಗಳಿಗೆ ಶಬ್ದಾದಿ ವಿಷಯಗಳ ಜ್ಞಾನವನ್ನು ಪಡೆಯುವುದೇ ವ್ಯಾಪಾರ. ಪಂಚ ಕರ್ಮೇಂದ್ರಿಯಗಳಿಗೆ ವಚನ, ಆದಾನ, ಸಂಚಾರ, ವಿಸರ್ಜನೆ, ಆನಂದ ಪಡುವುದು ಇವೇ ವ್ಯಾಪಾರಗಳು.

**स्वालक्षण्यं वृत्तिस्त्रयस्य सैषा भवत्यसामान्या ।**
**सामान्यकरणवृत्तिः प्राणाद्या वायवः पञ्च ॥ २९ ॥**

ಬುದ್ಧಿ, ಅಹಂಕಾರ, ಮನಸ್ಸುಗಳಿಗೆ ಅವುಗಳ ಲಕ್ಷಣಗಳೇ ವ್ಯಾಪಾರಗಳು. ಬುದ್ಧಿಗೆ ನಿಶ್ಚಯವೂ ಅಹಂಕಾರಕ್ಕೆ ನಾನು ಎಂಬ ಅಭಿಮಾನವೂ, ಮನಸ್ಸಿಗೆ ಸಂಕಲ್ಪವೂ ಅಸಾಧಾರಣ ವ್ಯಾಪಾರಗಳು.

ಪ್ರಾಣಾದಿ ಪಂಚವಾಯುಗಳಿಗೆ ಸ್ಪಂದನ-ಚಲನ ಎಂಬುದು ಸಾಮಾನ್ಯ ವೃತ್ತಿಯಾಗಿದೆ. ಪ್ರಾಣವು ಬಾಯಿ ಮತ್ತು ಮೂಗುಗಳಲ್ಲಿ ಸಂಚರಿಸುತ್ತದೆ. ಅಪಾನವು ಗುದದಲ್ಲಿ ಚಲಿಸುತ್ತದೆ. ವ್ಯಾನವು ಸರ್ವಶರೀರದಲ್ಲಿಯೂ, ಉದಾನವು ಕಂಠ ಪ್ರದೇಶದಲ್ಲಿಯೂ, ಸಮಾನವು ನಾಭಿ ಪ್ರದೇಶದಲ್ಲಿಯೂ ಸ್ಪಂದಿಸುತ್ತದೆ. ಇವುಗಳಲ್ಲಿ ಪ್ರಾಣವು ಪಂಜರದಲ್ಲಿರುವ ಹಕ್ಕಿಯಂತಿದ್ದು ಇತರ ವಾಯುಗಳಿಗೆ ಸ್ಪಂದನವನ್ನುಂಟು ಮಾಡುತ್ತದೆ.

ಇಲ್ಲಿ ವೃತ್ತಿಯೆಂದರೆ ಜೀವನ ಎಂಬ ಇನ್ನೊಂದು ಅರ್ಥವುಂಟು. ಮೇಲೆ ಹೇಳಿದ ಮಹದಾದಿಗಳೆಲ್ಲಕ್ಕೂ ಕೂಡ ಪ್ರಾಣಾದಿ ಪಂಚವಾಯುಗಳು ಜೀವನ ಹೇತುಗಳೆಂದರ್ಥ. ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನಗಳೆಂಬ ಪಂಚವಾಯುಗಳು ಕೆಲಸ ಮಾಡುತ್ತಿದ್ದರೆ ಮಾತ್ರ ಮಹದಾದಿಗಳ ಜೀವನ ವ್ಯಾಪಾರವು ನಡೆಯುತ್ತಿರುತ್ತದೆ ಎಂದರ್ಥ.

ಮಹದಾದಿಗಳ ವ್ಯಾಪಾರಗಳು ಯಾವ ಕ್ರಮದಲ್ಲಿ ಪ್ರವರ್ತಿಸುತ್ತವೆ ಎಂಬುದನ್ನು ಈಗ ಹೇಳಲಾಗವುದು.

**युगपच्चतुष्टयस्य तु वृत्तिः क्रमशश्च तस्य निर्दिष्टा ।**
**दृष्टे तथाऽप्यदृष्टे त्रयस्य तत्पूर्विका वृत्तिः ॥ ३० ॥**

ಬಾಹ್ಯೇಂದ್ರಿಯ, ಮನಸ್ಸು, ಅಹಂಕಾರ, ಬುದ್ಧಿ ಎಂಬೀ ನಾಲ್ಕು ಕರಣಗಳ ವ್ಯಾಪಾರವು ದೃಷ್ಟ ವಸ್ತುವಿನ ವಿಷಯದಲ್ಲಿ ಏಕಕಾಲದಲ್ಲಿಯೂ, ಹಾಗೆಯೇ ಕ್ರಮಪೂರ್ವಕವಾಗಿಯೂ ನಡೆಯುತ್ತದೆ. ಅದೃಷ್ಟ ವಸ್ತುವಿನ ವಿಷಯದಲ್ಲಿ ಮನಸ್ಸು, ಅಹಂಕಾರ, ಬುದ್ಧಿ ಎಂಬ ಮೂರು ಕರಣಗಳ ವ್ಯಾಪಾರವು ಕ್ರಮಪೂರ್ವಕವಾಗಿ ನಡೆಯುತ್ತದೆ.

ದೃಷ್ಟವು ಹತ್ತಿರದಲ್ಲಿ, ದೂರದಲ್ಲಿ ಎಂದು ಎರಡು ವಿಧ. ಹತ್ತಿರದಲ್ಲಿ ಒಂದು ಹಸುವನ್ನು ನೋಡಿದಾಗ ಅದರ ರೂಪವನ್ನು ನೇತ್ರವು ಗ್ರಹಿಸುತ್ತದೆ. ಮನಸ್ಸು 'ಇದು ಹಸು' ಎಂದು ತಿಳಿಯುತ್ತದೆ. ಅಹಂಕಾರವು 'ನಾನು ಇದನ್ನು ನೋಡುತ್ತಿದ್ದೇನೆ' ಎಂಬ ಅಭಿಮಾನವನ್ನು ತಾಳುತ್ತದೆ. ಬುದ್ಧಿಯು ಈಗ ಏನು ಮಾಡಬೇಕೆಂಬುದನ್ನು ನಿಶ್ಚಯಿಸುತ್ತದೆ. ಇದೆಲ್ಲವೂ ಏಕಕಾಲದಲ್ಲಿ ನಡೆದುಹೋಗುತ್ತವೆ.

ದೂರದಲ್ಲಿ ದೃಷ್ಟವಾದ ವಸ್ತುವಿನ ವಿಷಯದಲ್ಲಿ ಈ ವ್ಯಾಪಾರವು ಕ್ರಮವಾಗಿ ನಡೆಯುತ್ತದೆ. ಆ ಹಸುವನ್ನೇ ದೂರದಲ್ಲಿ ನೋಡಿದಾಗ ಇದು ಹಸುವೋ ? ಪೊದೆಯೋ ? ಎಂದು ಮನಸ್ಸು ವಿಕಲ್ಪಿಸುತ್ತದೆ. ಹತ್ತಿರ ಹೋದಾಗ ಹಸುವಿನ ಕೊಂಬುಗಳು ಕಾಣಿಸುತ್ತವೆ. ಇನ್ನೂ ಹತ್ತಿರ ಹೋದಾಗ ಬುದ್ಧಿಯು 'ಇದು ಹಸು' ಎಂದು ನಿಶ್ಚಯಿಸುತ್ತದೆ. ಅಹಂಕಾರವು 'ನಾನು ಹಸುವನ್ನು ನೋಡುತ್ತಿದ್ದೇನೆ' ಎಂದು ಅಭಿಮಾನವನ್ನು ತಾಳುತ್ತದೆ. ಈ ವ್ಯಾಪಾರಗಳು ಕ್ರಮವಾಗಿ ನಡೆಯುತ್ತವೆ.

ಇನ್ನು ಅದೃಷ್ಟವಾದ ವಿಷಯಗಳ ಅನುಮಾನ ಸ್ಥಳದಲ್ಲಿ ಬಾಹ್ಯೇಂದ್ರಿಯಗಳ ವ್ಯಾಪಾರವಿಲ್ಲ. ಅಲ್ಲಿ ಮನೋ-ಬುದ್ಧಿ ಅಹಂಕಾರಗಳ ವ್ಯಾಪಾರವೇ ಮುಖ್ಯವಾದದ್ದು. ಧೂಮವನ್ನು ಕಂಡು ಪರ್ವತದಲ್ಲಿ ಅಗ್ನಿಯಿದೆಯೆಂದು ನಿಶ್ಚಯಿಸುವುದು ಅನುಮಾನ ಸ್ಥಳ. ಅಲ್ಲಿ ಧೂಮವನ್ನು ನೋಡಿದರೂ ಅಗ್ನಿಯನ್ನು ನೋಡುತ್ತಿಲ್ಲವಾದ್ದರಿಂದ ಅಂತಃಕರಣತ್ರಯದ ವ್ಯಾಪಾರವನ್ನು ಮಾತ್ರ ಗ್ರಹಿಸಲಾಗಿದೆ. ಧೂಮವನ್ನು ನೋಡಿ ಅಲ್ಲಿ ಅಗ್ನಿ ಇದೆಯೋ ? ಇಲ್ಲವೋ ? ಎಂಬ ಸಂದೇಹವುಂಟಾಗುತ್ತದೆ. ಇದು ಮನಸ್ಸಿನ ವ್ಯಾಪಾರ. ಅನಂತರ ಬುದ್ಧಿಯು 'ಅಲ್ಲಿ ಅಗ್ನಿ ಇದೆ' ಎಂದು ನಿಶ್ಚಯಿಸುತ್ತದೆ. 'ನಾನು ಅಗ್ನಿ ಇದೆಯೆಂಬುದನ್ನು ತಿಳಿದಿದ್ದೇನೆ' ಎಂಬುದು ಅಹಂಕಾರದ ವ್ಯಾಪಾರ.

**ಟಿಪ್ಪಣಿ:** ಗೌಡಪಾದೀಯ ಭಾಷ್ಯದಲ್ಲಿ 'ಅದೃಷ್ಟೇ' ಎಂಬುದಕ್ಕೆ ಅನಾಗತ ಮತ್ತು ಅತೀತ ಎಂದು ಅರ್ಥವನ್ನು ಬರೆದಿದೆ. ಅನಾಗತ = ಭವಿಷ್ಯತ್ತು.

ಅತೀತ = ಭೂತ. ಭೂತಾನುಮಾನ ಮತ್ತು ಭವಿಷ್ಯದನುಮಾನ ಎಂದು ಆಶಯವಿರಬಹುದು. ಇದು ಚಿಂತನೀಯ.

**स्वां स्वां प्रतिपद्यन्ते परस्पराकूतहेतुकां वृत्तिम् ।**
**पुरुषार्थ एव हेतुर्न केनचित्कार्यते करणम् ॥ ३१ ॥**

ಬುದ್ಧಿ, ಅಹಂಕಾರ, ಮನಸ್ಸುಗಳು ಪುರುಷನಿಗೋಸ್ಕರ ತಮ್ಮ ತಮ್ಮ ವ್ಯಾಪಾರಗಳನ್ನು ಸಂಭ್ರಮದಿಂದ ನಡೆಸುತ್ತವೆ. ಅಂತಃಕರಣವನ್ನು ಬೇರೆ ಯಾರೂ ಪ್ರೇರಿಸುವುದಿಲ್ಲ.

**करणं त्रयोदशविधं तदाहरणधारण प्रकाशकरम् ।**
**कार्यं च तस्य दशधाऽऽहार्यं धार्यं प्रकाश्यं च ॥ ३२ ॥**

ಮಹತ್ತು, ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು ಎಂದು ಕರಣಗಳು ಹದಿಮೂರು ವಿಧ. ಈ ಸಾಧನಗಳಿಂದಾಗುವ ಕ್ರಿಯೆಗಳು ಆಹರಣ, ಧಾರಣ, ಪ್ರಕಾಶನ ಮೊದಲಾದವು. ಈ ಕ್ರಿಯೆಗಳಿಂದಾಗುವ ಕಾರ್ಯವು ಆಹಾರ್ಯ, ಧಾರ್ಯ, ಪ್ರಕಾಶ್ಯ ಎಂದು ಮೂರು ವಿಧ. ಶಬ್ದ, ಸ್ಪರ್ಶ, ರೂಪ, ರಸ, ಗಂಧ : ಇವು ಪ್ರಕಾಶ್ಯಗಳು. ವಚನ, ಆದಾನ, ಸಂಚಾರ, ಉತ್ಸರ್ಗ, ಆನಂದ ಇವು ಕಾರ್ಯಗಳು ಮತ್ತು ಧಾರ್ಯಗಳು. ಕರ್ಮೇಂದ್ರಿಯಗಳು ಆಹರಣ, ಧಾರಣಗಳೆರಡನ್ನೂ ಮಾಡುತ್ತವೆ. ಬುದ್ಧೀಂದ್ರಿಯಗಳಿಂದ ಪ್ರಕಾಶಿತವಾದದ್ದನ್ನು ಕರ್ಮೇಂದ್ರಿಯಗಳು ಸ್ವೀಕರಿಸುತ್ತವೆ ಮತ್ತು ಧಾರಣ ಮಾಡುತ್ತವೆ. ಧಾರಣ = ಧರಿಸು, ಪೋಷಿಸು.

**अन्त:करणं त्रिविधं दशधा बाह्यं त्रयस्य विषयाख्यम् ।**
**साम्प्रतकालं बाह्यं त्रिकालमाभ्यन्तरं करणम् ॥ ३३ ॥**

ಅಂತಃಕರಣವು ಬುದ್ಧಿ (ಮಹತ್ತು), ಅಹಂಕಾರ, ಮನಸ್ಸು ಎಂದು ಮೂರು ವಿಧ. ಬಾಹ್ಯವಾದ ಇಂದ್ರಿಯಗಳು ಪಂಚಜ್ಞಾನೇಂದ್ರಿಯಗಳು, ಪಂಚ ಕರ್ಮೇಂದ್ರಿಯಗಳು ಎಂದು ಹತ್ತು ವಿಧ. ಇವುಗಳಲ್ಲಿ ಬಾಹ್ಯೇಂದ್ರಿಯಗಳು ವರ್ತಮಾನಕಾಲದ ವಿಷಯಗಳನ್ನು ಮಾತ್ರ ಗ್ರಹಿಸುತ್ತವೆ. ಅಂತಃಕರಣಗಳು ಭೂತ ಭವಿಷ್ಯತ್ ವರ್ತಮಾನ ವಿಷಯಗಳನ್ನೂ ಗ್ರಹಿಸುತ್ತವೆ.

**बुद्धीन्द्रियाणि तेषां पञ्च विशेषाविशेषविषयाणि ।**
**वाग्भवति शब्दविषया शेषाणि तु पञ्चविषयाणि ॥ ३४ ॥**

ಅವುಗಳಲ್ಲಿ ಐದು ಜ್ಞಾನೇಂದ್ರಿಯಗಳು ವಿಶೇಷವನ್ನೂ ಅವಿಶೇಷವನ್ನೂ ಗ್ರಹಿಸುತ್ತವೆ. ಕರ್ಮೇಂದ್ರಿಯಗಳಲ್ಲಿ ವಾಕ್ (ವಾಗಿಂದ್ರಿಯವು) ಶಬ್ದವನ್ನು ವಿಷಯವಾಗಿಟ್ಟುಕೊಂಡು ಶ್ಲೋಕಾದಿಗಳನ್ನು ಉಚ್ಚರಿಸುತ್ತದೆ. ಉಳಿದ ಪಾಣಿ, ಪಾದ, ಪಾಯು, ಉಪಸ್ಥಗಳಿಗೆ ಶಬ್ದಾದಿ ಪಂಚತನ್ಮಾತ್ರೆಗಳಿಂದ ಜನಿಸಿದ ಘಟಾದಿಗಳು ವಿಷಯಗಳಾಗುತ್ತವೆ. ಶಬ್ದ ಒಂದನ್ನು ಬಿಟ್ಟು ರೂಪ-ರಸಾದಿಗಳೂ ಸಹ ಪಂಚತನ್ಮಾತ್ರೆಗಳ ಮಿಶ್ರಣದಿಂದ ಜನಿಸಿವೆ. ವಿಶೇಷ = ಸ್ಥೂಲ ಶಬ್ದಾದಿಗಳು. ಅವಿಶೇಷ = ಸೂಕ್ಷ್ಮ ಶಬ್ದಾದಿಗಳು.

**सान्तःकरणा बुद्धिः सर्वं विषयमवगाहते यस्मात् ।**
**तस्मात् त्रिविधं करणं द्वारि द्वाराणि शेषाणि ॥ ३५ ॥**

ಅಹಂಕಾರ, ಮನಸ್ಸು, ಅಂತಃಕರಣಗಳಿಂದ ಕೂಡಿದ ಬುದ್ಧಿಯು ಸಕಲ ವಿಷಯಗಳನ್ನು ವ್ಯಾಪಿಸಿ ತಿಳಿದು ನಿಶ್ಚಯಿಸುತ್ತದೆ. ಆದ್ದರಿಂದ ಬುದ್ಧಿಯು ವಿಷಯಗಳ ಪ್ರವೇಶಕ್ಕೆ ಪ್ರಧಾನ ದ್ವಾರವಾಗಿದೆ. ಉಳಿದ ಬಾಹ್ಯೇಂದ್ರಿಯಗಳು ಪ್ರಧಾನ ದ್ವಾರಕ್ಕೆ ತಲುಪಿಸುವ ಅಪ್ರಧಾನ ದ್ವಾರಗಳು. ಅಂತಃಕರಣದಲ್ಲಿಯೂ ಅಹಂಕಾರ ಮನಸ್ಸುಗಳಿಗಿಂತ ಬುದ್ಧಿಯು ಪ್ರಧಾನವಾದುದು.

**एते प्रदीपकल्पाः परस्परविलक्षणा गुणविशेषाः ।**
**कृत्स्नं पुरुषस्यार्थं प्रकाश्य बुद्धौ प्रयच्छन्ति ॥ ३६ ॥**

ಏತೇ = ಹತ್ತು ಬಾಹ್ಯ ಇಂದ್ರಿಯಗಳೂ, ಮನಸ್ಸು, ಅಹಂಕಾರ ಇವು ಗುಣ ವಿಶೇಷಾಃ = ಗುಣತ್ರಯದ ವಿಕಾರಗಳಾಗಿದ್ದು, ಪರಸ್ಪರ ವಿಲಕ್ಷಣಾಃ = ಅನ್ಯೋನ್ಯ ವಿಲಕ್ಷಣವಾದವು. ಇವು ಪ್ರದೀಪಕಲ್ಪಾಃ = ಬಗೆ ಬಗೆಯ ದೀಪಗಳಂತೆ ಇವೆ. ಇವು ಪುರುಷನಿಗಾಗಿ ಸಮಸ್ತ ವಿಷಯಗಳನ್ನೂ ಪ್ರಕಾಶಗೊಳಿಸಿ, ಬುದ್ಧೌ = ಬುದ್ಧಿಗೆ, ಪ್ರಯಚ್ಛಂತಿ = ಅರ್ಪಿಸುತ್ತವೆ.

ಸಮಸ್ತ ಇಂದ್ರಿಯಗಳು ಪುರುಷನಾದ ಆತ್ಮನ ಕಾರ್ಯವನ್ನು ಮಾಡುತ್ತವೆ. ಇವು ಅವ್ಯಕ್ತದ ಕಾರ್ಯಗಳಾದ್ದರಿಂದ ಗುಣತ್ರಯದ ವಿಕಾರಗಳು. ಒಂದರ ಕಾರ್ಯವನ್ನು ಇನ್ನೊಂದು ಮಾಡುವುದಿಲ್ಲವಾದ್ದರಿಂದ ಅನ್ಯೋನ್ಯವಾಗಿ ಅಸದೃಶವಾದವು. ಇವು ತಮಗೆ ಗೋಚರಿಸಿದ ವಿಷಯಗಳನ್ನು ಸಾಧ್ಯವಾದಷ್ಟು ಪರಿಷ್ಕರಿಸಿ ಬುದ್ಧಿಗೆ ಅರ್ಪಿಸುತ್ತವೆ.

**सर्वं प्रत्युपभोगं यस्मात् पुरुषस्य साधयति बुद्धिः ।**
**सैव च विशिनष्टि पुनः प्रधानपुरुषान्तरं सूक्ष्मम् ॥ ३७ ॥**

ಪುರುಷನ ಸರ್ವವಿಧವಾದ ಉಪಭೋಗವನ್ನು ಬುದ್ಧಿಯು ಸಾಧಿಸಿ ಕೊಡುತ್ತದೆಯಾದ್ದರಿಂದ ಆ ಬುದ್ಧಿಯೇ ಪ್ರಧಾನ ಮತ್ತು ಪುರುಷರಿಗಿರುವ ಸೂಕ್ಷ್ಮವಾದ ವಿಷಯ ವಿಭಾಗವನ್ನು ಮಾಡುತ್ತದೆ.

ಅಂತಃಕರಣಸಹಿತವಾದ ಬುದ್ಧಿಯು ಸಕಲ ಸುಖ-ದುಃಖಾದಿ ಭೋಗವನ್ನು ಪುರುಷನಿಗೆ ಅರ್ಪಿಸುತ್ತದೆ. ಅದೇ ಪ್ರಧಾನ ಪುರುಷರಿಗಿರುವ ಸೂಕ್ಷ್ಮ ಭೇದವನ್ನೂ ತಿಳಿಸಿಕೊಡುತ್ತದೆ. ವಿಶೇಷವಾಗಿ ತಪಸನ್ನಾಚರಿಸದ ಜನರಿಗೆ ಪ್ರಧಾನ ಪುರುಷರಿಗಿರುವ ಭೇದವು ತಿಳಿಯುವುದಿಲ್ಲ. ತಪಶ್ಚರಣ ಮಾಡಿದ ಯೋಗಿಗಳಿಗೆ ಮಾತ್ರ ಈ ಭೇದವು ತಿಳಿಯುತ್ತದೆ. ಬುದ್ಧಿಯು ಮಾತ್ರ ಈ ಭೇದವನ್ನು ತಿಳಿಸಿಕೊಡುತ್ತದೆ. ಇವು ಪಂಚತನ್ಮಾತ್ರಗಳು, ಇವು ಬಾಹ್ಯೇಂದ್ರಿಯಗಳು, ಇವು ಪಂಚಮಹಾಭೂತಗಳು ಇವುಗಳಿಗೆ ಸಂಬಂಧಿಸದೇ ಅನ್ಯನಾಗಿರತಕ್ಕವನು ಪುರುಷ ಎಂಬ ವಿವರವನ್ನು ಬುದ್ಧಿಯು ಯೋಗಿಗಳಿಗೆ ಮಾತ್ರ ತಿಳಿಸಿಕೊಡುತ್ತದೆ. ಆದ್ದರಿಂದ ಅವ್ಯಕ್ತದ ವಿಕಾರಗಳಲ್ಲಿ ಬುದ್ಧಿಯೇ ಪ್ರಧಾನವಾದದ್ದು.

**तन्मात्राण्यविशेषाः तेभ्यो भूतानि पञ्च पञ्चभ्यः ।**
**एते स्मृता विशेषाः शान्ता घोराश्च मूढाश्च ॥ ३८ ॥**

ಶಬ್ದತನ್ಮಾತ್ರೆ ಮೊದಲಾದ ಐದು ಬಗೆಯ ತನ್ಮಾತ್ರೆಗಳು ಶಾಂತತ್ವಾದಿ ವಿಶೇಷಗಳಿಲ್ಲದವು. ಇವುಗಳಿಂದ ಪಂಚಮಹಾಭೂತಗಳು ಉತ್ಪನ್ನವಾಗುತ್ತವೆ. ಆಕಾಶಾದಿ ಪಂಚ ಮಹಾಭೂತಗಳು ಕ್ರಮವಾಗಿ ಉತ್ಪನ್ನವಾಗುತ್ತವೆ. ಇವುಗಳಲ್ಲಿ ಶಾಂತ, ಘೋರ, ಮೂಢ ಎಂಬ ಮೂರು ವಿಶೇಷಗಳುಂಟು.

**सूक्ष्मा मातापितृजाः सह प्रभूतैस्त्रिधा विशेषाः स्युः ।**
**सूक्ष्मास्तेषां नियता मातापितृजा निवर्तन्ते ॥ ३९ ॥**

ಇಪ್ಪತ್ತನಾಲ್ಕು ತತ್ತ್ವಗಳಲ್ಲಿ ಕೆಲವು ತತ್ತ್ವಗಳ ಮಿಲನದಿಂದ ಮೂರು ಬಗೆಯ ವಿಶೇಷಗಳು ಉತ್ಪನ್ನವಾಗುತ್ತವೆ. ಇವುಗಳಿಂದ ಪುರುಷನಿಗೆ ಉಪಭೋಗವುಂಟಾಗುತ್ತದೆ. ಅವುಗಳು ಯಾವುವೆಂದರೆ ಸೂಕ್ಷ್ಮಶರೀರ, ಮಾತಾಪಿತೃಜನ್ಯ ಶರೀರ ಮತ್ತು ಪಂಚಮಹಾಭೂತಗಳು. ಇವುಗಳಲ್ಲಿ ಸೂಕ್ಷ್ಮಶರೀರಗಳು ನಿಯತವಾಗಿ ಉಳಿದುಕೊಳ್ಳುತ್ತವೆ. ಮಾತಾಪಿತೃಜನ್ಯವಾದವು ನಾಶವಾಗುತ್ತವೆ.

ಸೂಕ್ಷ್ಮ ಶರೀರವು ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಶಬ್ದಾದಿ ಪಂಚತನ್ಮಾತ್ರಗಳು ಮತ್ತು ಮನೋಬುದ್ಧಿ, ಅಹಂಕಾರ ಎಂಬ ಹದಿನೆಂಟು ತತ್ತ್ವಗಳಿಂದ ಘಟಿತವಾಗಿದೆ. ಸ್ಥೂಲ ಶರೀರದಲ್ಲಿ ತಾಯಿ-ತಂದೆಗಳ ಅಂಶಗಳೂ ಸೇರಿಕೊಳ್ಳುತ್ತವೆ. ರೋಮ, ರಕ್ತ, ಮಾಂಸಗಳು ತಾಯಿಯಿಂದಲೂ, ನರ, ಮೂಳೆ, ಮಜ್ಜಾ ತಂದೆಯಿಂದ ಬಂದವು. ಉಳಿದವು ಪಂಚಮಹಾಭೂತಗಳು. ಇವೇ ಪ್ರಕೃತಿಯ ಮೂರು ವಿಶೇಷಗಳು.

**पूर्वोत्पन्नमसक्तं नियतं महदादिसूक्ष्मपर्यन्तम् ।**
**संसरति निरुपयोगं भावैरधिवासितं लिङ्गम् ॥ ४० ॥**

ಸೂಕ್ಷ್ಮ ಶರೀರವು ಮಹದಾದಿ ತತ್ತ್ವಗಳು ಹುಟ್ಟುವುದಕ್ಕೆ ಮೊದಲೇ ಉತ್ಪನ್ನವಾಗಿರುತ್ತದೆ. ಇದಕ್ಕೆ ಯಾವುದರಿಂದಲೂ ತಡೆ ಇರುವುದಿಲ್ಲ. ಇದಕ್ಕೆ ಅಪ್ರತಿಹತವಾದ ಗತಿಯಿರುತ್ತದೆ. ಇದು ನಿತ್ಯ ಮೋಕ್ಷವಾಗುವವರೆಗೂ ಸಂಸಾರದಲ್ಲಿರುತ್ತದೆ. ಇದು ಯಾವ ಭೋಗವನ್ನೂ ಅನುಭವಿಸತಕ್ಕದ್ದಲ್ಲ. ಆದರೆ ತಾಯಿ-ತಂದೆಗಳಿಂದ ಬಂದ ಬಾಹ್ಯಶರೀರದ ಸಂಬಂಧವಿದ್ದಾಗ ಸುಖದುಃಖಾದಿಗಳನ್ನು ಅನುಭವಿಸುತ್ತದೆ. ಈ ಸೂಕ್ಷ್ಮ ಶರೀರವು ಮಹತ್ತಿನಿಂದ ಹಿಡಿದು ಅಹಂಕಾರ, ಮನಸ್ಸು, ಪಂಚತನ್ಮಾತ್ರಗಳು ಇವುಗಳಿಂದ ಘಟಿತವಾಗಿ ಸಂಸಾರವನ್ನು ಅನುಭವಿಸುತ್ತದೆ. ಧರ್ಮವೇ ಮುಂತಾದ ಭಾವಗಳಿಂದ ಇದು ಸಂಸ್ಕಾರವನ್ನು ಹೊಂದುತ್ತದೆ. ಪ್ರಳಯ ಕಾಲದಲ್ಲಿ ಮಹದಾದಿಗಳೊಡನೆ ಪ್ರಧಾನದಲ್ಲಿ ಲೀನವಾಗುವುದರಿಂದ ಲಿಂಗವೆನಿಸುತ್ತದೆ. ಪ್ರಧಾನದಲ್ಲಿ ಸಹಜವಾದ ಅಜ್ಞಾನದಿಂದ ಬದ್ಧವಾಗಿ ಸಂಸಾರವನ್ನು ಅನುಭವಿಸಲು ಅಸಮರ್ಥವಾಗಿರುತ್ತದೆ. ಪುನಃ ಸೃಷ್ಟಿ ಕಾಲದಲ್ಲಿ ಸಂಸಾರವನ್ನು ಅನುಭವಿಸಲು ಪ್ರಧಾನದಿಂದ ನಿರ್ಗಮಿಸುತ್ತದೆ.

**चित्रं यथाश्रयमृते स्थाण्वादिभ्यो विना यथा छाया ।**
**तद्वद्विनाऽविशेषैर्न न तिष्ठति निराश्रयं लिङ्गम् ॥ ४१ ॥**

ಮಹತ್ತು ಅಹಂಕಾರ ಹನ್ನೊಂದು ಇಂದ್ರಿಯಗಳು ಸೇರಿ ಈ ಹದಿಮೂರು ತತ್ತ್ವಗಳು ಸೇರಿ ಏಕೆ ಸಂಸಾರವನ್ನು ಅನುಭವಿಸುವುದಿಲ್ಲ ? ಪಂಚತನ್ಮಾತ್ರಗಳು ಸೇರಿ ಸೂಕ್ಷ್ಮ ಶರೀರವನ್ನು ಕಲ್ಪಿಸುವುದೇಕೆ ? ಎಂಬ ಶಂಕೆಗೆ ಈಗ ಉತ್ತರವನ್ನು ಹೇಳಲಾಗುವುದು.

ಚಿತ್ರವು ಗೋಡೆ ಮುಂತಾದ ಆಶ್ರಯವಿಲ್ಲದೇ ಹೇಗೆ ಇರಲಾರದೋ, ಕಂಬ (ಸ್ಥಾಣು, ಪೊದೆ) ಮೊದಲಾದದ್ದು ಇಲ್ಲದೇ ನೆರಳು ಹೇಗೆ ಇರಲಾರದೋ

ಹಾಗೆಯೇ ಅವಿಶೇಷಗಳಾದ ಪಂಚತನ್ಮಾತ್ರೆಗಳಿಲ್ಲದೇ ಸೂಕ್ಷ್ಮ ಶರೀರವು ಇರಲಾರದು. ಇವು ಸೇರಿದಾಗ ಸೂಕ್ಷ್ಮ ಶರೀರವಾಗುತ್ತದೆ. 'ವಿನಾ ವಿಶೇಷೈಃ' ಎಂಬಲ್ಲಿ 'ಅವಿಶೇಷೈಃ' ಎಂದು ಪದಚ್ಛೇದ. ಪಂಚ ಮಹಾಭೂತಗಳಿಂದ ರಚಿತವಾದ ಸ್ಥೂಲ ಶರೀರ ಎಂದು ಅರ್ಥ, ಅವುಗಳಿಲ್ಲದೇ ಸೂಕ್ಷ್ಮ ಶರೀರವು ಇರಲಾರದು. ಹದಿಮೂರು ಬಗೆಯ ಸೂಕ್ಷ್ಮಗಳಿಗೆ ಪಂಚತನ್ಮಾತ್ರೆಗಳು ಆಶ್ರಯ. ಆದ್ದರಿಂದ ಹದಿನೆಂಟು ತತ್ತ್ವಗಳು ಸೇರಿ ಸೂಕ್ಷ್ಮ ಶರೀರ ಉಂಟಾಗಿದೆ.

**पुरुषार्थहेतुकमिदं निमित्तनैमित्तिकप्रसङ्गेन ।**
**प्रकृतेर्विभुत्वयोगात् नटवद्व्यवतिष्टते लिङ्गम् ॥ ४२ ॥**

ಈ ಸೂಕ್ಷ್ಮ ಶರೀರವು ಹೇಗೆ ಸಂಸಾರ ಬಂಧನವನ್ನು ಅನುಭವಿಸುತ್ತದೆ ? ಮತ್ತು ಯಾವ ಕಾರಣದಿಂದ ಎಂಬುದನ್ನೀಗ ಹೇಳಲಾಗುವುದು:

ಪುರುಷನಿಗೆ ಉಪಭೋಗವಾಗಲೆಂದು ಪ್ರಧಾನವು ಪ್ರವರ್ತಿಸುತ್ತದೆ. ಶಬ್ದ ಸ್ಪರ್ಶಾದಿಗಳ ಉಪಲಬ್ಧಿಯೇ (ಅನುಭವವೇ) ಪುರುಷನ ಉಪಭೋಗ. ಇದಕ್ಕಾಗಿ ಸೂಕ್ಷ್ಮ ಶರೀರವು ಸಂಸಾರದಲ್ಲಿ ಪ್ರವರ್ತಿಸುತ್ತದೆ ಮತ್ತು ಅನಾದಿಯಾದ ಧರ್ಮ ಅಧರ್ಮಾದಿ ನಿಮಿತ್ತಗಳಿಂದಲೂ ಸಂಸಾರದಲ್ಲಿ ಪ್ರವರ್ತಿಸುತ್ತದೆ. ಪ್ರಕೃತಿಯು (ಪ್ರಧಾನ) ಸರ್ವಕಾರ್ಯಗಳಲ್ಲಿ ಪ್ರಭುವಾದ್ದರಿಂದಲೂ, ರಾಜನು ತನ್ನ ರಾಷ್ಟ್ರದಲ್ಲಿ ಇಚ್ಛೆ ಬಂದಂತೆ ಹೇಗೆ ಪ್ರವರ್ತಿಸುವನೋ ಹಾಗೆ ಪ್ರಕೃತಿಯು (ಪ್ರಧಾನ) ತನಗೆ ತೋರಿದಂತೆ ಸಂಸಾರದಲ್ಲಿ ತೊಡಗುತ್ತದೆ. ಆದ್ದರಿಂದ ಲಿಂಗಶರೀರವು ಪಂಚತನ್ಮಾತ್ರೆಗಳಿಂದ ಸಹಿತವಾಗಿ ನಟನಂತೆ ಆಚರಿಸುತ್ತದೆ. ನಟನು ದೇವತೆಯ ಪಾತ್ರವನ್ನು ವಹಿಸಿ ಆಮೇಲೆ ಮನುಷ್ಯನಾಗಿ ವಿದೂಷಕನಾಗಿ ನಾನಾ ರೂಪಗಳನ್ನು ಧರಿಸಿ ನಟಿಸುತ್ತಾನೋ ಹಾಗೆ ಸೂಕ್ಷ್ಮ ಶರೀರವು ಧರ್ಮ ಅಧರ್ಮಾದಿ ನಿಮಿತ್ತಗಳ ವಶದಿಂದ ಸ್ತ್ರೀ, ಪುರುಷ, ಆನೆ ಅಥವಾ ಇನ್ನಾವುದೋ ಪಕ್ಷಿಯೋ ಆಗಿ ಸ್ಥೂಲ ಶರೀರದೊಡನೆ ಸಂಸಾರವೆಂಬ ರಂಗಸ್ಥಳಕ್ಕೆ ಬರುತ್ತದೆ.

**सांसिद्धिकाश्च भावा: प्राकृतिका वैकृतिकाश्च धर्माद्या: ।**
**दृष्टा: करणाश्रयिण: कार्याश्रयिणश्च कललाद्या: ॥ ४३ ॥**

ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ ಇತ್ಯಾದಿ ಭಾವಗಳು ಸಾಂಸಿದ್ಧಿಕ, ಪ್ರಾಕೃತಿಕ, ವೈಕೃತಿಕ ಎಂದು ಮೂರು ವಿಧ. ಇವು ಇಂದ್ರಿಯಗಳನ್ನೂ ದೇಹವನ್ನೂ ಆಶ್ರಯಿಸಿಕೊಂಡಿರುತ್ತವೆ. ಕಪಿಲ ಮಹರ್ಷಿಗೆ ಹುಟ್ಟುವಾಗಲೇ

ಜ್ಞಾನಾದಿಗಳು ಸಿದ್ಧವಾಗಿ ಬಂದಿದ್ದವು. ಆದ್ದರಿಂದ ಇವು ಸಾಂಸಿದ್ಧಿಕಗಳು, ಸನಕ ಸನಂದನಾದಿಗಳಿಗೆ ಹದಿನಾರು ವರ್ಷ ಪ್ರಾಯವಾದಾಗ ಪ್ರಕೃತಿವಶದಿಂದ ಬಂದವು. ಆದ್ದರಿಂದ ಇವು ಪ್ರಾಕೃತಿಕಗಳು. ನಮ್ಮಂತಹ ಕೆಲವರಿಗೆ ಆಚಾರ್ಯೋಪದೇಶದಿಂದ ಜ್ಞಾನಾದಿಗಳು ಉತ್ಪನ್ನವಾಗುತ್ತವೆ. ಆಚಾರ್ಯ ಮೂರ್ತಿಯೇ ವಿಕೃತಿ. ಆದ್ದರಿಂದ ಇವು ವೈಕೃತಿಕಗಳೆನಿಸುತ್ತವೆ. ಇವುಗಳಿಂದ ಸಂಸ್ಕಾರ ಹೊಂದಿದ ಲಿಂಗಶರೀರವು ಸಂಸಾರವನ್ನು ಅನುಭವಿಸುತ್ತದೆ. ಮೇಲೆ ಹೇಳಿದ ನಾಲ್ಕು ಭಾವಗಳು ಸಾತ್ವಿಕಗಳು. ಇವುಗಳಿಗೆ ವಿರುದ್ಧವಾದ ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಇವು ತಾಮಸಗಳು. ಈ ಎಂಟು ಭಾವಗಳು ಬುದ್ಧಿಯನ್ನು ಆಶ್ರಯಿಸಿ ಇರುತ್ತವೆ. ಕಲಲಾದಿಗಳು ದೇಹವನ್ನಾಶ್ರಯಿಸಿರುತ್ತವೆ. ಮಾತಾಪಿತೃಜನ್ಯಗಳಾದ ಶುಕ್ರಶೋಣಿತ ಮಿಶ್ರಣಾದಿಗಳು, ಬಾಲ್ಯಾದಿ ಅವಸ್ಥೆಗಳು ದೇಹವನ್ನು ಆಶ್ರಯಿಸಿ ಇರುತ್ತವೆ.

**धर्मेण गमनमूर्ध्वं गमनमधस्ताद् भवत्यधर्मेण ।**
**ज्ञानेन चापवर्गो विपर्ययादिष्यते बन्धः ॥ ४४ ॥**

ಈ ಭಾವಗಳ ಫಲವನ್ನು ಹೇಳಲಾಗುವುದು, ಧರ್ಮದಿಂದ ಮನುಷ್ಯನು ಮೇಲಕ್ಕೆ ಏರುವನು. ಅಧರ್ಮದಿಂದ ಕೆಳಕ್ಕೆ ಇಳಿಯುವನು. ಜ್ಞಾನದಿಂದ ಮೋಕ್ಷವನ್ನು ಪಡೆಯುವನು. ಜ್ಞಾನ ವಿರೋಧಿಯಾದ ಅಜ್ಞಾನದಿಂದ ಸಂಸಾರರೂಪವಾದ ಬಂಧವಾಗುವುದು. ಈ ಬಂಧವು ನೈಮಿತ್ತಿಕ, ಪ್ರಾಕೃತಿಕ, ವೈಕಾರಿಕ, ದಾಕ್ಷಣಿಕ ಎಂದು ನಾಲ್ಕು ವಿಧ. ಇದನ್ನು ಮುಂದೆ ವಿವರಿಸ ಲಾಗುವುದು.

**वैराग्यात् प्रकृतिलयः संसारो भवति राजसाद्रागात् ।**
**ऐश्वर्यादविघातो विपर्ययात् तद्विपर्यासः ॥ ४५ ॥**

ಕೇವಲ ವೈರಾಗ್ಯದಿಂದ ಪ್ರಕೃತಿಯಲ್ಲಿ ಲಯವಾಗುತ್ತದೆ. ಒಬ್ಬನಿಗೆ ಜ್ಞಾನವಿರುವುದಿಲ್ಲ. ಕೇವಲ ವೈರಾಗ್ಯವಿರುತ್ತದೆ. ಅವನು ಪ್ರಧಾನ, ಅಹಂಕಾರ, ಬುದ್ಧಿ, ಶಬ್ದತನ್ಮಾತ್ರಗಳಲ್ಲಿ ಲಯ ಹೊಂದುತ್ತಾನೆ (ಲೀನನಾಗುತ್ತಾನೆ). ಅವನಿಗೆ ಮೋಕ್ಷವಾಗುವುದಿಲ್ಲ. ರಾಜಸವಾದ ಅಭಿಮಾನದಿಂದ ಸಂಸಾರವನ್ನು ಅನುಭವಿಸುತ್ತಾನೆ. ಅಣಿಮಾದಿ ಸಿದ್ಧಿಗಳೆಂಬ ಐಶ್ವರ್ಯದಿಂದ ಅವನು ಪಡೆಯುವ ಬ್ರಹ್ಮಾದಿ ಲೋಕಗಳಲ್ಲಿ ಈ ಸಿದ್ಧಿಗಳಿಗೆ ವಿಘಾತವಾಗುವುದಿಲ್ಲ, ಅವು ಇದ್ದೇ ಇರುತ್ತವೆ. ಅಷ್ಟಸಿದ್ಧಿಯನ್ನು ಪಡೆಯದಿದ್ದರೆ ಪುನರ್ಜನ್ಮದಲ್ಲಿ ಅವನ ಇಚ್ಛೆಗೆ ವಿಘಾತವಾಗುತ್ತಲೇ ಇರುತ್ತದೆ.

**एष प्रत्ययसर्गो विपर्ययाशक्तितुष्टिसिद्ध्याख्यः ।**
**गुणवैषम्यविमर्देन तस्य भेदास्तु पञ्चाशत् ॥ ४६ ॥**

ಈ ಪ್ರತ್ಯಯ ಸರ್ಗವು ವಿಪರ್ಯಯ, ಅಶಕ್ತಿ, ತುಷ್ಟಿ, ಸಿದ್ಧಿ ಎಂದು ನಾಲ್ಕು ವಿಧ. ಈ ನಾಲ್ಕು ವಿಧವಾದ ಪ್ರತ್ಯಯ ಸರ್ಗವು ಗುಣತ್ರಯದ ವೈಷಮ್ಯ, ವಿಮರ್ದಗಳಿಂದಾಗಿ ಮತ್ತೆ ಐವತ್ತು ಭೇದಗಳಾಗುತ್ತವೆ.

**पञ्च विपर्ययभेदा भवन्त्यशक्तिश्च करणवैकल्यात् ।**
**अष्टाविंशतिभेदा तुष्टिर्नवधाऽष्टधा सिद्धिः ॥ ४७ ॥**

ಅಜ್ಞಾನದಿಂದ ಐದು ಭೇದಗಳಾಗುತ್ತವೆ. ಇಂದ್ರಿಯ ದೋಷದಿಂದ (ಇಂದ್ರಿಯ ವೈಕಲ್ಯದಿಂದ) ಉಂಟಾಗುವ ಅಶಕ್ತಿಯು ಇಪ್ಪತ್ತೆಂಟು ವಿಧ, ತುಷ್ಟಿಯು ಒಂಬತ್ತು ಬಗೆ, ಸಿದ್ಧಿಯು ಎಂಟು ವಿಧ.

**भेदस्तमसोऽष्टविधो मोहस्य च, दशविधो महामोहः ।**
**तामिस्रोऽष्टादशधा, तथा भवत्यन्धतामिस्रः ॥ ४८ ॥**

ತಮೋಗುಣದ ಭೇದಗಳು ಎಂಟು ವಿಧ. ಅಂತೆಯೇ ಮೋಹದ ಭೇದಗಳು ಎಂಟು ವಿಧ. ಮಹಾಮೋಹವು ಹತ್ತು ವಿಧ. ತಾಮಿಸ್ರವು ಹದಿನೆಂಟು ವಿಧ. ಅಂಧತಾಮಿಸ್ರವೂ ಹದಿನೆಂಟು ವಿಧ.

**एकादशेन्द्रियवधाः सह बुद्धिवधैरशक्तिरुद्दिष्टा ।**
**सप्तदश वधा बुद्धेर्विपर्ययात् तुष्टिसिद्धीनाम् ॥ ४९ ॥**

ಬುದ್ಧಿವಧವೂ ಸೇರಿ (ವಧ = ವೈಕಲ್ಯ) ಹನ್ನೊಂದು ಇಂದ್ರಿಯಗಳ ವಧೆಗೆ ಅಶಕ್ತಿಯೆಂದು ಹೆಸರು. ತುಷ್ಟಿ ಮತ್ತು ಸಿದ್ಧಿಗಳ ವಿಪರ್ಯಯಗಳಿಂದ ಬುದ್ಧಿಗೆ ಹದಿನೇಳು ಬಗೆಯ ವಧಗಳು ಸಂಭವಿಸುತ್ತವೆ.

**ಟಿಪ್ಪಣಿ:** ಸರ್ಗವು (ಸೃಷ್ಟಿ) ನಿಮಿತ್ತ-ನೈಮಿತ್ತಿಕ ಮತ್ತು ಪ್ರತ್ಯಯಸರ್ಗ ಎಂದು ಎರಡು ವಿಧ. ಪಂಚತನ್ಮಾತ್ರೆಗಳು, ಹತ್ತು ಇಂದ್ರಿಯಗಳು ಮತ್ತು ಮನಸ್ಸು ಎಂದು ಇವು ಹದಿನಾರು ನಿಮಿತ್ತ-ನೈಮಿತ್ತಿಕ ಸರ್ಗಗಳೆನಿಸುತ್ತವೆ. ಪ್ರತ್ಯಯ ಎಂದರೆ ಬುದ್ಧಿ. ಅದು ಅಹಂಕಾರದಿಂದ ಸಂಯುಕ್ತವಾದಾಗ ಜನಿಸುವ ಸರ್ಗವು ಪ್ರತ್ಯಯ ಸರ್ಗವೆನಿಸುತ್ತದೆ. ವಿಪರ್ಯಯ (ಅಜ್ಞಾನ) ಅಶಕ್ತಿ, ತುಷ್ಟಿ, ಸಿದ್ಧಿ ಎಂದು ಪ್ರತ್ಯಯ ಸರ್ಗವು ನಾಲ್ಕು ವಿಧ. ಇವುಗಳ ವಿವರಣೆ ಮುಂದಿನ ಕಾರಿಕೆಗಳಲ್ಲಿ ಬಂದಿದೆ. ಮುಖ್ಯವಾಗಿ ಬುದ್ಧಿ ಕಲ್ಪಿತವಾದ ಸೃಷ್ಟಿಯೇ ಪ್ರತ್ಯಯ

ಸರ್ಗವೆನಿಸುತ್ತದೆ. ಸಂಶಯ, ಅಜ್ಞಾನ, ಉಪೇಕ್ಷೆ ನಿರ್ಣಯ – ಈ ನಾಲ್ಕು ಪ್ರತ್ಯಯ ಸರ್ಗದ ಭೇದಗಳು. ಇವುಗಳ ಒಳಭೇದಗಳ ವಿವರಣೆ ಓದುಗರಿಗೆ ಅನಾವಶ್ಯಕವೆಂದು ಕೈಬಿಡಲಾಗಿದೆ.

**आध्यात्मिकाश्चतस्रः प्रकृत्युपादानकालभाग्याख्याः ।**
**बाह्या विषयोपरमात् पञ्च, नव तुष्टयोऽभिहिताः ॥ ५० ॥**

ಪ್ರಕೃತಿ, ಉಪಾದಾನ, ಕಾಲ, ಭಾಗ್ಯ ಎಂಬ ಆಧ್ಯಾತ್ಮಿಕ ತುಷ್ಟಿಗಳು ನಾಲ್ಕು ವಿಧ. ಪಂಚ ವಿಷಯಗಳು ಇಲ್ಲದೇ ಉಂಟಾಗುವ ತುಷ್ಟಿಗಳು ಐದು. ಹೀಗೆ ಒಂಬತ್ತು ಬಗೆಯ ತುಷ್ಟಿಗಳಿವೆ.

**ऊहः शब्दोऽध्ययनं दुःखविघातास्त्रयः सुहृत्प्राप्तिः ।**
**दानं च सिद्धयोऽष्टौ सिद्धेः पूर्वोऽङ्कुशस्त्रिविधः ॥ ५१ ॥**

ಪುರುಷಾರ್ಥ ಸಿದ್ಧಿಗೆ ಸಂಬಂಧಿಸಿದ ವಿಚಾರಗಳು ಇವು – ಊಹ, ಶಬ್ದ, ಅಧ್ಯಯನ ಮೂರು ಬಗೆಯ ದುಃಖ ವಿಘಾತಗಳು, ಮಿತ್ರಪ್ರಾಪ್ತಿ, ದಾನ ಇವು ಎಂಟು ಸಿದ್ಧಿಗಳು. ಸಿದ್ಧಿಗೆ ಮೊದಲು ಮೂರು ಬಗೆಯ ಅಂಕುಶಗಳುಂಟು.

ಊಹ = ಸತ್ಯ ಯಾವುದು ? ಮೋಕ್ಷವೆಂದರೇನು ? ಏನನ್ನು ಮಾಡಿ ನಾನು ಕೃತಾರ್ಥನಾದೇನು ? ಎಂದು ಚಿಂತಿಸುವುದು ಊಹೆ. ಇದರಿಂದ ಪ್ರಧಾನ, ಪುರುಷ, ಬುದ್ಧಿ, ಅಹಂಕಾರ ಮುಂತಾದವುಗಳ ಜ್ಞಾನವು ಹುಟ್ಟುತ್ತದೆ. ಇದೇ ಶಬ್ದ ಎಂಬ ಎರಡನೆಯ ಸಿದ್ಧಿ. ಅಧ್ಯಯನ = ವೇದಾದಿ ಶಾಸ್ತ್ರಗಳ ಅಧ್ಯಯನದಿಂದ ಪಂಚವಿಂಶತಿ ತತ್ತ್ವಗಳ ಜ್ಞಾನವುಂಟಾಗತ್ತದೆ. ಅದರಿಂದ ಮೋಕ್ಷ. ಇದು ಮೂರನೆಯ ಸಿದ್ಧಿ. ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಎಂಬ ದುಃಖತ್ರಯದ ನಾಶಕ್ಕಾಗಿ ಶಿಷ್ಯನು ಗುರುವಿನ ಬಳಿಗೆ ಹೋಗಿ ಉಪದೇಶವನ್ನು ಪಡೆದು ಮೋಕ್ಷವನ್ನೈದುತ್ತಾನೆ, ಇದು ನಾಲ್ಕನೆಯ ಸಿದ್ಧಿ. ದುಃಖತ್ರಯ ವಿಘಾತಗಳಿಂದ ಮೂರು ಸಿದ್ಧಿಗಳಾದವೆಂದು ತಿಳಿಯಬೇಕು. ಹಿಂದೆ ಹೇಳಿದ ಊಹಾದಿಗಳು ಸೇರಿ ಆರು ಸಿದ್ಧಿಗಳಾದವು.

ಸ್ನೇಹಿತನ ನೆರವಿನಿಂದ ಜ್ಞಾನವನ್ನು ಪಡೆದು ಮೋಕ್ಷವನ್ನೈದುವುದು ಏಳನೆಯ ಸಿದ್ಧಿ. ಜ್ಞಾನಿಗಳಿಗೆ ಬೇಕಾದ ಆಹಾರ ವಸ್ತ್ರಾದಿಗಳನ್ನು ದಾನಮಾಡಿ ಅವರಿಂದ ಜ್ಞಾನವನ್ನು ಪಡೆದು ಮೋಕ್ಷವನ್ನೈದುವುದು ಎಂಟನೆಯ ಸಿದ್ಧಿ. ಹೀಗೆ ಎಂಟು ಬಗೆಯಾದ ಮೋಕ್ಷ ಸಿದ್ಧಿಗಳುಂಟು. ಇವುಗಳಿಗೆ ಶಾಸ್ತ್ರಾಂತರದಲ್ಲಿ ತಾರ, ಸುತಾರ, ತಾರತಾರ, ಪ್ರಮೋದ, ಪ್ರಮುದಿತ, ಪ್ರಮೋದಮಾನ, ರಮ್ಯಕ,

ಸದಾಪ್ರಮುದಿತ ಎಂಬ ಹೆಸರುಗಳಿವೆ. ಅಜ್ಞಾನ, ಅಶಕ್ತತೆ, ಉಪೇಕ್ಷೆ ಇವು ಮೂರು ಸಿದ್ಧಿಯನ್ನು ತಡೆಯುವ ಅಂಕುಶಗಳು.

**न विना भावैर्लिङ्गं न लिङ्गेन भावनिर्वृत्तिः ।**
**लिङ्गाख्यो भावाख्यस्तस्माद् द्विविधः प्रवर्ततेः सर्गः ॥ ५२ ॥**

ಧರ್ಮ ಮುಂತಾದ ಎಂಟು ಭಾವಗಳಿಂದ ಲಿಂಗಶರೀರವು ಕೂಡಿಕೊಂಡಿರುತ್ತದೆಂದು ಹಿಂದೆ ಹೇಳಿದ್ದಾಗಿದೆ. ಭಾವಗಳಿಲ್ಲದೇ ಲಿಂಗಶರೀರವಿಲ್ಲ. ಲಿಂಗಶರೀರವಿಲ್ಲದೇ ಭಾವಗಳ ನಿಷ್ಪತ್ತಿಯೇ ಆಗುವುದಿಲ್ಲ. ಆದ್ದರಿಂದ ಲಿಂಗ, ಭಾವ ಎಂಬ ಎರಡು ವಿಧವಾದ ಸೃಷ್ಟಿಯುಂಟು.

**अष्टविकल्पो दैवस्तैर्यग्योनयश्च पञ्चधा भवति ।**
**मानुषकश्चैकविधः समासतोऽयं त्रिधा सर्गः ॥ ५३ ॥**

ಈಗ ಭೌತಿಕ ಸರ್ಗವನ್ನು ಹೇಳಲಾಗುತ್ತದೆ. ದೈವ ಸರ್ಗವು ಎಂಟು ವಿಕಲ್ಪ (ಒಳಭೇದ) ಗಳಿಂದ ಕೂಡಿದೆ. ತಿರ್ಯಗ್ಯೋನಿಗಳ ಸೃಷ್ಟಿಯು ಐದು ಬಗೆಯಾಗಿದೆ. ಮಾನವ ಸೃಷ್ಟಿಯು ಒಂದೇ ವಿಧ. ಹೀಗೆ ದೈವ, ತಿರ್ಯಗ್‌ಜಂತು ಸಂಬಂಧಿ, ಮಾನುಷ ಎಂದು ಸಂಕ್ಷೇಪವಾಗಿ ಸರ್ಗವು ಮೂರು ವಿಧವಾಗಿದೆ.

ದೈವ = ಬ್ರಾಹ್ಮ, ಪ್ರಾಜಾಪತ್ಯ, ಸಾಮ್ಯ, ಐಂದ್ರ, ಗಾಂಧರ್ವ, ಯಾಕ್ಷ, ರಾಕ್ಷಸ, ಪೈಶಾಚ ಎಂದು ಎಂಟು ವಿಧ.

ತಿರ್ಯಗ್ ಜಂತು = ಪಶು (ಹಸು ಮೊದಲಾದ ಗ್ರಾಮ್ಯ ಜಂತು) ಮೃಗ = ಹುಲಿ ಮೊದಲಾದ ಕಾಡು ಪ್ರಾಣಿ, ಸರೀಸೃಪ (ಹಾವು ಹಲ್ಲಿ ಮೊದಲಾದ ಹರಿದಾಡುವ ಜಂತುಗಳು) ಪಕ್ಷಿ ಮತ್ತು ಸ್ಥಾವರ (ಮರ ಕಲ್ಲು ಮೊದಲಾದವು).

**ऊर्ध्वं सत्त्वविशालस्तमोविशालश्च मूलतः सर्गः ।**
**मध्ये रजोविशालो ब्रह्मादिस्तम्बपर्यन्तः ॥ ५४ ॥**

ಸತ್ವ, ರಜಸ್ತಮೋ ಗುಣಗಳು ಮೂರು ಲೋಕಗಳನ್ನೂ ವ್ಯಾಪಿಸಿವೆ. ಅವುಗಳಲ್ಲಿ ಮೇಲ್ಗಡೆಯ ದೈವ ಸೃಷ್ಟಿಯು ಸತ್ವಗುಣ ಪ್ರಧಾನವಾದದ್ದು. ಮಧ್ಯದ ಮನುಷ್ಯ ಸೃಷ್ಟಿಯು ರಜೋಗುಣ ಪ್ರಧಾನವಾದದ್ದು. ಕೆಳಗಿನ ತಿರ್ಯಗ್ ಜಂತು ಸೃಷ್ಟಿಯು ತಮೋಗುಣ ಪ್ರಧಾನವಾದದ್ದು. ಹೀಗೆ ಬ್ರಹ್ಮಾದಿಸ್ತಂಬ ಪರ್ಯಂತವಾದ ಸೃಷ್ಟಿಯು ಗುಣತ್ರಯದಿಂದ ಕೂಡಿರುತ್ತದೆ.

**तत्र जरामरणकृतं दु:खं प्राप्नोति चेतनः पुरुषः ।**
**लिङ्गस्याविनिवृत्तेः, तस्माद् दुःखं स्वभावेन ॥ ५५ ॥**

ಈ ಲೋಕಗಳಲ್ಲಿ ಚೈತನ್ಯಶಾಲಿಯಾದ ಪುರುಷನು (ಆತ್ಮನು) ಮುಪ್ಪು ಸಾವುಗಳಿಂದ ಉಂಟಾಗುವ ದುಃಖವನ್ನು ಪಡೆಯುತ್ತಾನೆ. ಲಿಂಗಶರೀರವು ಹೋಗುವವರೆಗೂ ದುಃಖವು ಇದ್ದೇ ಇರುತ್ತದೆ. ಆದ್ದರಿಂದ ಸ್ವಾಭಾವಿಕವಾಗಿ ದುಃಖವು ಇರುತ್ತದೆ.

ಪಂಚವಿಂಶತಿ ತತ್ತ್ವಗಳ ಜ್ಞಾನವಾಗುವವರೆಗೂ ಇದು ಸಹಜವೆಂದು ತಿಳಿಯಬೇಕು. ಈ ದುಃಖವು ಪುರುಷನಿಗೆ ಹೊರತು ಪ್ರಕೃತಿ, ಬುದ್ಧಿ, ಅಹಂಕಾರ, ಇಂದ್ರಿಯ ಮೊದಲಾದವುಗಳಿಗೆ ಎಂದಿಗೂ ದುಃಖವಿಲ್ಲ.

ದೇವಮಾನುಷಾದಿ ಜನ್ಮಗಳಲ್ಲಿ ಚೇತನನಾದ ಪುರುಷನು ಮುಪ್ಪು ಮರಣಗಳಿಂದಾಗುವ ದುಃಖವನ್ನು ಅನುಭವಿಸುತ್ತಾನೆ. ಏಕೆಂದರೆ ಲಿಂಗಶರೀರವು ಲಯವಾಗಿರುವುದಿಲ್ಲ. ಆದ್ದರಿಂದ ಸ್ವಾಭಾವಿಕವಾಗಿ ದುಃಖವು ಇದ್ದೇ ಇರುತ್ತದೆ.

**ವಿವರಣೆ:** ಎಂತಹ ಪುಣ್ಯಶಾಲಿಗೂ ಮುಪ್ಪು, ಸಾವುಗಳಿಂದಾಗುವ ದುಃಖವು ತಪ್ಪುವುದಿಲ್ಲ. ಲಿಂಗಶರೀರವಿರುವವರೆಗೂ ಇದು ತಪ್ಪುವುದಿಲ್ಲ. ಪ್ರಕೃತಿಗೆ ಚೈತನ್ಯವಿಲ್ಲವಾದ್ದರಿಂದ ಅದಕ್ಕೆ ದುಃಖದ ಅನುಭವವಿರುವುದಿಲ್ಲ. ದುಃಖವು ಪ್ರಕೃತಿಗೆ ಸಂಬಂಧಿಸಿದ್ದಾದರೂ ಪುರುಷನು ತಾನೇ ಅದು ಎಂಬ ಅಭ್ಯಾಸವನ್ನು ಹೊಂದಿರುವುದರಿಂದ ತನಗೆ ಇಲ್ಲದಿರುವ ದುಃಖವನ್ನು ಅನುಭವಿಸುತ್ತಾನೆ.

**इत्येष प्रकृतिकृतो महदादिविशेषभूतपर्यन्तः ।**
**प्रतिपुरुषविमोक्षार्थं स्वार्थ इव परार्थ आरम्भः ॥ ५६ ॥**

ಈ ರೀತಿಯಲ್ಲಿ ಮಹತ್ತಿನಿಂದ ಪೃಥಿವೀ ಪರ್ಯಂತವಾದ ವಿಶೇಷ ಸೃಷ್ಟಿಯನ್ನು ಪ್ರಕೃತಿಯೇ ಮಾಡಿದೆ (ಚೇತನನಾದ ಪುರುಷನಲ್ಲ). ಈ ಸೃಷ್ಟಿಯು ಪ್ರತಿಯೊಬ್ಬ ಪುರುಷನನ್ನು ಸಂಸಾರ ಬಂಧದಿಂದ ಬಿಡಿಸಿ ಮೋಕ್ಷವನ್ನು ದೊರಕಿಸಿಕೊಡುವುದಕ್ಕಾಗಿ ಪ್ರವರ್ತಿಸುತ್ತದೆ. ಮನುಷ್ಯನು ಸ್ವಾರ್ಥಕ್ಕಾಗಿ ಪ್ರಯತ್ನಿಸುವಂತೆ ಪರಾರ್ಥಕ್ಕಾಗಿಯೂ ಪ್ರವೃತ್ತಿಸುತ್ತಾನಷ್ಟೆ. ಹಾಗೆ ಪ್ರಕೃತಿಯು ಪರಾರ್ಥವಾಗಿ ಪ್ರವರ್ತಿಸುತ್ತದೆ.

**ಟಿಪ್ಪಣಿ:** ಗಡಿಗೆಯು ಪರರಿಗಾಗಿ ನೀರನ್ನು ತುಂಬಿಕೊಳ್ಳುತ್ತದೆ. ಅದಕ್ಕೆ ಸ್ವಾರ್ಥ ಏನೂ ಇಲ್ಲ. ಹಾಗೆ ಸೃಷ್ಟಿಕಾರ್ಯದಿಂದ ಪ್ರಕೃತಿಗೆ ಪ್ರಯೋಜನವೇನೂ ಇಲ್ಲ. ಅಚೇತನವಾದ ಪ್ರಧಾನವು ''ನಾನು ಶಬ್ದಾದಿ ವಿಷಯಗಳನ್ನು ಪುರುಷನಿಗೆ ಒಪ್ಪಿಸಬೇಕು. ಅನಂತರ ಅವುಗಳಿಂದ ಬಿಡುಗಡೆ ಮಾಡಿ ಮೋಕ್ಷವನ್ನು ಕೊಡಬೇಕು'' ಎಂದು ಚೇತನದಂತೆ ಪ್ರವರ್ತಿಸುವುದಾದರೂ ಹೇಗೆ ಎಂದರೆ –

**वत्सविवृद्धिनिमित्तं क्षीरस्य यथा प्रवृत्तिरज्ञस्य ।**
**पुरुषविमोक्षनिमित्तं तथा प्रवृत्तिः प्रधानस्य ॥ ५७ ॥**

ಹಸುವಿನ ಕರುವನ್ನು ಬೆಳೆಸುವುದಕ್ಕಾಗಿ ಜ್ಞಾನರಹಿತವಾದ ಹಾಲು ಹಸುವಿನ ಕೆಚ್ಚಲಿಂದ ಹೇಗೆ ಹರಿದು ಬರುವುದೋ ಹಾಗೆ, (ಮೊದಲು ಪುರುಷನಿಗೆ ಶಬ್ದಸ್ಪರ್ಶಾದಿಗಳನ್ನೊದಗಿಸಿ) ಅವನ ಮೋಕ್ಷಕ್ಕಾಗಿ ಪ್ರಧಾನವು ಪ್ರವರ್ತಿಸುತ್ತದೆ.

**ವಿವರಣೆ:** ಹಸು ತಿಂದ ಹುಲ್ಲು ಮೊದಲಾದ ಆಹಾರವು ಹಾಲಾಗಿ ಪರಿವರ್ತನೆಗೊಳ್ಳುತ್ತದೆ. ಅನಂತರ ಕರುವಿನ ಬೆಳವಣಿಗೆಗಾಗಿ ಕೆಚ್ಚಲಿನ ಮೂಲಕ ಹೊರಗೆ ಬರುತ್ತದೆ. ಕರು ಹಾಲನ್ನು ಕುಡಿದು ಬೆಳೆದ ಮೇಲೆ ಹಾಲು ಬರುವುದು ನಿಂತು ಹೋಗುತ್ತದೆ. ಅಚೇತನವಾದ ಹಾಲಿನಲ್ಲಿ ಈ ಪ್ರವೃತ್ತಿ ಕಂಡುಬರುತ್ತದೆ. ಹಾಗೆ ಪ್ರಧಾನವು ಅಚೇತನವಾಗಿದ್ದರೂ ಪುರುಷನಿಗಾಗಿ ಆಹಾರ, ಶಬ್ದ, ಸ್ಪರ್ಶಾದಿ ರೂಪಗಳನ್ನು ಪಡೆದು ಆತನನ್ನು ಬೆಳೆಸುತ್ತದೆ. ಅವನ ಮೋಕ್ಷಕ್ಕಾಗಿ ಮತ್ತೆ ತನ್ನ ವ್ಯಾಪಾರವನ್ನು ನಿಲ್ಲಿಸುತ್ತದೆ. ಕ್ಷೀರದಂತೆ ಪ್ರಧಾನವು ಅಚೇತನವಾದರೂ ಪ್ರವೃತ್ತಿ ನಿವೃತ್ತಿಗಳನ್ನು ಪಡೆದಿರುತ್ತದೆ.

**औत्सुक्यनिवृत्त्यर्थं यथा क्रियासु प्रवर्तते लोकः ।**
**पुरुषस्य विमोक्षार्थं प्रवर्तते तद्वदव्यक्तम् ॥ ५८ ॥**

ಜನರು ತಮ್ಮ ಕುತೂಹಲವನ್ನು ತೀರಿಸಿಕೊಳ್ಳುವುದಕ್ಕಾಗಿ ಹೇಗೆ ಕಾರ್ಯದಲ್ಲಿ ತೊಡಗುತ್ತಾರೋ, ಕುತೂಹಲವು ಮುಗಿದ ಮೇಲೆ ಹೇಗೆ ಹಿಂತಿರುಗುತ್ತಾರೋ, ಹಾಗೆಯೇ ಪ್ರಕೃತಿಯೂ ಸಹ ತನ್ನ ಕುತೂಹಲವನ್ನು ನಿವರ್ತಿಸಿಕೊಂಡು ಪುರುಷನ ಮೋಕ್ಷಕ್ಕಾಗಿ ಪ್ರಯತ್ನಿಸುತ್ತದೆ.

**ವಿವರಣೆ:** ಮಹತತ್ತ್ವದಿಂದ ಹಿಡಿದು ಪಂಚಮಹಾಭೂತಗಳ ವರೆಗಿನ ಕಾರ್ಯವು ಪುರುಷನಿಗೆ ಸುಖದುಃಖಗಳನ್ನುಂಟು ಮಾಡಬೇಕೆಂಬುದು ಪ್ರಕೃತಿಯ ಕುತೂಹಲ. ಈ ಕುತೂಹಲವು ನಿವೃತ್ತವಾದ ಮೇಲೆ ಪುರುಷನನ್ನು ಬಿಡುಗಡೆ ಮಾಡಬೇಕೆಂದು ತಾನು ಹಿಂದಕ್ಕೆ ಸರಿದು ಬಿಡುತ್ತದೆ.

**रङ्गस्य दर्शयित्वा निवर्तते नर्तकी यथा नृत्यात् ।**
**पुरुषस्य तथाऽऽत्मानं प्रकाश्य विनिवर्तते प्रकृतिः ॥ ५९ ॥**

ನರ್ತಕಿಯು ರಂಗಸ್ಥಳದಲ್ಲಿ ಶೃಂಗಾರಾದಿ ರಸಗಳಿಂದಲೂ, ಇತಿಹಾಸಾದಿ ಕಥಾ ಭಾವಗಳಿಂದಲೂ ಕೂಡಿದ ಗೀತ ವಾದ್ಯ ಮುಂತಾದವುಗಳನ್ನು ತೋರಿಸಿ ನೃತ್ಯಮಾಡಿ ಹೇಗೆ ಹೊರಟು ಹೋಗುವಳೋ ಹಾಗೆಯೇ ಪ್ರಕೃತಿಯು ಬುದ್ಧಿ, ಅಹಂಕಾರ, ತನ್ಮಾತ್ರೆ, ಇಂದ್ರಿಯ, ಮಹಾಭೂತಗಳ ವೈಭವವನ್ನು ತೋರಿಸಿ ಹಿಂದಕ್ಕೆ ಸರಿಯುತ್ತದೆ.

**नानाविधैरुपायैरुपकारिण्यनुपकारिणः पुंसः ।**
**गुणवत्यगुणस्य सतस्तस्यार्थमपार्थकं चरति ॥ ६० ॥**

ಈ ಪ್ರಕಾರವಾಗಿ ಪ್ರಕೃತಿಯು ಅನೇಕ ಬಗೆಯ ಉಪಾಯಗಳಿಂದ ಉಪಕಾರ ಮಾಡದ ಪುರುಷನಿಗೆ ಉಪಕಾರ ಮಾಡುತ್ತದೆ. ಪ್ರಕೃತಿಯು ಗುಣಶೀಲವಾದದ್ದು, ಗುಣಹೀನನಾದ ಪುರುಷನಿಗೆ ಪ್ರಯೋಜನವಿಲ್ಲದೆಯೇ ಪುರುಷಾರ್ಥವನ್ನು ಸಾಧಿಸಿಕೊಡುತ್ತದೆ.

**ವಿವರಣೆ:** ದೇವ ಮನುಷ್ಯ ತಿರ್ಯಗ್ ಭಾವ, ಸುಖದುಃಖ ಮೋಹಾತ್ಮಕವಾಗಿರುವುದು, ಶಬ್ದಸ್ಪರ್ಶಾದಿ ವಿಷಯರೂಪವಾಗಿರುವುದು – ಇವು ಪ್ರಕೃತಿಯು ಅನುಸರಿಸುವ ಉಪಾಯಗಳು. ಬುದ್ಧಿ ಇತ್ಯಾದಿ ಪರಿಣಾಮಗಳೇ ಪ್ರಕೃತಿಯ ಗುಣಗಳು. ಗುಣವಂತನೂ ಪರೋಪಕಾರಿಯೂ ಆದ ಮನುಷ್ಯನು ಗುಣಹೀನನೂ ಉಪಕಾರ ಮಾಡದವನೂ ಆದ ಇನ್ನೊಬ್ಬನಿಗೆ ಫಲಾಪೇಕ್ಷೆಯಿಲ್ಲದೇ ಹೇಗೆ ಉಪಕಾರ ಮಾಡುತ್ತಾನೋ ಹಾಗೆಯೇ ಪ್ರಕೃತಿಯು ಪುರುಷನಿಗೆ ಉಪಕಾರ ಮಾಡುತ್ತದೆಯೆಂದು ತಾತ್ಪರ್ಯ. ಗುಣ ಶಬ್ದಕ್ಕೆ ಶ್ಲೇಷದಿಂದ ಅರ್ಥದ್ವಯವಿದೆ. ಗುಣವತೀ = ಸದ್ಗುಣ ಶೀಲೆ – ಸತ್ವಾದಿ ಗುಣತ್ರಯವುಳ್ಳವಳು. ಅಗುಣ-ಸದ್ಗುಣರಹಿತ- ಸತ್ವಾದಿಗುಣತ್ರಯ ರಹಿತ.

**प्रकृतेः सुकुमारतरं न किञ्चिदस्तीति मे मतिर्भवति ।**
**या दृष्टास्मीति पुनर्न दर्शनमुपैति पुरुषस्य ॥ ६१ ॥**

ಪ್ರಕೃತಿಗಿಂತ ಹೆಚ್ಚು ಕೋಮಲ ಸ್ವಭಾವದ ಇನ್ನೊಂದು ವಸ್ತು ಇಲ್ಲವೆಂದು ನನಗೆ ತೋರುತ್ತದೆ. ಏಕೆಂದರೆ ''ನಿನ್ನನ್ನು ನೋಡಿದ್ದಾಯಿತು'' ಎಂದು ಹೇಳಿದೊಡನೆ ಅದು ಪುರುಷನ ಕಣ್ಣಿಗೆ ಕಾಣದಂತೆ ಹೊರಟು ಹೋಗುತ್ತದೆ !

**ವಿವರಣೆ:**

**ಅಜ್ಞೋ ಜಂತುರನೀಶೋಽಯಮಾತ್ಮನಃ ಸುಖದುಃಖಯೋಃ ।**

**ಈಶ್ವರಪ್ರೇರಿತೋ ಗಚ್ಛೇತ್ ಸ್ವರ್ಗಂ ನರಕಮೇವ ವಾ ॥**

ಎಂದು ಮಹಾಭಾರತದಲ್ಲೊಂದು ಶ್ಲೋಕವಿದೆ. ಜೀವಾತ್ಮನ ಸುಖದುಃಖಗಳಿಗೆ ಈಶ್ವರನೇ ಕಾರಣನೆಂದು ಅಭಿಪ್ರಾಯ. ಇದು ಈಶ್ವರಕಾರಣತಾ ವಾದ. ಸ್ವಭಾವಕಾರಣತಾವಾದಿಗಳು –

**ಕೇನ ಶುಕ್ಲೀಕೃತಾ ಹಂಸಾ ಮಯೂರಾಃ ಕೇನ ಚಿತ್ರಿತಾಃ ।**

ಹಂಸಗಳನ್ನು ಬೆಳ್ಳಗೆ ಮಾಡಿದವರು ಯಾರು ? ನವಿಲುಗಳನ್ನು ಚಿತ್ರವರ್ಣವುಳ್ಳವುಗಳನ್ನಾಗಿ ಮಾಡಿದವರು ಯಾರು ? ಈ ವಿಷಯದಲ್ಲಿ ಸಾಂಖ್ಯಾಚಾರ್ಯರು ಹೀಗೆ ಹೇಳುತ್ತಾರೆ: –

ಈಶ್ವರನು ನಿರ್ಗುಣ. ಅವನಿಂದ ಸಗುಣರಾದ ಜನರು ಹೇಗೆ ಹುಟ್ಟುತ್ತಾರೆ ? ಆದ್ದರಿಂದ ಪ್ರಕೃತಿಯೆಂಬುದೊಂದಿದೆ. ಅದು ಸಗುಣ ಎಂದು ಒಪ್ಪಬೇಕು. ಬಿಳಿಯ ನೂಲುಗಳಿಂದ ಬಿಳಿಯ ಬಟ್ಟೆಗಳು ಹೇಗೋ, ಕರಿಯ ನೂಲುಗಳಿಂದ ಕರಿಯ ಬಟ್ಟೆಯು ಹೇಗೋ ಹಾಗೆಯೇ ಸಗುಣವಾದ ಪ್ರಕೃತಿಯಿಂದ ಸಗುಣವಾದ ಲೋಕವು ಹುಟ್ಟಿದೆ. ಇನ್ನು ಕೆಲವರು ಕಾಲವು ಕಾರಣವೆನ್ನುತ್ತಾರೆ. ವ್ಯಕ್ತವಾದ ಕಾಲವು ಅವ್ಯಕ್ತವಾದ ಪ್ರಕೃತಿಯಿಂದಲೇ ಹುಟ್ಟಿದೆ. ಆದ್ದರಿಂದ ಜಗತ್ತಿಗೆ ಪ್ರಕೃತಿಯೇ ಕಾರಣ. ಪುರುಷನಲ್ಲ. ಇದು ಸಾಂಖ್ಯರ ಸಿದ್ಧಾಂತ.

**तस्मान्न बध्यते नापि मुच्यते नापि संसरति कश्चित् ।**
**संसरति बध्यते मुच्यते च नानाश्रया प्रकृतिः ॥ ६२ ॥**

ಆದ್ದರಿಂದ ಯಾವ ಪುರುಷನೂ ಸಂಸಾರ ಬಂಧಕ್ಕೆ ಒಳಗಾಗುವುದಿಲ್ಲ, ಮುಕ್ತನಾಗುವುದೂ ಇಲ್ಲ. ಸಂಸಾರ ಮಾಡುವುದೂ ಇಲ್ಲ. ನಾನಾ ಪುರುಷರನ್ನು ಆಶ್ರಯಿಸಿರುವ ಪ್ರಕೃತಿಯೇ ಸಂಸಾರಕ್ಕೆ ಒಳಗಾಗಿದೆ. ಅದೇ ಬಂಧಕ್ಕೆ ಒಳಗಾಗಿದೆ ಮತ್ತು ಬಂಧನದಿಂದ ಬಿಡುಗಡೆ ಹೊಂದುತ್ತದೆ.

ಪುರುಷನಾದರೋ ಸಹಜವಾಗಿಯೇ ಮುಕ್ತನಾಗಿರುತ್ತಾನೆ ಮತ್ತು ಸರ್ವವ್ಯಾಪಿಯಾಗಿರುತ್ತಾನೆ. ಸಂಸಾರವೆಂದರೆ ಹೊಸದಾಗಿ ಬಂದು ಸೇರುವುದು. ಸರ್ವಗತನಾದ ಆತನಿಗೆ ಯಾವುದು ಹೊಸದಾಗಿ ಬಂದು ಸೇರುತ್ತದೆ ? ಆದ್ದರಿಂದ ಪುರುಷನು ಬದ್ಧ, ಮುಕ್ತ ಎಂಬುದು ಯುಕ್ತವಲ್ಲ. ಅನ್ಯ

ವಸ್ತುವಿದೆಯೆಂದು ಅವನಿಗೆ ವ್ಯಕ್ತವಾಗುತ್ತದೆ ಮತ್ತು ಪ್ರಕೃತಿಯು ತನಗೆ ಸಂಬಂಧಿಸಿದ್ದಲ್ಲ ಎಂದು ತಿಳಿಯುತ್ತದೆ. ಅಷ್ಟು ಮಾತ್ರದಿಂದ ಬದ್ಧ ಮುಕ್ತ ಮುಂತಾದ ವ್ಯವಹಾರ ಬಂದಿದೆ.

ವಸ್ತುತಃ ಬಂಧವಿರುವುದು ಪ್ರಕೃತಿಗೆ ಮಾತ್ರ. ಅದು ತನ್ನನ್ನು ಬಂಧಿಸಿಕೊಳ್ಳುತ್ತದೆ. ಹಾಗೆಯೇ ಮೋಕ್ಷಗೊಳಿಸಿಕೊಳ್ಳುತ್ತದೆ. ಪ್ರಕೃತಿಯು ತಾನೇ ಸೂಕ್ಷ್ಮ ಶರೀರವಾಗಿ ತನ್ನನ್ನು ಮೂರು ವಿಧದಲ್ಲಿ ಬಂಧಿಸಿಕೊಳ್ಳುತ್ತದೆ. ಅನ್ಯತ್ರ ಹೀಗೆ ಉಕ್ತವಾಗಿದೆ.

**प्राकृतेन च बन्धेन तथा वैकारिकेण च ।**
**दाक्षिणेन तृतीयेन बद्धो नान्येन मुच्यते ॥**

ಪುರುಷನು ಪ್ರಕೃತಿಯ ಸ್ವಭಾವದಿಂದಲೂ, ಪ್ರಕೃತಿಯ ವಿಕಾರವಾದ ಮಹದಾದಿಗಳಿಂದಲೂ, ಅನಂತರ ಮಾಡುವ ತನ್ನ ಕರ್ಮಗಳಿಂದಲೂ ಬದ್ಧನಾಗಿರುತ್ತಾನೆ. ಇನ್ನೊಬ್ಬನಿಂದ ಬಿಡುಗಡೆ ಹೊಂದುವುದೂ ಇಲ್ಲ. (ಪ್ರಕೃತಿಯು ತಾನೇ ಬಿಡುಗಡೆ ಹೊಂದುತ್ತದೆ.)

**रूपैः सप्तभिरेव तु बन्धात्यात्मानमात्मना प्रकृतिः ।**
**सैव च पुरुषार्थं प्रति विमोचयत्येकरूपेण ॥ ६३ ॥**

ಪ್ರಕೃತಿಯು ತನ್ನ ಏಳು ಸ್ವರೂಪಗಳಿಂದ ತನ್ನನ್ನು ತಾನೇ ಬಂಧಿಸಿಕೊಳ್ಳುತ್ತದೆ. ಅನಂತರ ಪುರುಷನನ್ನು, ಪುರುಷನ ಉಪಕಾರಕ್ಕಾಗಿ ಏಕರೂಪವಾದ ಜ್ಞಾನದಿಂದ ತನ್ನನ್ನು ಬಿಡುಗಡೆ ಮಾಡಿಸಿಕೊಳ್ಳುತ್ತದೆ.

ವಿವರಣೆ: ಧರ್ಮ, ವೈರಾಗ್ಯ, ಐಶ್ವರ್ಯ, ಅಧರ್ಮ, ಅಜ್ಞಾನ, ಅವೈರಾಗ್ಯ, ಅನೈಶ್ವರ್ಯ ಇವು ಏಳು ರೂಪಗಳು.

**एवं तत्त्वाभ्यासान्नास्मि न मे नाहमित्यपरिशेषम् ।**
**अविपर्ययाद्विशुद्धं केवलमुत्पद्यते ज्ञानम् ॥ ६४ ॥**

ಈ ಪ್ರಕಾರವಾಗಿ ಪಂಚವಿಂಶತಿ ತತ್ತ್ವಗಳನ್ನು ಮತ್ತೆ ಮತ್ತೆ ಪರಿಶೀಲಿಸುವುದರಿಂದ 'ನಾನು ಪ್ರಕೃತಿಯಲ್ಲ, ಇದು ನನ್ನದಲ್ಲ, ನಾನು ಅಹಂಕಾರರಹಿತನಾದ ಪುರುಷ' ಎಂದು ಸರ್ವಸಂಬಂಧರಹಿತವಾದ ಶುದ್ಧ ಜ್ಞಾನವು ಉತ್ಪನ್ನವಾಗುತ್ತದೆ.

**ಟಿಪ್ಪಣಿ:** ಅವಿಪರ್ಯಯ = ಸಂಶಯರಹಿತ, ಅಪರಿಶೇಷ = ಅಹಂಕಾರರಹಿತ.

**तेन निवृत्तप्रसवामर्थवशात् सप्तरूपविनिवृत्ताम् ।**
**प्रकृतिं पश्यति पुरुषः प्रेक्षकवदवस्थितः स्वस्थः ॥ ६५ ॥**

ಆ ಶುದ್ಧ ಜ್ಞಾನದಿಂದ ಬುದ್ಧಿ, ಅಹಂಕಾರ ಮುಂತಾದ ಕಾರ್ಯವನ್ನು ಮಾಡುವ ಪ್ರಕೃತಿಯನ್ನು ಸ್ವಸ್ಥನಾದ ಪುರುಷನು ಸುಮ್ಮನೇ ನೋಡುತ್ತಾ ಇರುತ್ತಾನೆ. ಪ್ರಕೃತಿಯು ಹಿಂದೆ ಹೇಳಿದ ಏಳು ಭಾವಗಳಿಂದಲೂ ನಿವೃತ್ತವಾಗಿರುವುದು. ನಿವೃತ್ತವಾಗುವುದಕ್ಕೆ ತನ್ನ ಕಾರ್ಯದ ಉದ್ದೇಶವು ನೆರವೇರಿರುವುದೇ ಕಾರಣ, ಪುರುಷನಾದರೋ ರಂಗಸ್ಥಳದ ಎದುರಿನಲ್ಲಿ ಕುಳಿತ ಪ್ರೇಕ್ಷಕನಂತೆ ತಟಸ್ಥನಾಗಿರುತ್ತಾನೆ.

**रङ्गस्थ इत्युपेक्षक एको दृष्टाहमित्युपरमत्येका ।**
**सति संयोगेऽपि तयोः प्रयोजनं नास्ति सर्गस्य ॥ ६६ ॥**

ಒಬ್ಬನು ಉಪೇಕ್ಷೆಯಿಂದ ರಂಗಸ್ಥಳದಲ್ಲಿ ಕುಳಿತಿರುವನು. ಒಬ್ಬಳು ನನ್ನನ್ನು ನೋಡಿದ್ದಾಯಿತೆಂದು ನಾಟ್ಯವನ್ನು ನಿಲ್ಲಿಸುವಳು. ಅವರಿಬ್ಬರಿಗೂ ಪರಸ್ಪರ ಸಂಯೋಗವಿದ್ದರೂ ಸೃಷ್ಟಿಗೆ ಯಾವ ಪ್ರಯೋಜನವೂ ಇರುವುದಿಲ್ಲ.

**ವಿವರಣೆ:** ನರ್ತನವನ್ನು ನೋಡಿದ ಮೇಲೂ ಒಬ್ಬನು ಅಲ್ಲಿ ಕುಳಿತೇ ಇರಬಹುದು. ಹಾಗೆಯೇ ಪುರುಷನು ರಂಗಸ್ಥಳದಲ್ಲಿ ಸುಮ್ಮನೇ ಕುಳಿತಿರುತ್ತಾನೆ. ಅವನಿಗೆ ನರ್ತನದಿಂದ ಯಾವ ಪ್ರಯೋಜನವೂ ಇಲ್ಲ. ನರ್ತಕಿಯು ತನ್ನ ನರ್ತನವನ್ನು ಆತನು ನೋಡಿದ್ದಾನೆಂದು ತಿಳಿದು ಅನ್ಯ ಪುರುಷರಿಗಾಗಿ ನರ್ತಿಸುತ್ತಿರುತ್ತಾಳೆ. ಹಾಗೆಯೇ ಸೃಷ್ಟಿಯ ಕಾರ್ಯವು ಅನ್ಯರಿಗಾಗಿ (ಬದ್ಧರಿಗಾಗಿ) ನಡೆಯುತ್ತಿರುತ್ತದೆ. ಮುಕ್ತ ಪುರುಷನಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ.

**सम्यग्ज्ञानाधिगमाद्धर्मादीनामकारणप्राप्तौ ।**
**तिष्ठति संस्कारवशाच्चक्रभ्रमवद्धृतशरीरः ॥ ६७ ॥**

ಪಂಚವಿಂಶತಿ ತತ್ತ್ವಗಳ ತತ್ತ್ವಜ್ಞಾನವಾದ್ದರಿಂದ ಧರ್ಮಾದಿ ಭಾವಗಳಿಗೆ ಕಾರಣವೇನೂ ಇಲ್ಲದಿದ್ದರೂ ಮುಕ್ತನಾದವನು ಶರೀರಧಾರಿಯಾಗಿರುತ್ತಾನೆ. ಇದಕ್ಕೆ ಹಿಂದಿನಿಂದ ಬಂದ ಸಂಸ್ಕಾರವೇ ಕಾರಣ. ಹೇಗೆಂದರೆ, ಮಣ್ಣಿನ ಉಂಡೆಯನ್ನು ಕುಂಬಾರನು ತನ್ನ ಚಕ್ರದ ಮೇಲಿಟ್ಟು ಗಡಿಗೆಯನ್ನು ಮಾಡಿ

ತೆಗೆದರೂ ಚಕ್ರವು ಸ್ವಲ್ಪ ಹೊತ್ತು ತಿರುಗುತ್ತಲೇ ಇರುವುದು. ಹಾಗೆಯೇ ಮುಕ್ತನ ಶರೀರವೂ ಸ್ವಲ್ಪ ಕಾಲ ಇರುವುದು.

**प्राप्ते शरीरभेदे चरितार्थत्वात् प्रधानविनिवृत्तौ ।**
**ऐकान्तिकमात्यन्तिकमुभयं कैवल्यमाप्नोति ॥ ६८ ॥**

ಧರ್ಮಾಧರ್ಮಗಳಿಂದ ಉಂಟಾದ ಸಂಸ್ಕಾರವು ಕ್ಷಯಿಸಿದ ಮೇಲೆ ಶರೀರವು ನಾಶವಾಗುತ್ತದೆ. ಆಗ ಚರಿತಾರ್ಥವಾದ್ದರಿಂದ ಪ್ರಕೃತಿಯು ತನ್ನ ಆಟಗಳಿಂದ ನಿವೃತ್ತವಾಗುವುದು. ಪುರುಷನು ಅವಶ್ಯವೂ ಸಹಜವೂ ಆದ ಕೈವಲ್ಯವನ್ನು ಪಡೆಯುತ್ತಾನೆ.

**पुरुषार्थज्ञानमिदं गुह्यं परमर्षिणा समाख्यातम् ।**
**स्थित्युत्पत्तिप्रलयाश्चिन्त्यन्ते यत्र भूतानाम् ॥ ६९ ॥**

ಪುರುಷಾರ್ಥವಾದ ಮೋಕ್ಷವನ್ನುಂಟುಮಾಡುವ ಗೋಪ್ಯವಾದ ಜ್ಞಾನಸ್ವರೂಪ ಇದು. ಕಪಿಲ ಮಹರ್ಷಿಗಳು ಇದನ್ನು ತಿಳಿಸಿಕೊಟ್ಟಿದ್ದಾರೆ. ಇದರಲ್ಲಿ ಸಕಲಪ್ರಾಣಿಗಳ ಸ್ಥಿತಿ, ಉತ್ಪತ್ತಿ, ಲಯಗಳನ್ನು ವಿಚಾರಿಸಲಾಗಿದೆ. ಇದನ್ನು ವಿಮರ್ಶಿಸಿ ತಿಳಿದುಕೊಳ್ಳುವುದರಿಂದ ಪಂಚವಿಂಶತಿ ತತ್ತ್ವಗಳ ಜ್ಞಾನವು ಸಮೀಚೀನವಾಗಿ ಗೊತ್ತಾಗುತ್ತದೆ.

**सांख्यं कपिलमुनिना प्रोक्तं संसार विमुक्तिकारणं हि ।**
**यत्रैवता: सप्ततिरार्या भाष्यं चात्र गौडपादकृतम् ॥**

ಸಂಸಾರದಿಂದ ಮುಕ್ತಿಯನ್ನು ಪಡೆಯಲು ಕಾರಣವಾದ ಈ ಸಾಂಖ್ಯ ಶಾಸ್ತ್ರವು ಕಪಿಲಮುನಿಗಳಿಂದ ಉಕ್ತವಾಗಿದೆ. ಇದನ್ನು ವಿವರಿಸುವುದಕ್ಕಾಗಿ ಎಪ್ಪತ್ತು ಆರ್ಯಾವೃತ್ತಗಳು (ಈಶ್ವರಕೃಷ್ಣನಿಂದ) ರಚಿತವಾಗಿವೆ. ಶ್ರೀ ಗೌಡಪಾದಕೃತವಾದ ಭಾಷ್ಯವು ಇಲ್ಲಿಗೆ ಸಮಾಪ್ತವಾಯಿತು.

**एतत्पवित्रमग्रयं मुनिरासुरयेऽनुकम्पया प्रददौ ।**
**आसुरिरपि पञ्चशिखाय तेन च बहुधा कृतं तन्त्रम् ॥ ७० ॥**

ಪವಿತ್ರವೂ ಶ್ರೇಷ್ಠವೂ ಆದ ಈ ಜ್ಞಾನವನ್ನು ಕಪಿಲ ಮುನಿಗಳು ಕೃಪೆಯಿಂದ ಆಸುರಿ ಎಂಬ ಶಿಷ್ಯನಿಗೆ ಉಪದೇಶಿಸಿದರು. ಆಸುರಿಯು ಪಂಚಶಿಖನಿಗೆ

ತಿಳಿಸಿಕೊಟ್ಟನು. ಆ ಪಂಚಶಿಖನು ಈ ಶಾಸ್ತ್ರವನ್ನು ಬಹುಪ್ರಕಾರವಾಗಿ ವಿಸ್ತರಿಸಿ ಬರೆದನು.

**ಟಿಪ್ಪಣಿ:** ಆಸುರಿ ಮತ್ತು ಪಂಚಶಿಖ ಎಂಬವರು ಯಾರು ? ಎಂಬ ವಿಷಯವಾಗಿ ಏನೂ ತಿಳಿದು ಬರುವುದಿಲ್ಲ.

**शिष्यपरम्परयाऽऽगतमीश्वरकृष्णेन चैतदार्याभिः ।**
**संक्षिप्तमार्यमतिना सम्यग्विज्ञाय सिद्धान्तम् ॥ ७१ ॥**

ಈ ಸಾಂಖ್ಯಶಾಸ್ತ್ರವು ಶಿಷ್ಯಪರಂಪರೆಯಿಂದ ಮುಂದುವರಿಯಿತು. ಈಶ್ವರಕೃಷ್ಣನು ಈ ಶಾಸ್ತ್ರದ ಸಿದ್ಧಾಂತವನ್ನು ಸರಿಯಾಗಿ ತಿಳಿದುಕೊಂಡು ಈ ಆರ್ಯಾವೃತ್ತಗಳಿಂದ ಶುದ್ಧಬುದ್ಧಿಯಿಂದಲೇ ಸಂಕ್ಷೇಪಿಸಿ ಬರೆದಿದ್ದಾನೆ.

**सप्तत्यां किल येऽर्थास्तेऽर्थाः कृत्स्नस्य षष्टितन्त्रस्य ।**
**आख्यायिकाविरहिताः परवादविवर्जिताश्चापि ॥ ७२ ॥**

ಈ ಎಪ್ಪತ್ತು ಆರ್ಯಾವೃತ್ತಗಳಲ್ಲಿ ಹೇಳಿದ ವಿಷಯಗಳು ಅರವತ್ತು ವಿಚಾರಗಳಿಂದ ಕೂಡಿದ ಷಷ್ಟಿತಂತ್ರವೆಂಬ ಶಾಸ್ತ್ರಗ್ರಂಥದ ವಿಚಾರಗಳನ್ನು ಒಳಗೊಂಡಿದೆ. ಇದರಲ್ಲಿ ಆಖ್ಯಾಯಿಕೆಗಳಾಗಲಿ ಅನ್ಯ ಶಾಸ್ತ್ರಗಳ ವಾದಗಳಾಗಲೀ ಇಲ್ಲ.


**तस्मात्समासदृष्टं शास्त्रमिदं नार्थतश्च परिहीनम् ।**
**तन्त्रस्य च बृहन्मूर्तेर्दर्पणसंक्रान्तमिव बिम्बम् ॥ ७३ ॥**

ಆದ್ದರಿಂದ ಇಲ್ಲಿ ಹೇಳಿದ ಈ ಶಾಸ್ತ್ರಗ್ರಂಥವು ಸಂಕ್ಷಿಪ್ತವಾಗಿದೆ. ಆದರೂ ತಿಳಿಯಬೇಕಾದ ಯಾವ ವಿಷಯವನ್ನೂ ಬಿಟ್ಟಿಲ್ಲ. ಅತಿವಿಸ್ತಾರವಾದ ಈ ಶಾಸ್ತ್ರದ ಈ ಸಂಗ್ರಹವು ದೊಡ್ಡ ಆಕಾರದ ಒಂದು ಶಿಲಾಮೂರ್ತಿಯನ್ನು ಕನ್ನಡಿಯಲ್ಲಿ ತೋರಿಸುವ ಪ್ರತಿಬಿಂಬದಂತೆ ಪರಿಮಿತವಾಗಿದೆ.

**॥ समाप्त इमाः सगौडपादभाष्याः सांख्यकारिकाः ॥**

**ಇತೀ ಶ್ರೀ ಗೌಡಪಾದವಿರಚಿತ ಭಾಷ್ಯಸಹಿತಾ**

**ಸಾಂಖ್ಯಕಾರಿಕಾ ಸಮಾಪ್ತಾ।**



ಮಧ್ಯಪ್ರದೇಶ ರಾಜ್ಯದ ನರ್ಮದಾ ನದಿ ತೀರದ ಓಂಕಾರೇಶ್ವರ ದೇವಾಲಯದ
ಬಳಿಯಿರುವ ಗೌಡಪಾದ ಗುಹಾ.

# ಅನುಬಂಧ

೧) ಕಾರಿಕೆ ೧ – ದುಃಖತ್ರಯಾಭಿಘಾತಾತ್...

**ಭಾಷ್ಯ – ಸನಕಶ್ಚ ಸನಂದನಶ್ಚ ತೃತೀಯಶ್ಚ ಸನಾತನಃ ।**
**ಆಸುರಿಃ ಕಪಿಲಶ್ಚೈವ ವೋಢುಃ ಪಂಚಶಿಖಸ್ತಥಾ ।**
**ಇತ್ಯೇತೇ ಬ್ರಹ್ಮಣಃ ಪುತ್ರಾಃ ಸಪ್ತಪ್ರೋಕ್ತಾ ಮಹರ್ಷಯಃ ॥**

ಸನಕ, ಸನಂದನ, ಸನಾತನ, ಆಸುರಿ, ಕಪಿಲ, ವೋಢು, ಪಂಚಶಿಖ ಎಂಬ ಏಳು ಮಹರ್ಷಿಗಳು ಬ್ರಹ್ಮನ ಪುತ್ರರೆಂದು ಹೇಳಲಾಗಿದೆ. ಇವರಲ್ಲಿ ಕಪಿಲ ಮಹರ್ಷಿಯು ಜನಿಸುವಾಗಲೇ ಧರ್ಮ, ಜ್ಞಾನ, ವೈರಾಗ್ಯ, ಐಶ್ವರ್ಯ (ಅಷ್ಟ ಸಿದ್ಧಿಗಳು) – ಇವು ಆತನಿಗೆ ಸಹಜವಾಗಿ ಬಂದಿದ್ದವು. ಆತನು ತನ್ನೊಡನೆ ಹುಟ್ಟಿದ ಬ್ರಾಹ್ಮಣನಾದ ಆಸುರಿಗೆ ಪಂಚವಿಂಶತಿ ತತ್ತ್ವಗಳಿಂದ ಕೂಡಿದ ಈ ಸಾಂಖ್ಯದರ್ಶನವನ್ನು ಉಪದೇಶಿಸಿದನು. ಈ ತತ್ತ್ವಗಳನ್ನು ತಿಳಿದವನು ಸಂಸಾರ ದುಃಖದಿಂದ ಮುಕ್ತನಾಗುತ್ತಾನೆ. ಜನರು ಇದನ್ನರಿತು ಮುಕ್ತರಾಗಲಿ ಎಂಬುದೇ ಕಪಿಲ ಮಹರ್ಷಿಯ ಉದ್ದೇಶವಾಗಿತ್ತು.


ವೇದೋಕ್ತವಾದ ಅಶ್ವಮೇಧ ಯಾಗದಿಂದಲೇ ಮುಕ್ತಿಯು ದೊರೆಯುವಾಗ ಈ ಸಾಂಖ್ಯದರ್ಶನದಿಂದ ಏನಾಗಬೇಕು ? ವೇದದಲ್ಲಿ ಹೇಳಿದೆ – ಸ ಸರ್ವಾನ್ ಲೋಕಾನ್ ಜಯತಿ ಮೃತ್ಯುಂ ತರತಿ ಪಾಪಂ ತರತೀ ಬ್ರಹ್ಮಹತ್ಯ ತರತಿ ಯೋಽಶ್ವಮೇಧೇನ ಯಜತೇ – ಎಂದು. ''ಯಾವಾತನು ಅಶ್ವಮೇಧ ಯಾಗ ಮಾಡುತ್ತಾನೋ ಆತನು ಸಮಸ್ತ ಲೋಕಗಳನ್ನು ಗೆಲ್ಲುತ್ತಾನೆ. ಮರಣವನ್ನು ಜಯಿಸುತ್ತಾನೆ. ಪಾಪವನ್ನು ದಾಟುತ್ತಾನೆ, ಬ್ರಹ್ಮಹತ್ಯಾದೋಷವನ್ನು ಗೆಲ್ಲುತ್ತಾನೆ.'' ಹೀಗಿರುವಾಗ ಈ ದರ್ಶನದಿಂದ ಏನು ಪ್ರಯೋಜನ ? ಎಂದು ಪೂರ್ವಪಕ್ಷ ಇದಕ್ಕೆ ಉತ್ತರ ಎರಡನೆಯ ಕಾರಿಕೆಯಲ್ಲಿದೆ.

೨) ಸಾಂಖ್ಯಮತದಲ್ಲಿ ಜೀವನೆಂದರೆ ಯಾರು ? ಧರ್ಮಾಧರ್ಮಗಳಿಗೆ ಅನುಸಾರವಾಗಿ ಸುಖ-ದುಃಖಾದಿಗಳನ್ನು ಅನುಭವಿಸುತ್ತಾ ಸಂಸಾರದಲ್ಲಿ ತೊಳಲುತ್ತಿರುವವನು ಯಾರು ? ಎಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ ಸಾಂಖ್ಯರು ಹೇಳುವುದೇನೆಂದರೆ – ಮೂಲಪ್ರಕೃತಿಯು ಮಹತತ್ತ್ವಾದಿಗಳನ್ನು ಸೃಷ್ಟಿಸುವುದಕ್ಕೆ ಮೊದಲು ಆದಿಯಲ್ಲಿ ಒಂದೊಂದು ಜೀವಿಗೆ ಒಂದರಂತೆ ಸೂಕ್ಷ್ಮ ಶರೀರವನ್ನು ನಿರ್ಮಿಸುತ್ತದೆ. ಜೀವಿಗಳ ಸಂಖ್ಯೆ ಅನಂತವಾಗಿರುವುದರಿಂದ ಸೂಕ್ಷ್ಮ ಶರೀರಗಳೂ ಅನಂತವೇ ಆಗಿರುತ್ತವೆ. ಇದು ಶಿಲೆಯಲ್ಲಿಯೂ ಸಹ ನುಗ್ಗಿ ಹೋಗುವಷ್ಟು ಸೂಕ್ಷ್ಮವಾಗಿರುತ್ತದೆ. ಮಹಾ

ಪ್ರಳಯ ಪರ್ಯಂತವೂ ಇದು ಇರತಕ್ಕದ್ದು. ಮಹಾ ಪ್ರಳಯ ಕಾಲದಲ್ಲಿ ತನಗೆ ಕಾರಣವಾದ ಮೂಲಪ್ರಕೃತಿಯಲ್ಲಿ ಲೀನವಾಗುತ್ತದೆ. ಹೀಗೆ ಲೀನವಾಗುವುದರಿಂದ ಇದಕ್ಕೆ ಲಿಂಗಶರೀರವೆಂಬ ಹೆಸರೂ ಇದೆ. ಇದರಲ್ಲಿ ಮಹತ್ತತ್ತ್ವ, ಅಹಂಕಾರ, ಮನಸ್ಸು, ಪಂಚಜ್ಞಾನೇಂದ್ರಿಯಗಳು, ಪಂಚಕರ್ಮೇಂದ್ರಿಯಗಳು, ಪಂಚ ತನ್ಮಾತ್ರೆಗಳು – ಹೀಗೆ ಹದಿನೆಂಟು ತತ್ತ್ವಗಳ ಸಮೂಹವೇ ಲಿಂಗಶರೀರವೆನಿಸಿದೆ. ''ಸಪ್ತದಶೈಕಂ ಲಿಂಗಂ'' ಎಂದು ಸಾಂಖ್ಯ ಸೂತ್ರವಿದೆ. ಸಪ್ತದಶ ಮತ್ತು ಏಕ – ಹೀಗೆ ಹದಿನೆಂಟು ತತ್ತ್ವಗಳ ಸಮೂಹವೇ ಲಿಂಗಶರೀರ ಎಂದು ಅರ್ಥ. ಈ ಲಿಂಗದೇಹವು ಸ್ಥೂಲ ದೇಹವಿಲ್ಲದೇ ಯಾವ ಭೋಗವನ್ನೂ ಅನುಭವಿಸಲು ಅಸಮರ್ಥವಾಗಿರುತ್ತದೆ. ಇದು ಮರಣಕಾಲದಲ್ಲಿ ಸ್ಥೂಲ ಶರೀರವನ್ನು ತ್ಯಜಿಸಿ ಪುನರ್ಜನ್ಮವಾಗುವಾಗ ಮತ್ತೆ ಇನ್ನೊಂದು ಶರೀರವನ್ನು ಧರಿಸುತ್ತದೆ. ಈ ಪ್ರಕಾರವಾಗಿ ಹೊಸ ಹೊಸ ದೇಹಗಳನ್ನು ಧರಿಸಿ ಸುಖ-ದುಃಖಾದಿಗಳನ್ನು ಅನುಭವಿಸುವುದೇ ಸಂಸಾರ. ಈ ಸೂಕ್ಷ್ಮ ಶರೀರವೇ ಭೋಗಾಯತನವೆನಿಸಿದೆ.

ನೈಯಾಯಿಕಾದಿಗಳು ಧರ್ಮಾಧರ್ಮಾದಿ ಸಂಸ್ಕಾರಗಳು ಜೀವಾತ್ಮನಲ್ಲಿ ಇರುತ್ತವೆಯೆನ್ನುತ್ತಾರೆ. ಸಾಂಖ್ಯಮತವು ಮಹತತ್ತ್ವವೆಂಬ ಬುದ್ಧಿಯಲ್ಲಿ ಈ ಸಂಸ್ಕಾರಗಳು ನೆಲೆಸಿರುತ್ತವೆಯೆಂದು ಹೇಳುತ್ತಾರೆ. ಬುದ್ಧಿಯು ಸೂಕ್ಷ್ಮ ಶರೀರದ ಒಂದು ಅಂಗವೇ ಆದುದರಿಂದ ಜನ್ಮಾಂತರದಲ್ಲಿ ಈ ಸಂಸ್ಕಾರಗಳು ಸೂಕ್ಷ್ಮ ಶರೀರದೊಡನೆ ಬಂದು ಫಲವನ್ನು ಕೊಡುತ್ತವೆ. ಆದ್ದರಿಂದ ಯಾವ ಅನುಪಪತ್ತಿಯೂ ಇಲ್ಲ.


ಮಹಾಪ್ರಳಯದಲ್ಲಿ ಸೂಕ್ಷ್ಮ ಶರೀರವು ಏಕೆ ಲಯವನ್ನು ಹೊಂದುತ್ತದೆ ? ಯಾವುದು ಹೊಸದಾಗಿ ಹುಟ್ಟುವುದೋ ಅದು ಲಯವನ್ನು ಹೊಂದುತ್ತದೆ ಎಂಬುದು ಸಾರ್ವತ್ರಿಕವಾದ ನಿಯಮ, ಲಿಂಗಶರೀರವು ಪ್ರಕೃತಿಯಿಂದ ಹುಟ್ಟುವುದರಿಂದ ಅದು ಲಯವನ್ನು ಹೊಂದಲೇ ಬೇಕು ಎಂಬುದೇ ಇದಕ್ಕೆ ಉತ್ತರ. ಪ್ರತಿಯೊಂದು ಲಿಂಗಶರೀರಕ್ಕೂ ಚೈತನ್ಯವನ್ನು ನೀಡುವ ಚೇತನನಾದ ಪುರುಷನಿರುತ್ತಾನೆ. ಪುರುಷಾಧಿಷ್ಠಿತವಾದ ಲಿಂಗಶರೀರವೇ ಜೀವ ಎಂದು ಹೇಳಬೇಕು.













































**ನಮ್ಮ ಸಂಸ್ಥೆಯಿಂದ ಪ್ರಕಾಶಿತವಾದ ಇತರ ಪುಸ್ತಕಗಳು**